ಗುರುವಾರ, ಮೇ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 143 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಗಡಿಭಾಗದಲ್ಲಿ ರಸ್ತೆ ನಿರ್ಮಿಸುವ 'BRO'



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,221	22,597	₹76,560 (ಬೆಂಗಳೂರು)	₹95,700 (ಬೆಂಗಳೂರು)	83.29

ಪ್ರಚಾರದಲ್ಲಿ ಒಡಕಿನ ಮಾತಿಗಾಗಿ ಬಿಜೆಪಿ, ಕಾಂಗ್ರೆಸ್ ಅಧ್ಯಕ್ಷರ ಕಿವಿಹಿಂಡಿದ ಚುನಾವಣಾ ಆಯೋಗ

'ವಿಭಜನಕಾರಿ ಮಾತು ಸಾಕು'

'ಚುನಾವಣೆ ಎಂಬುದು ಕಾಲಕಾಲಕ್ಕೆ ನಡೆಯುವ ಒಂದು ಪ್ರಕ್ರಿಯೆ. ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಆದರೆ ನಿಮ್ಮಂತಹ ರಾಜಕೀಯ ಪಕ್ಷಗಳು ಬಹುಕಾಲ ಉಳಿದುಕೊಳ್ಳುತ್ತವೆ. ಅದಕ್ಕಿಂತ ಹೆಚ್ಚುಕಾಲ ಉಳಿದುಕೊಳ್ಳುವುದು ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರ' ಎಂಬ ಹಿತವಚನವನ್ನು ದೇಶದ ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ಸಿಗೆ ಹೇಳಿರುವ ಚುನಾವಣಾ ಆಯೋಗವು, ಸಮಾಜವನ್ನು ಒಡೆಯುವ ಮಾತುಗಳನ್ನು ಆಡಬೇಡಿ ಎಂದು ತಾಕೀತು ಮಾಡಿದೆ

ಇನ್ನಷ್ಟು ಸುದ್ದಿಗಳು 11

ಬಿಜೆಪಿಗೆ ಆಯೋಗದ ನಿರ್ದೇಶನಗಳು

- ಸಮಾಜವನ್ನು ಒಡೆಯುವಂತಹ ಯಾವುದೇ ಭಾಷಣ ಮಾಡದಂತೆ, ಹೇಳಿಕೆ ನೀಡದಂತೆ ಪಕ್ಷದ ಅಧ್ಯಕ್ಷರಾಗಿ ನೀವು ತಾರಾ ಪ್ರಚಾರಕರಿಗೆ ಸೂಚನೆ ನೀಡಬೇಕು.
- ಧಾರ್ಮಿಕ ಹಾಗೂ ಕೋಮು ನೆಲೆಯಲ್ಲಿ ಯಾವುದೇ ಮಾತು ಆಡದಂತೆ, ಯಾವುದೇ ಕೃತ್ಯ ಎಸಗದಂತೆ ತಾರಾ ಪ್ರಚಾರಕರಿಗೆ ಸೂಚಿಸಬೇಕು.

ಪರಿಶೀಲನೆಯಲ್ಲಿ ಕಂಡು ಬಂದಿದ್ದು

- ಪ್ರಧಾನಿ ನರೇಂದ್ರ ಮೋದಿ ಅವರು ರಾಜಸ್ಥಾನದ ಬಾಂಸವಾಡಾದಲ್ಲಿ ವಿಭಜನಕಾರಿ ಭಾಷಣ ಮಾಡಿದ್ದಾರೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದಕ್ಕೆ ಪ್ರತಿಯಾಗಿ, ನಡ್ಡಾ ಅವರಿಗೆ ಆಯೋಗವು ನೋಟಿಸ್ ನೀಡಿತ್ತು.
- ಬಿಜೆಪಿಯ ತಾರಾ ಪ್ರಚಾರಕರ ಮಾತುಗಳು ಸತ್ಯವನ್ನು ಆಧರಿಸಿವೆ, ಅವು ಕಾಂಗ್ರೆಸ್ಸಿನ ಕೆಟ್ಟ ಉದ್ದೇಶವನ್ನು ದೇಶದ ಮುಂದೆ ಬಹಿರಂಗಪಡಿಸುತ್ತವೆ ಎಂದು ನಡ್ಡಾ ಉತ್ತರಿಸಿದ್ದರು.
- ಕಾಂಗ್ರೆಸ್ ಮತ್ತು 'ಇಂಡಿಯಾ' ಮೈತ್ರಿಕೂಟವು ಮತಬ್ಯಾಂಕ್ ರಾಜಕಾರಣದ ಕಾರಣಕ್ಕೆ ಭಾರತವನ್ನು, ಭಾರತದ ಅಸ್ಮಿತೆಯನ್ನು, ಇಲ್ಲಿನ ಮೂಲ ಹಿಂದೂಧರ್ಮವನ್ನು ವಿರೋಧಿಸಲು ಆರಂಭಿಸಿವೆ ಎಂದು ನಡ್ಡಾ ವಿವರಿಸಿದ್ದರು.
- ನಡ್ಡಾ ಅವರ ಸಮರ್ಥನೆಯನ್ನು ಒಪ್ಪಲಾಗದು ಎಂದು ಆಯೋಗ ಹೇಳಿದೆ. ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷವಾಗಿ ಬಿಜೆಪಿಯು ತನ್ನ ಪ್ರಚಾರವನ್ನು ಭಾರತದ ಸೂಕ್ಷ್ಮ ಹಾಗೂ ಬಹುತ್ವದ ಮೂಲರಚನೆಗೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳಬೇಕು ಎಂದು ಆಯೋಗವು ನಿರೀಕ್ಷಿಸುತ್ತದೆ ಎಂದು ಹೇಳಿದೆ.

ಕಾಂಗ್ರೆಸ್ಸಿಗೆ ಆಯೋಗದ ನಿರ್ದೇಶನಗಳು

- ದೇಶದ ಸಂವಿಧಾನವನ್ನು ರದ್ದುಪಡಿಸಬಹುದು ಎಂಬಂತಹ ತಪ್ಪು ಭಾವನೆ ಮೂಡಿಸುವ ಹೇಳಿಕೆಗಳನ್ನು ನೀಡಬಾರದು ಎಂಬ ಸಂದೇಶವನ್ನು ತಾರಾ ಪ್ರಚಾರಕರಿಗೆ ರವಾನಿಸಬೇಕು.
- ಚುನಾವಣಾ ಆಯೋಗವು 2019ರ ಮಾರ್ಚ್‌ನಲ್ಲಿ ನೀಡಿದ್ದ ಸಲಹೆಗಳನ್ನು ಪೂರ್ತಿಯಾಗಿ ಪಾಲಿಸಬೇಕು. ಅಂದರೆ, ಪ್ರಚಾರದಲ್ಲಿ ತೊಡಗಿಕೊಳ್ಳುವವರು, ಅಭ್ಯರ್ಥಿಗಳು ರಕ್ಷಣಾ ಪಡೆಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಜಕೀಯ ಪ್ರಚಾರಾಂದೋಲನದಲ್ಲಿ ತೊಡಗುವಂತಿಲ್ಲ. ರಕ್ಷಣಾ ಪಡೆಗಳ ಸಾಮಾಜಿಕ–ಆರ್ಥಿಕ ಸಮೀಕರಣದ ಬಗ್ಗೆ ವಿಭಜನಕಾರಿ ಆಗಬಹುದಾದಂತಹ ಮಾತುಗಳನ್ನು ಆಡುವಂತಿಲ್ಲ.

ಪರಿಶೀಲನೆಯಲ್ಲಿ ಕಂಡು ಬಂದಿದ್ದು

- ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರ ಮಾತುಗಳ ಬಗ್ಗೆ ಬಿಜೆಪಿ ಸಲ್ಲಿಸಿದ್ದ ದೂರಿಗೆ ಪ್ರತಿಯಾಗಿ ಆಯೋಗವು ಖರ್ಗೆ ಅವರಿಗೆ ನೋಟಿಸ್ ಜಾರಿಗೊಳಿಸಿತ್ತು. ಅಗ್ನಿಪಥ ಯೋಜನೆಯ ಕುರಿತು ಕಾಂಗ್ರೆಸ್ ನಾಯಕರು ಆಡಿದ್ದ ಮಾತುಗಳನ್ನು ಆಯೋಗ ಉಲ್ಲೇಖಿಸಿತ್ತು.
- ಖರ್ಗೆ ಅವರು ನೀಡಿದ್ದ ಸಮರ್ಥನೆಗಳನ್ನು ಆಯೋಗವು ತಿರಸ್ಕರಿಸಿದೆ.
- ಬಿಜೆಪಿಯು ಸಂವಿಧಾನವನ್ನು ಬದಲಾಯಿಸಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ಸಿನ ತಾರಾ ಪ್ರಚಾರಕರವು ಹೇಳುವುದು ಭವಿಷ್ಯ ಅನಿಶ್ಚಿತ ಎಂದು ಮತದಾರರ ಮನದಲ್ಲಿ ಭೀತಿಯನ್ನು ಸೃಷ್ಟಿಸುವಂತಿದೆ ಎನ್ನಲಾಗಿದೆ. ಅಲ್ಲದೆ, ದೇಶದಲ್ಲಿ ಅರಾಜಕತೆಯನ್ನು ಹರಡುವ ಯತ್ನ ಎಂದು ಕೂಡ ಹೇಳಲಾಗಿದೆ ಎಂದು ಆಯೋಗ ಹೇಳಿದೆ. ಇದನ್ನು ಚುನಾವಣಾ ಕಾನೂನುಗಳ ಅಡಿಯಲ್ಲಿ ಭ್ರಷ್ಟ ಕೆಲಸ ಎಂದು ಪರಿಗಣಿಸಬಹುದು ಎಂದು ಆಯೋಗ ಹೇಳಿದೆ.

ಮತ್ತೆ ಅದೇ ಮಾತು

ದೇಶದ ಸಂಪತ್ತಿನ ಮೊದಲ ಅಧಿಕಾರ ಮುಸ್ಲಿಮರದ್ದು ಎಂದು ಕಾಂಗ್ರೆಸ್ ಹೇಳುತ್ತದೆ. ಆದರೆ, ನಾನು ಹೇಳುತ್ತೇನೆ, ದೇಶದ ಸಂಪತ್ತಿನ ಮೊದಲ ಹಕ್ಕುದಾರರು ಬಡವರು

ನರೇಂದ್ರ ಮೋದಿ, ಪ್ರಧಾನಿ (ಉತ್ತರ ಪ್ರದೇಶದ ಶ್ರಾವಸ್ತಿಯಲ್ಲಿ ಹೇಳಿದ್ದು)

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ, ಸಂವಿಧಾನ ಬದಲಿಸುತ್ತದೆ ಮತ್ತು ಮೀಸಲಾತಿ ಕಡಿತಗೊಳಿಸುತ್ತದೆ. ಅವರು ಪ್ರಜಾಪ್ರಭುತ್ವ, ಸಂಸತ್ತು ಹಾಗೂ ನ್ಯಾಯಾಂಗವನ್ನು ದುರ್ಬಲಗೊಳಿಸಿದರು

ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ನಾಯಕಿ (ಜಾರ್ಖಂಡ್‌ನ ರಾಂಚಿಯಲ್ಲಿ ಹೇಳಿದ್ದು)



ಬೆಳ್ತಂಗಡಿಯಲ್ಲಿ ಶಾಸಕ ಹರೀಶ್ ಪೂಂಜ ಅವರನ್ನು ವಶಕ್ಕೆ ಪಡೆಯಲು ಪೊಲೀಸರು ಬಂದಾಗ ಜಮಾಯಿಸಿದ್ದ ಕಾರ್ಯಕರ್ತರು

ಠಾಣೆಗೆ ಶಾಸಕ ಹಾಜರು • ಸ್ಟೇಷನ್ ಜಾಮೀನಿನ ಮೇಲೆ ಬಿಡುಗಡೆ

ಪೂಂಜ ಮನೆಯಲ್ಲಿ ಹೈಡ್ರಾಮಾ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಬೆಳ್ತಂಗಡಿ ಶಾಸಕ, ಬಿಜೆಪಿಯ ಹರೀಶ್ ಪೂಂಜ ಅವರನ್ನು ವಿಚಾರಣೆಗೆ ಕರೆತರಲು ಪೊಲೀಸರು ಬುಧವಾರ ಅವರ ಮನೆಗೆ ತೆರಳಿದ ಹಿನ್ನೆಲೆಯಲ್ಲಿ ವಿರೋಧ, ವಾಗ್ವಾದ ಮತ್ತು ಘೋಷಣೆ ಕಾರಣ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಪೊಲೀಸರಿಗೆ ಬೆದರಿಕೆ, ಕರ್ತವ್ಯಕ್ಕೆ ಅಡ್ಡಿ ಮತ್ತು ಅನುಮತಿ ಪಡೆಯದೆ ಪ್ರತಿಭಟನೆ ನಡೆಸಿದ್ದಾರೆ ಎಂಬ ಆರೋಪ ಶಾಸಕರ ಮೇಲಿದೆ.



ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 7.30ರವರೆಗೆ ಹರೀಶ್ ಪೂಂಜ ಅವರ ಮನೆಯಲ್ಲಿ ನಾಟಕೀಯ ಬೆಳವಣಿಗೆಗಳು ನಡೆದವು. ಕೊನೆಗೆ ಅವರನ್ನು ಬಂಧಿಸದೆ ಪೊಲೀಸರು ತೆರಳಿದರು. ರಾತ್ರಿ 9.30ರ ವೇಳೆ ಶಾಸಕರು ಬೆಳ್ತಂಗಡಿ ಠಾಣೆಗೆ ಹಾಜರಾದರು.

7ನೇ ಪುಟ ನೋಡಿ

ನೋಟಿಸ್ ನೀಡಲಾಗಿದೆ: ಎಸ್‌ಪಿ

ವಿಚಾರಣೆಗೆ ಹಾಜರಾಗುವಂತೆ ಶಾಸಕ ಹರೀಶ್ ಪೂಂಜ ಅವರಿಗೆ ನೋಟಿಸ್ ನೀಡಲಾಗಿತ್ತು. ಆದರೆ ಠಾಣೆಗೆ ಬರಲು ನಿರಾಕರಿಸಿದ್ದರಿಂದ ಪೊಲೀಸರು ರಾತ್ರಿವರೆಗೂ ಕಾಯಬೇಕಾಗಿ ಬಂತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಸಿ.ಬಿ ತಿಳಿಸಿದ್ದಾರೆ. 'ಶಾಸಕರಿಗೆ ಬೆಳಿಗ್ಗೆಯೇ ನೋಟಿಸ್ ನೀಡಲಾಗಿದೆ. ಅದರ ಪ್ರತಿ ನಮ್ಮಲ್ಲಿದೆ. ಆದರೂ ನೋಟಿಸ್ ತಲುಪಿಲ್ಲ ಎಂದು ಶಾಸಕರ ವಕೀಲರು ಹೇಳಿದ್ದಾರೆ.

ಮೊದಲನೇ ಪ್ರಕರಣದಲ್ಲಿ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಎರಡನೇ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಕೋರಲಾಗಿತ್ತು. ಆದರೆ ಸಂಜೆವರೆಗೂ ಪೊಲೀಸರಿಗೆ ಸಹಕಾರ ನೀಡಲಿಲ್ಲ' ಎಂದು ಹೇಳಿರುವ ಅವರು, 'ಶಾಸಕರು ಎಂಬ ಕಾರಣಕ್ಕೆ ಪೂಂಜ ಅವರ ಮೇಲೆ ಇಲಾಖೆಗೆ ಗೌರವ ಇದೆ' ಎಂದಿದ್ದಾರೆ.

ಸಕಾಲಕ್ಕೆ ಒದಗಿಸಲು ಹೊರಗುತ್ತಿಗೆ ಸಿಬ್ಬಂದಿಯಿಂದ ಹಗಲು – ರಾತ್ರಿ ಕೆಲಸ

ಉತ್ತರ ಪತ್ರಿಕೆ ಛಾಯಾಪ್ರತಿಗೆ ಭಾರಿ ಬೇಡಿಕೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಗಣನೀಯವಾಗಿ ಕುಸಿದ ಬೆನ್ನಲ್ಲೇ ಉತ್ತರ ಪತ್ರಿಕೆಗಳ ಛಾಯಾಪ್ರತಿ (ಸ್ಕ್ಯಾನ್ಡ್ ಕಾಪಿ) ಪಡೆಯಲು 62 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಪ್ರತಿಗಳನ್ನು ಸಕಾಲಕ್ಕೆ ಒದಗಿಸಲು ಹೊರಗುತ್ತಿಗೆ ಸಿಬ್ಬಂದಿ ಹಗಲು–ರಾತ್ರಿ ಕೆಲಸ ಮಾಡುತ್ತಿದ್ದಾರೆ.

ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನದ ನಂತರ ಫಲಿತಾಂಶ ಶೇ 53ರಷ್ಟಿತ್ತು. ಕಡಿಮೆ ಫಲಿತಾಂಶ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಎಂದು ಮನಗಂಡ ಶಾಲಾ ಶಿಕ್ಷಣ ಇಲಾಖೆ, ಕೃಪಾಂಕದ ನಿಯಮದಲ್ಲಿ ಸಡಿಲಿಕೆ ಮಾಡಲು ಪರೀಕ್ಷಾ ಮಂಡಳಿಗೆ ಸೂಚಿಸಿತ್ತು.

ಹಿಂದೆ ಮೂರು ವಿಷಯಗಳಲ್ಲಿ 35 ಅಂಕ ಪಡೆದಿದ್ದು, ಉಳಿದ ಮೂರು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೆ ಪ್ರತಿ ವಿಷಯದಲ್ಲೂ ಗರಿಷ್ಠ 10 ಕೃಪಾಂಕ ನೀಡಿ ತೇರ್ಗಡೆ ಮಾಡಲಾಗುತ್ತಿತ್ತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೃಪಾಂಕ ಪಡೆಯಲು ಇದ್ದ ಶೇ 35 ಅರ್ಹ ಅಂಕಗಳನ್ನು 25ಕ್ಕೆ ಇಳಿಸಿ, ಗರಿಷ್ಠ 20 ಕೃಪಾಂಕ ನೀಡಲಾಗಿದೆ. ಇದರಿಂದ ಒಟ್ಟಾರೆ ಫಲಿತಾಂಶ ಶೇ 73.40ಕ್ಕೆ ಹಿಗ್ಗಿದೆ. ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 1.69 ಲಕ್ಷ ವಿದ್ಯಾರ್ಥಿಗಳು ಕೃಪಾಂಕದ ಆಧಾರದಲ್ಲಿ ತೇರ್ಗಡೆ ಯಾಗಿದ್ದಾರೆ. ಹೀಗೆ ತೇರ್ಗಡೆಯಾದ ವಿದ್ಯಾರ್ಥಿಗಳ ಕಳಪೆ ಫಲಿತಾಂಶಕ್ಕೆ ಕಾರಣಗಳನ್ನು ಕಂಡುಕೊಳ್ಳಲು ಆಯಾ ಶಾಲೆಗಳ ಶಿಕ್ಷಕರು ಹಾಗೂ ಪೋಷಕರ ಸಲಹೆ ಯಂತೆ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಗಳ ಛಾಯಾಪ್ರತಿಗಳಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

10ನೇ ಪುಟ ನೋಡಿ

62,033	61,999	34
ಸಲ್ಲಿಕೆಯಾದ ಅರ್ಜಿಗಳು	ಇತ್ಯರ್ಥವಾದ ಅರ್ಜಿಗಳು	ಬಾಕಿ ಇರುವ ಅರ್ಜಿಗಳು

ಎಷ್ಟೇ ಅರ್ಜಿಗಳು ಸಲ್ಲಿಕೆಯಾದರೂ ಸಕಾಲಕ್ಕೆ ಪ್ರತಿಗಳನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ

ಗೋಪಾಲಕೃಷ್ಣ, ನಿರ್ದೇಶಕ, ಪರೀಕ್ಷಾ ಮಂಡಳಿ

₹10 ಕೋಟಿಗೂ ಅಧಿಕ ಆದಾಯ

ಪ್ರತಿ ವಿಷಯದ ಛಾಯಾ ಪ್ರತಿ ಪಡೆಯಲು ₹530 ನಿಗದಿ ಮಾಡಲಾಗಿದೆ. 62 ಸಾವಿರ ಅರ್ಜಿಗಳಲ್ಲಿ ಬಹುತೇಕರು ಕನಿಷ್ಠ ನಾಲ್ಕು ವಿಷಯಗಳ ಪ್ರತಿ ಪಡೆಯುತ್ತಿದ್ದಾರೆ. ಇದರಿಂದ ಮಂಡಳಿಗೆ ₹10 ಕೋಟಿಗೂ ಅಧಿಕ ಶುಲ್ಕ ಹರಿದು ಬಂದಿದೆ. ಎಸ್‌ಎಸ್‌ಎಲ್‌ಸಿ ಛಾಯಾ ಪ್ರತಿಗೆ ಅರ್ಜಿ ಸಲ್ಲಿಸುವ ಅವಧಿ ಮುಗಿದ ಬೆನ್ನಲ್ಲೇ ಪಿಯು ಎರಡನೇ ಪರೀಕ್ಷೆಯ ಉತ್ತರ ಪತ್ರಿಕೆಗಳ ಛಾಯಾಪ್ರತಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದೆ. ಮೇ 21ರಿಂದ ಮೇ 23ರವರೆಗೆ ಅವಕಾಶ ಕಲ್ಪಿಸಲಾಗಿದೆ. 22ರಿಂದ 24ರ ಒಳಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಪ್ರಜಾಪ್ರಭುತ್ವ ಇಲ್ಲಿ ನಾಟ್ ರೀಚಬಲ್!

• ಸಂಧ್ಯಾ ಹೆಗಡೆ



ಹಾಸನ: ಪ್ರಜಾಪ್ರಭುತ್ವವನ್ನು ಪಾಳೆಗಾರಿಕೆಯಾಗಿ ಪರಿವರ್ತಿಸಿಕೊಂಡು ರಾಜಕಾರಣ ಮಾಡಿದ ಪರಿವಾರದ ವಿರುದ್ಧ ಪ್ರತಿರೋಧದ ಅಲೆ ಎದ್ದಿದೆ. 'ಭಯ'ದ ನೆರಳಿನಲ್ಲಿ ದನಿ ಕಳೆದು ಕೊಂಡಿದ್ದ ಹೇಮಾವತಿ ನದಿ ತಟದ ಹಳ್ಳಿಗಳು ಮಾತನಾಡತೊಡಗಿವೆ.

ದೇಶಕ್ಕೆ ಪ್ರಧಾನಿಯನ್ನು ಕೊಟ್ಟು ಭಾರತ ನಕಾಶೆಯಲ್ಲಿ ಮಿನುಗಿದ್ದ ಹಾಸನದ ಹೆಸರಿಗೆ, ಕಪ್ಪುಮಸಿ ಬಳಿದಿರುವ ಸಂಸದ ಪ್ರಜ್ವಲ್ ರೇವಣ್ಣ ಬಗ್ಗೆ ಹಾದಿ–ಬೀದಿಯಲ್ಲಿ ಜನರು ಆಕ್ರೋಶ ವ್ಯಕ್ತಪಡಿಸತೊಡಗಿದ್ದಾರೆ. ಲೈಂಗಿಕ ದೌರ್ಜನ್ಯಕ್ಕೆ ಬಲಿಪಶುಗಳಾದ ಸಂತ್ರಸ್ತೆಯರನ್ನೇ ಅಪರಾಧಿಗಳಂತೆ ಬಿಂಬಿಸಲು ಯತ್ನಿಸುತ್ತಿರುವ ರಾಜಕೀಯ ವಿಕೃತಿ ವಿರುದ್ಧ ತೊಡೆತಟ್ಟಿರುವ ಜನರು, ಮೂರು ದಶಕಗಳ ಸರ್ವಾಧಿಕಾರದ ಬಿಗಿ ಮುಷ್ಠಿಯಲ್ಲಿ ನಡೆದಿರುವ ದುರಾಡಳಿತದ ಕುರಿತು ಬಹಿರಂಗವಾಗಿ ಮಾತನಾಡ ತೊಡಗಿದ್ದಾರೆ.

'ಭಾರತದಲ್ಲಿ ಪ್ರಜಾಪ್ರಭುತ್ವ ಇದೆ, ಆದರೆ, ಹೊಳೆನರಸೀಪುರ-ದಲ್ಲಿ ಸರ್ವಾಧಿಕಾರ ಇದೆ' ಎನ್ನುತ್ತ ಮಾತಿಗಿಳಿದರು ಸಾಮಾಜಿಕ ಕಾರ್ಯಕರ್ತ ಧರ್ಮೇಶ್.

ಪ್ರಜಾತಂತ್ರ ವ್ಯವಸ್ಥೆಯ ಅಣಕವನ್ನು ಹಾಸನ ಜಿಲ್ಲೆಯಲ್ಲಿ ಕಾಣಲು ಸಾಧ್ಯ. ಧ್ವನಿ ಎತ್ತಿದವರನ್ನು ಮಣಿಸುವುದೇ ಇಲ್ಲಿನ ತಂತ್ರಗಾರಿಕೆ. ರೇವಣ್ಣ ಅವರನ್ನು ವಿರೋಧಿಸಿ ಬದುಕು ನಡೆಸುವುದು ಕಷ್ಟವೆಂಬ ಅನುಭವಜನ್ಯ ಸತ್ಯವನ್ನ-ರಿತು ಜನರು ದಾಸ್ಯಕ್ಕೆ ಶರಣಾಗಿದ್ದಾರೆ' ಎನ್ನುವಾಗ ಅವರ ದನಿ ಗಡುಸಾಗಿತ್ತು.

'ಜನಸಾಮಾನ್ಯರ ಜಾತಿ ವ್ಯಾಮೋಹ ಮತ್ತು ಅಧಿಕಾರಸ್ಥರ ಪುತ್ರ ವ್ಯಾಮೋಹ ಇವೆರಡೂ ಇಲ್ಲಿ ಆಡಳಿತವನ್ನು ಕುರುಡಾಗಿಸಿವೆ. ಹಿಟ್ಲರ್ ಸಂಸ್ಕೃತಿ 'ಸಹಜ' ಎನ್ನುವಷ್ಟರ ಮಟ್ಟಿಗೆ ಹಾಸನದ ಜನರು ಒಗ್ಗಿಕೊಂಡಿದ್ದಾರೆ. ಉಸ್ತುವಾರಿ ಸಚಿವರು ಯಾರೇ ಇರಲಿ, ಹೊಳೆನರಸೀಪುರ ಶಾಸಕರೇ ಇಲ್ಲಿ ಆಡಳಿತ ನಿಯಂತ್ರಕರು. ಹೀಗಾಗಿ, ಹಾಸನದ ರಾಜಧಾನಿ ಹೊಳೆನರಸೀಪುರ ಎಂಬ ಆಡುಮಾತು ನಮ್ಮಲ್ಲಿ ಪ್ರಚಲಿತ' ಎಂದು ನಸುನಕ್ಕರು ವ್ಯಾಪಾರಿಯೊಬ್ಬರು.

5ನೇ ಪುಟ ನೋಡಿ

ಅಧಿಕಾರಿಗಳ ಮೇಲೂ ದಬ್ಬಾಳಿಕೆ

'ನಡುರಾತ್ರಿಗೆ ಶಾಸಕರ ಕರೆ ಬಂದರೂ, ತಕ್ಷಣಕ್ಕೆದ್ದು ಹೊರಡಬೇಕು. ಬಾಗಿಲೆದುರು ತಾಸುಗಟ್ಟಲೆ ಕಾಯುತ್ತ ನಿಂತಿರಬೇಕು. ಕಾಯಿಲೆ ಇದ್ದವರಿರಲಿ, ನಿವೃತ್ತಿಯ ಅಂಚಿಗೆ ಬಂದವರಿರಲಿ, ಮಹಿಳಾ ಅಧಿಕಾರಿಗಳಿರಲಿ, ಯಾರಿಗೂ ವಿನಾಯಿತಿ ಇಲ್ಲ. ಆಜ್ಞೆಯನ್ನು ಉಲ್ಲಂಘಿಸಿದರೆ, ವರ್ಗಾವಣೆಯ ಶಿಕ್ಷೆ ಖಚಿತ. ಇದಕ್ಕೆ ನನ್ನ ಪತಿ ಬಲಿಪಶುವಾದವರು' ಎಂದು ಸರ್ಕಾರಿ ಎಂಜಿನಿಯರೊ-ಬ್ಬರ ಪತ್ನಿ 'ಪ್ರಜಾವಾಣಿ' ಜೊತೆ ಅನುಭವ ಹಂಚಿಕೊಂಡರು. 'ಶಾಸಕರು ಹಾಗೂ ಸಂಸದರು ತಮ್ಮ ಕಚೇರಿಗೆ ಕರೆದು ಸಭೆ ನಡೆಸುವಾಗ ಅಧಿಕಾರಿಗಳು ಸುತ್ತುವರಿದು ನಿಂತಿರಬೇಕು. ಕುಳಿತುಕೊಳ್ಳಲು ಕುರ್ಚಿ ಸಿಗದ ಸಂದರ್ಭಗಳೇ ಹೆಚ್ಚು. ಮುಜುಗರವನ್ನು ಮುಚ್ಚಿಟ್ಟು ಮುಗುಳ್ನಗೆಯಿಂದ ಇರುವುದು ಅಭ್ಯಾಸವಾಗಿದೆ' ಎಂದು ಮಹಿಳಾ ಅಧಿಕಾರಿಯೊಬ್ಬರು ಬೇಸರಿಸಿದರು.

ತಾಂಡಾದಲ್ಲಿ 'ಅಕ್ಷರ ಕ್ರಾಂತಿ'

• ಟಿ.ನಾಗೇಂದ್ರ

ಶಹಾಪುರ (ಯಾದಗಿರಿ ಜಿಲ್ಲೆ): ಅದೊಂದು ಪುಟ್ಟ ತಾಂಡಾ. ಬಸ್ಸಿನ ಮುಖ ನೋಡದ, ರಸ್ತೆ ಸಂಪರ್ಕ ಸಮರ್ಪಕವಾಗಿ ಇಲ್ಲದ ಗಂಗುನಾಯಕ ತಾಂಡಾದಲ್ಲಿ ಸದ್ದಿಲ್ಲದೇ 'ಅಕ್ಷರದ ಕ್ರಾಂತಿ' ನಡೆಯುತ್ತಿದೆ. ತಾಂಡಾದಲ್ಲಿ ಸರ್ಕಾರಿ ಕೋಟಾದಲ್ಲಿ 11 ವಿದ್ಯಾರ್ಥಿಗಳು ಎಂಬಿಬಿಎಸ್, ಇಬ್ಬರು ಬಿಎಚ್‌ಎಂಎಸ್ ಅಭ್ಯಾಸ ಮಾಡುತ್ತಿದ್ದಾರೆ. ಒಬ್ಬರು ಈಗಾಗಲೇ ತಾಲ್ಲೂಕಿನ ಶಿರವಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಾಗಿ ಕೆಲಸವನ್ನೂ ಮಾಡುತ್ತಿದ್ದಾರೆ.

ಶಹಾಪುರ ತಾಲ್ಲೂಕಿನ ಗಂಗುನಾಯಕ ತಾಂಡಾದ ಸುರೇಶ ರಾಠೋಡ ಅವರ ಹಿರಿಯ ಪುತ್ರ ಡಾ.ರಾಜು ರಾಠೋಡ ಅವರು ಶಿರವಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಾಗಿದ್ದಾರೆ. ಮತ್ತಿಬ್ಬರು ಮಕ್ಕಳ ಪೈಕಿ ವಿಜಯ ಅವರು ವೈದ್ಯಕೀಯ ಪದವಿ ಪಡೆದು, ಎಂ.ಡಿ ಮಾಡುತ್ತಿದ್ದರೆ, ಕುಮಾರ್ ಪಶು ವೈದ್ಯಕೀಯ ಕೋರ್ಸ್ ಮಾಡುತ್ತಿದ್ದಾರೆ. ಸುರೇಶ್ ಅವರ ತಮ್ಮ ನೂರು ರಾಠೋಡ ಅವರ ಮಗ ದೇವರಾಜ ಎಂಬಿಬಿಎಸ್ 4ನೇ ಸೆಮಿಸ್ಟರ್ ಓದುತ್ತಿದ್ದಾರೆ. ತಾಂಡಾದ ಮಕ್ಕಳು ಎಲ್ಲ ಕಷ್ಟಗಳನ್ನು ಮೆಟ್ಟಿ 'ಬಡತನದಲ್ಲಿ ಅರಳಿದ ಕುಸುಮ'ಗಳಾಗಿ ಹೊರ ಹೊಮ್ಮುತ್ತಿದ್ದಾರೆ. ಅಲ್ಲದೇ ತಾಂಡಾದ 14 ಜನರು ವಿವಿಧ ಹುದ್ದೆಗಳಲ್ಲಿ ಸರ್ಕಾರಿ ಸೇವೆ ಮಾಡುತ್ತಿರುವುದು ವಿಶೇಷ. ತಾಂಡಾದ ಒಟ್ಟು ಜನಸಂಖ್ಯೆ 500 ಇದ್ದು, 120 ಮನೆಗಳಿವೆ. 1ರಿಂದ 5ನೇ ತರಗತಿಯವರೆಗೆ ಪ್ರಾಥಮಿಕ ಶಾಲೆ ಇದೆ. 6ನೇ ತರಗತಿಗೆ ತಾಂಡಾದಿಂದ 5 ಕಿ.ಮೀ ದೂರದ ಗೋಗಿ ಗ್ರಾಮಕ್ಕೆ ತೆರಳಬೇಕು.

5ನೇ ಪುಟ ನೋಡಿ



ಗಂಗುನಾಯಕ ತಾಂಡಾ

ಸೌಲಭ್ಯ ಇಲ್ಲ ಎಂದು ಮನೆಯಲ್ಲಿ ಕುಳಿತುಕೊಳ್ಳಬಾರದು. ಅದನ್ನು ಮೆಟ್ಟಿ ನಿಲ್ಲಬೇಕು. ಹೊಲದಲ್ಲಿ ನಮಗಾಗಿ ದುಡಿಯುತ್ತಿರುವ ತಂದೆ–ತಾಯಿ ಕಷ್ಟ ಅರ್ಥ ಮಾಡಿಕೊಂಡು ಸಾಧಿಸಬೇಕು

ಡಾ.ರಾಜು ರಾಠೋಡ, ಪ್ರಾಥಮಿಕ ಆರೋಗ್ಯ ಕೇಂದ್ರ, ಶಿರವಾಳ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಒಳಪುಟಗಳಲ್ಲಿ



ಮಳೆಯಿಂದ ಸಮಸ್ಯೆಗೆ ಒಳಗಾಗಿರುವ ಸ್ಥಳಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ • ಬಿಬಿಎಂಪಿ ಅಧಿಕಾರಿಗಳಿಗೆ ಕಟ್ಟೆಚ್ಚರ

ಮನೆಗೆ ನೀರು ನುಗ್ಗಿದರೆ ಎಂಜಿನಿಯರ್‌ಗಳೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಷ್ಟೇ ಪ್ರಭಾವಿಗಳು ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದರೂ ಅದನ್ನು ಶೀಘ್ರ ತೆರವುಗೊಳಿಸಬೇಕು. ಮಳೆ ಬಂದಾಗ ಮನೆಗಳಿಗೆ ನೀರು ನುಗ್ಗಿದರೆ ಎಂಜಿನಿಯರ್‌ಗಳನ್ನೇ ಹೊಣೆ ಮಾಡಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

ನಗರದಲ್ಲಿ ಮಳೆಯಿಂದ ಸಮಸ್ಯೆಗೆ ಒಳಗಾಗುವ ಪ್ರದೇಶಗಳಿಗೆ ಮುಖ್ಯಮಂತ್ರಿಯವರು ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಗಾರು ಮಳೆಗೂ ಮುನ್ನ ಪ್ರವಾಹ ಉಂಟಾಗಬಾರದೆಂದು ಚುನಾವಣಾ ಆಯೋಗದಿಂದ ಅನುಮತಿ ಪಡೆದು 7ರಿಂದ 8 ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು ಎಂದರು.

ವಿಳಂಬವಾಗಿರುವ ಕಾಮಗಾರಿಗಳನ್ನು ತ್ವರಿತಗೊಳಿಸಬೇಕು. ಮರಗಳಲ್ಲಿ ಒಣಗಿರುವ ಕೊಂಬೆಗಳನ್ನು ಕತ್ತರಿಸಬೇಕು. ಪಾದಚಾರಿ ಮಾರ್ಗಗಳನ್ನು ಸರಿಪಡಿಸಬೇಕು. ರಾಜಕಾಲುವೆಗೆ ಕಸ ಹಾಕುವುದನ್ನು ತಡೆಗಟ್ಟಬೇಕು. ಮುಂಗಾರು ಪ್ರಾರಂಭವಾಗುವ ಮುಂಚಿತವಾಗಿ ರಾಜಕಾಲುವೆಗಳ ಹೂಳು ತೆಗೆಯಬೇಕೆಂದು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

‘ರಸ್ತೆ ನಿರ್ವಹಣೆಗೆ ಶಾಶ್ವತ ವ್ಯವಸ್ಥೆ’

ರಸ್ತೆ ಹಾಗೂ ಗುಂಡಿಗಳನ್ನು ನಿರ್ವಹಿಸಲು ಒಂದು ಶಾಶ್ವತ ನಿರ್ವಹಣಾ ವ್ಯವಸ್ಥೆ ರೂಪಿಸಲು ಬಿಬಿಎಂಪಿ ಹಾಗೂ ಬಿಡಿಎಗೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ವಾರ್ಡ್ ರಸ್ತೆಗಳಲ್ಲಿ 5500 ಗುಂಡಿಗಳು ಬಿದ್ದಿದ್ದು, ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಲ್ಲಿ 557 ಗುಂಡಿಗಳಿವೆ. ಈ ತಿಂಗಳಲ್ಲಿ ಅವುಗಳನ್ನು ಮುಚ್ಚಬೇಕು. ಬಿಬಿಎಂಪಿ, ಬಿಡಿಎ, ಬೆಸ್ಕಾಂ, ಜಲಮಂಡಳಿಗಳು ಪರಸ್ಪರ ಸಮನ್ವಯದಿಂದ ಕೆಲಸ ಮಾಡಲು ಸೂಚಿಸಲಾಗಿದೆ ಎಂದರು.

‘ಡಬ್ಬಲ್ ಡೆಕ್ಕರ್ ಇತರ ಭಾಗದಲ್ಲೂ ಬರಲಿ’

‘ಸಂಚಾರ ದಟ್ಟಣೆ ನಿವಾರಣೆಗೆ ನಮ್ಮ ಮೆಟ್ರೊದ ‘ಡಬ್ಬಲ್ ಡೆಕ್ಕರ್’ ಮಾದರಿಯನ್ನು ನಗರದ ಇತರ ಭಾಗಗಳಲ್ಲಿಯೂ ಅಳವಡಿಸಬೇಕು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ದೇಶಿಸಿದರು. ‘ಸಿಲ್ಕ್ ಬೋರ್ಡ್ ಜಂಕ್ಷನ್ ಸಂಚಾರ ದಟ್ಟಣೆಗೆ ಪರಿಹಾರವಾಗಿ ಈ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಇದಲ್ಲದೇ ಬಿಟಿಎಂನಿಂದ ಬನಶಂಕರಿ ಕಡೆಯ, ರಾಘವೇಂದ್ರಸ್ವಾಮಿ ಟೆಂಪಲ್ ಸರ್ಕಲ್, ಜಯನಗರ 5ನೇ ಬ್ಲಾಕ್‌ನಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಬೇಡಿಕೆ ಇದೆ, ಅಂಡರ್‌ಪಾಸ್ ನಿರ್ಮಿಸಿ’ ಎಂದು ಸೂಚಿಸಿದರು.

‘ಒಣಮರ ಬಿಟ್ಟಿರುವುದು ಅನಾಹುತ ಆಗಲಿ ಅಂತಾನಾ?’

‘ಒಣಗಿದ ಮರಗಳನ್ನು ಯಾಕೆ ಬಿಟ್ಟಿದ್ದೀರಿ? ಅನಾಹುತ ಆಗಲಿ ಅಂತಾನಾ?’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಬನಶಂಕರಿ 2ನೇ ಹಂತದ 100 ಅಡಿ ರಸ್ತೆಯಲ್ಲಿ ಒಣಗಿದ ಮರಗಳನ್ನು ಕಂಡು ಅವರು ಸಿಟ್ಟಾದರು.

‘ನಗರದಾದ್ಯಂತ ಒಣಮರ, ಅಪಾಯಕಾರಿ ಮರಗಳನ್ನು ತೆರವುಗೊಳಿಸಬೇಕು. ನಗರ ಸೌಂದರ್ಯಕ್ಕೆ ಹೆಚ್ಚು ಒತ್ತು ಕೊಡಬೇಕು. ಪದ್ಮನಾಭನಗರ ಮೇಲ್ಸೇತುವೆ ಬಳಿ ಪಾದಚಾರಿ ಮಾರ್ಗ ದುರಸ್ತಿಗೊಳಿಸಿ. ಕಟ್ಟಡ ತ್ಯಾಜ್ಯ (ಡೆಬ್ರಿಸ್)ಗಳನ್ನು ತೆರವುಗೊಳಿಸಿ’ ಎಂದು ಸೂಚಿಸಿದರು.

ಲೋಕಸಭೆ ಚುನಾವಣೆ ಫಲಿತಾಂಶದ ನಂತರ ಬಿಬಿಎಂಪಿ ಚುನಾವಣೆ ಬಗ್ಗೆ ಚಿಂತನೆ ನಡೆಸಲಾಗುವುದು

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ನಗರದಲ್ಲಿ 860 ಕಿ.ಮೀ. ರಾಜಕಾಲುವೆ ಇದೆ. ನಾನು ಹಿಂದೆ ಮುಖ್ಯಮಂತ್ರಿಯಾಗಿದ್ದಾಗ 491 ಕಿ.ಮೀ. ರಾಜಕಾಲುವೆ ಒತ್ತುವರಿಯನ್ನು ತೆರವು ಮಾಡಲಾಗಿತ್ತು. ಹಿಂದಿನ ಸರ್ಕಾರ 2023ರ ಜನವರಿಯಲ್ಲಿ 193 ಕಿ.ಮೀ. ರಾಜಕಾಲುವೆ ಒತ್ತುವರಿ ತೆರವು ಮಾಡಲು ಕ್ರಮ ಕೈಗೊಂಡಿತ್ತು. ಅದನ್ನು ಮೊದಲೇ ಮಾಡಿದ್ದರೆ ಇಂದು ಸಮಸ್ಯೆ ಇರುತ್ತಿರಲಿಲ್ಲ. ಬಾಕಿ ಉಳಿದಿರುವ 176 ರಾಜಕಾಲುವೆ ಒತ್ತುವರಿ ತೆರವು ಹಾಗೂ ಅಭಿವೃದ್ಧಿಗೆ ₹1,800 ಕೋಟಿ ಅಗತ್ಯವಿದ್ದು, ವಿಶ್ವಬ್ಯಾಂಕ್ ಸುಮಾರು ₹2,000 ಕೋಟಿ ನೀಡಲಿದೆ. ಇದನ್ನು ಉಪಯೋಗಿಸಿಕೊಂಡು ಶೀಘ್ರ ಕಾಮಗಾರಿ ನಡೆಸಲಾಗುತ್ತದೆ ಎಂದರು.

12.15 ಕಿ.ಮೀ. ರಾಜಕಾಲುವೆ ಒತ್ತುವರಿಯ 12 ಪ್ರಕರಣಗಳು ಸಿವಿಲ್ ನ್ಯಾಯಾಲಯದಲ್ಲಿವೆ. ಅಗತ್ಯ ಬಿದ್ದರೆ ವಿಶೇಷ ವಕೀಲರನ್ನು ನೇಮಿಸಿ ಪ್ರಕರಣ ಇತ್ಯರ್ಥಗೊಳಿಸಲಾಗುವುದು ಎಂದು ತಿಳಿಸಿದರು.

ಬೆಂಗಳೂರಿನಲ್ಲಿ 400 ಕೆರೆಗಳಿದ್ದವು. ಈಗಿರುವ ಅನೇಕ ಕೆರೆಗಳು ಹೂಳಿನಿಂದ ತುಂಬಿವೆ ಹಾಗೂ ಒತ್ತುವರಿ ಆಗಿವೆ. ಒತ್ತುವರಿ ತೆರವು ಮಾಡಿ ನೀರು ಹರಿಯಲು ಕಾಲುವೆ ನಿರ್ಮಾಣ ಮಾಡಲು ಸೂಚಿಸಲಾಗಿದೆ. ಕೆರೆಗಳಿಂದ ತೆಗೆಯಲಾಗುವ ಹೂಳನ್ನು ಗುರುತು ಮಾಡಿರುವ ಕ್ವಾರಿಗಳಿಗೆ ಹಾಕಲಾಗುತ್ತಿದೆ ಎಂದು ಮುಖ್ಯಮಂತ್ರಿ ಹೇಳಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗಾಳಿ ಆಂಜನೇಯ ದೇವಸ್ಥಾನದ ಬಳಿ ಮುಂಗಾರು ಮಳೆ ಮುಂಜಾಗ್ರತೆ ಕ್ರಮಗಳ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಂದ ಮಾಹಿತಿ ಪಡೆದರು –ಪ್ರಜಾವಾಣಿ ಚಿತ್ರ

‘ಸ್ಮೋಕಿ ಪಾನ್’ 3ಂದ ಬಾಲಕಿಯ ಹೊಟ್ಟೆಯಲ್ಲಿ ರಂಧ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ 12 ವರ್ಷದ ಬಾಲಕಿಯೊಬ್ಬಳಿಗೆ ‘ಸ್ಮೋಕಿ ಪಾನ್’ (ಲಿಕ್ವಿಡ್ ನೈಟ್ರೋಜನ್ ಪಾನ್) ಸೇವನೆ ಬಳಿಕ ಹೊಟ್ಟೆಯಲ್ಲಿ ರಂಧ್ರ ಕಾಣಿಸಿಕೊಂಡಿದ್ದು, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವೈದ್ಯರು ಚಿಕಿತ್ಸೆ ನೀಡಿದ್ದಾರೆ.

ಕಳೆದ ತಿಂಗಳು ವಿವಾಹ ಸಮಾರಂಭವೊಂದರಲ್ಲಿ ದ್ರವ ಸಾರಜನಕ ಹಾಕಲಾಗಿದ್ದ, ಹೊಗೆ ತರಿಸುವ ಈ ಪಾನ್ ಸೇವಿಸಿದ್ದಳು. ಕೆಲ ಸಮಯದ ಬಳಿಕ ಅಸ್ವಸ್ಥಗೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯಕೀಯ ಪರೀಕ್ಷೆಗಳ ಬಳಿಕ ಹೊಟ್ಟೆಯಲ್ಲಿ ರಂಧ್ರವಾಗಿರುವುದು ದೃಢಪಟ್ಟಿತ್ತು. ಇದರಿಂದಾಗಿ ವೈದ್ಯರು ಬಾಲಕಿಗೆ ‘ಎಕ್ಸ್‌ಪ್ಲೋರೇಟರಿ ಲ್ಯಾಪ್ರೊಟಮಿ’ ಶಸ್ತ್ರಚಿಕಿತ್ಸೆ ಮಾಡಿದ್ದು, ಆಕೆ ಚೇತರಿಸಿಕೊಂಡಿದ್ದಾಳೆ. ‘ಬಾಲಕಿಯ ಹೊಟ್ಟೆಯಲ್ಲಿ 4x5 ಸೆಂ.ಮೀ. ಉದ್ದದ ಅನಾರೋಗ್ಯಕರ ವಸ್ತು ಅಂಟಿಕೊಂಡಿರುವುದು ಪತ್ತೆಯಾಯಿತು. ಶಸ್ತ್ರ ಚಿಕಿತ್ಸೆ ನಡೆಸಿ ಅದನ್ನು ಹೊರತೆಗೆಯಲಾಗಿದ್ದು, 2 ದಿನ ತೀವ್ರ ನಿಗಾ ಘಟಕದಲ್ಲಿ ಇದ್ದಳು. ಆರು ದಿನಗಳ ಬಳಿಕ ಮನೆಗೆ ತೆರಳಿದ್ದಾಳೆ’ ಎಂದು ಆಸ್ಪತ್ರೆ ತಿಳಿಸಿದೆ.

ಸುಧಾ, ಮಯೂರ ಓದಿರಿ

ನಿಧನ ವಾರ್ತೆ

ಪ್ರೆಸಿಲ್ಲ ಪೆರೇರಾ



ಬೆಂಗಳೂರು: ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಸ್ಥಾಪಕರಾಗಿದ್ದ ಜೆ.ಆರ್. ಪೆರೇರಾ ಅವರ ಪತ್ನಿ ಪ್ರೆಸಿಲ್ಲ ಪೆರೇರಾ (81) ಸೋಮವಾರ ನಿಧನರಾದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಪ್ರೆಸಿಲ್ಲ ಅವರು ಯಶವಂತಪುರದ ಕಮಲಾ ನೆಹರೂ ಬಡಾವಣೆಯಲ್ಲಿ ವಾಸವಾಗಿದ್ದರು. ಇವರು ನಗರದ ಎಚ್‌ಎಂಟಿ ಶಾಲೆಯಲ್ಲಿ ಶಿಕ್ಷಕಿಯಾಗಿಯೂ ಕೆಲಸ ಮಾಡಿದ್ದರು.

ಮೈಸೂರು ರಸ್ತೆಯಲ್ಲಿರುವ ಕ್ರೈಸ್ತರ ರುದ್ರಭೂಮಿಯಲ್ಲಿ ಮಂಗಳವಾರ ಇವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಗುರು ಪುರಸ್ಕಾರ ಪ್ರಶಸ್ತಿ: ಅರ್ಜಿ ಆಹ್ವಾನ

ಬೆಂಗಳೂರು: ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸ ಮಾಡಿರುವ ಶಿಕ್ಷಕರಿಗೆ ಸಹಯೋಗ್ ಫೌಂಡೇಶನ್ ‘ಗುರು ಪುರಸ್ಕಾರ’ ನೀಡಲು ನಿರ್ಧರಿಸಿದೆ. ಸರ್ಕಾರಿ ಮತ್ತು ಖಾಸಗಿ ಶಾಲೆ, ಕಾಲೇಜುಗಳ ಶಿಕ್ಷಕರು, ಪ್ರಾಂಶುಪಾಲರು, ಶೈಕ್ಷಣಿಕ ಕ್ಷೇತ್ರಕ್ಕೆ ಅತ್ಯುತ್ತಮ ಕೊಡುಗೆ ನೀಡಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅರ್ಜಿ ಸಲ್ಲಿಸಬಹುದು. ಇಲ್ಲವೇ ಬೇರೆಯವರು ನಾಮನಿರ್ದೇಶನ ಮಾಡಬಹುದು.

ಅಂತರರಾಷ್ಟ್ರೀಯ ಮಾನ್ಯತೆ ಇರುವ ಈ ಪ್ರಶಸ್ತಿಗೆ ಪಾತ್ರರಾದವರಿಗೆ ಅಂತರರಾಷ್ಟ್ರೀಯ ಶೈಕ್ಷಣಿಕ ಪ್ರವಾಸಗಳಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ. ಯುರೋಪ್, ಯುಎಸ್‌ಎಗೆ ಭೇಟಿ ನೀಡಬಹುದು. ಮಾಹಿತಿಗೆ ಅಧಿಕೃತ ವೆಬ್ ಸೈಟ್ www.gurupuraskar.comಗೆ ಭೇಟಿ ನೀಡಬಹುದು ಎಂದು ‘ಸಹಯೋಗ್ ಫೌಂಡೇಶನ್’ ಮ್ಯಾನೇಜಿಂಗ್ ಟ್ರಸ್ಟಿ ಯೋಗಿ ಅನೀಶ್ ತಿಳಿಸಿದ್ದಾರೆ.

ಗಾಳಿ ಆಂಜನೇಯ ದೇವಸ್ಥಾನದ ಬಳಿ ಪ್ರವಾಹ ನಿಯಂತ್ರಣಕ್ಕೆ ಕ್ರಮ

‘ಕಾಲುವೆ: ₹11 ಕೋಟಿ ಯೋಜನೆ’

ಪ್ರಜಾವಾಣಿ ವಾರ್ತೆ

ಮೈಸೂರು ರಸ್ತೆಯಲ್ಲಿರುವ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಪ್ರವಾಹ ನಿಯಂತ್ರಿಸಲು ಸಮಾನಾಂತರ ಕಾಲುವೆ ನಿರ್ಮಿಸಬೇಕು. **₹11.5 ಕೋಟಿ ವೆಚ್ಚದ ಈ ಯೋಜನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.**

ನಗರದಲ್ಲಿ ಮಳೆಯಿಂದ ಸಮಸ್ಯೆಗೆ ಒಳಗಾಗುವ ಪ್ರದೇಶಗಳಿಗೆ ಮುಖ್ಯಮಂತ್ರಿಯವರು ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದರು.

ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಸುತ್ತಮುತ್ತ ರಾಜಕಾಲುವೆಗೆ ಸಾರ್ವಜನಿಕರು ಕಸ ಎಸೆಯುವುದನ್ನು ತಡೆಗಟ್ಟಲು ಕ್ರಮ ವಹಿಸಬೇಕು. ಕಾಲಮಿತಿಯಲ್ಲಿ ಕೆಲಸವಾಗಬೇಕು. ಇಲ್ಲಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದರೆ ಅಮಾನತು ಮಾಡಲಾಗುತ್ತದೆ ಎಂದು ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಸೂಚಿಸಿದರು.

ನಾಯಂಡಹಳ್ಳಿ: ‘ಇಲ್ಲಿನ ರಾಜಕಾಲುವೆಯಲ್ಲಿ ಮಳೆಗಾಲದಲ್ಲಿ ಪ್ರವಾಹ ಉಂಟಾಗುತ್ತದೆ. ನೀರು ಸರಾಗವಾಗಿ ಹರಿದುಹೋಗಲು ಹೆಚ್ಚುವರಿ ಕಾಲುವೆ ಅಗತ್ಯವಿದೆ. ₹7 ಕೋಟಿ ವೆಚ್ಚದ ಕಾಮಗಾರಿ ಅನುಮೋದನೆಯಾಗಿದ್ದು, ಹಣಕಾಸು ಇಲಾಖೆ ಹಾಗೂ ಕಂದಾಯ ಇಲಾಖೆಯ ಅನುಮೋದನೆ ಅಗತ್ಯವಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಹಣಕಾಸು ಇಲಾಖೆ ಹಾಗೂ ಕಂದಾಯ ಇಲಾಖೆಯಿಂದ ಅನುಮೋದನೆ ಕೊಡಿಸಿ’ ಎಂದು ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರಿಗೆ ಮುಖ್ಯಮಂತ್ರಿ ಸೂಚಿಸಿದರು. ಒಂದು ವರ್ಷದಲ್ಲಿ ಕಾಮಗಾರಿ ಮುಗಿಯಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ತಾಕೀತು ಮಾಡಿದರು.

ಕೋಡಿ ಚಿಕ್ಕನಹಳ್ಳಿ: ‘ರಾಜಕಾಲುವೆಯಿಂದ ನೀರು ಹೊರಗೆ ಹರಿದು, ಮನೆಗಳಿಗೆ ನೀರು ನುಗ್ಗುತ್ತಿದೆ. ಹೊರ ಬರುವ ನೀರನ್ನು ಪಂಪ್ ಮಾಡಿ ಮಡಿವಾಳ ಕೆರೆಗೆ ಹರಿಸಬೇಕು. ಮಡಿವಾಳ ಕೆರೆಗೆ ಕಾಲುವೆ ನಿರ್ಮಾಣದ ₹4.3 ಕೋಟಿ ವೆಚ್ಚದ ಕಾಮಗಾರಿ ಆರಂಭಿಸಲು ಸಿದ್ದರಾಮಯ್ಯ ಸೂಚಿಸಿದರು.

ಸಿಲ್ಕ್ ಬೋರ್ಡ್, ಹೊಸೂರು ಮುಖ್ಯರಸ್ತೆ: ನಮ್ಮ ಮೆಟ್ರೊ ಕಾಮಗಾರಿಯಿಂದಾಗಿ ಮಳೆನೀರು ಚರಂಡಿ ವಿಸ್ತೀರ್ಣ ಕಡಿಮೆಯಾಗಿ, ಪ್ರವಾಹ ಪರಿಸ್ಥಿತಿ ಉಂಟಾಗುತ್ತಿದೆ. ಪರ್ಯಾಯ ವ್ಯವಸ್ಥೆ ಮಾಡಲು ₹4.5 ಕೋಟಿ ಕಾಮಗಾರಿ ಅಗತ್ಯವಿದೆ. ಇದಕ್ಕೆ ಸರ್ಕಾರದ ಉನ್ನತಾಧಿಕಾರ ಸಮಿತಿಯ ಅನುಮತಿ ಅಗತ್ಯವಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

10-15 ವರ್ಷಗಳ ದೂರದೃಷ್ಟಿಯಿಂದ ಕ್ರಿಯಾ ಯೋಜನೆ ರೂಪಿಸಿ, ಮುಂದಿನ ಉನ್ನತಾಧಿಕಾರ ಸಮಿತಿ ಸಭೆ ಮುಂದೆ ಯೋಜನೆ ಮಂಡಿಸಿ ಎಂದು ಮುಖ್ಯಮಂತ್ರಿ ಹೇಳಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಬೈರತಿ ಸುರೇಶ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೂ ಇದ್ದರು.

ಗುತ್ತಿಗೆದಾರರ ಬದಲಿಸಿ

‘ಆರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬವಾಗುತ್ತಿದೆ. 2023ರ ನ.20ರಂದು ಬಿಎಸ್‌ಸಿಪಿಎಲ್ ಕಂಪನಿಗೆ ಕಾಮಗಾರಿ ಮುಂದುವರಿಸಲು ಕಾರ್ಯಾದೇಶ ನೀಡಲಾಗಿದೆ. ಶೇ 4ರಿಂದ 6ರಷ್ಟು ಮಾತ್ರ ಪ್ರಗತಿಯಾಗಿದೆ’ ಎಂದು ತುಷಾರ್ ಗಿರಿನಾಥ್ ಹೇಳಿದರು.

ಸ್ಥಳದಲ್ಲಿದ್ದ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡ ಮುಖ್ಯಮಂತ್ರಿಯವರು, ‘ಕಾಮಗಾರಿ ಮಾಡಲು ಸಾಧ್ಯವಿಲ್ಲದಿದ್ದರೆ ಜಾಗ ಖಾಲಿ ಮಾಡು’ ಎಂದರು. ‘ಗುತ್ತಿಗೆದಾರರಿಗೆ ನಿಯಮಾನುಸಾರ ನೋಟಿಸ್ ನೀಡಿ, ಸ್ಪಂದಿಸದಿದ್ದರೆ ಕಾನೂನು ಪ್ರಕಾರ ಟೆಂಡರ್ ರದ್ದುಪಡಿಸಿ’ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ಇಂದು

ಬುದ್ಧ ಜಯಂತಿ: ಉದ್ಘಾಟನೆ: ಡಾ.ಬಿ. ರಮಣರಾವ್, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಉಪನ್ಯಾಸ: ಹ.ರಾ. ಮಹೇಶ್, ಅತಿಥಿಗಳು: ಸುಭಾಷ್ ಭರಣಿ, ಎಚ್.ಆರ್. ಸುರೇಂದ್ರ, ಮಲ್ಲಿಕಾರ್ಜುನ ಬಾಲ್ಕಿ, ಶಿವರಾಜ್, ಮಂಗಳ, ಜಿ.ಸಿ. ವೆಂಕಟರಮಣಪ್ಪ, ಆಯೋಜನೆ: ನಾಗಸೇನ ವಿದ್ಯಾಲಯ, ಬುದ್ಧ ವಿಹಾರ, ಬೌದ್ಧ ಮಹಾ ಸಭಾ, ಸ್ಥಳ: ನಾಗಸೇನ ಬುದ್ಧವಿಹಾರ, ಸದಾಶಿವನಗರ, ಬೆಳಿಗ್ಗೆ 11.30ರಿಂದ

‘ಬುದ್ಧ ಪೌರ್ಣಿಮೆ’ ಉಪನ್ಯಾಸ ಮತ್ತು ‘ಕಿಸಾ ಗೌತಮಿ’ ನಾಟಕ ಪ್ರದರ್ಶನ: ರಚನೆ: ಶಿವರಾಮ ಕಾರಂತ, ನಿರ್ದೇಶನ: ಬಿ.ವಿ. ರಾಜಾರಾಂ, ಪ್ರಸ್ತುತಿ: ಕಲಾಗಂಗೋತ್ರಿ, ಸ್ಥಳ:ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6

ಹುಣ್ಣಿಮ ಹಾಡು: ಸ್ಯಾಕ್ಸೊಫೋನ್: ಶ್ರೀಧರ್ ಸಾಗರ್, ಕೊಳಲು: ವಿಶ್ವನಾಥ್ ಕಲಬುರ್ಗಿ, ವಾದ್ಯ ವೈಭವ: ಕೀಬೋರ್ಡ್: ಲೋಕೇಶ್, ತಬಲಾ: ತುಮಕೂರು ಮೋಹನ್, ರಿದಂಪ್ಯಾಡ್: ಮಂಜುನಾಥ್ ಭಟ್, ಮೃದಂಗ: ಆರ್. ಗಣೇಶ್, ಅತಿಥಿಗಳು: ಸಿ.ಕೆ. ರಾಮೇಗೌಡ, ಮೋಹನ್ ರಾವ್, ಬಿ.ಕೆ. ಶಿವರಾಂ, ಚಾಲಚಂದ್ರ, ಆಯೋಜನೆ ಮತ್ತು ಸ್ಥಳ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಮಲ್ಲೇಶ್ವರ, ಸಂಜೆ 6.30

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿ ಬ್ರಹ್ಮರಥೋತ್ಸವ: ಬೆಳಿಗ್ಗೆ 7ಕ್ಕೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ವಿಶೇಷ ಹೂವಿನ ಅಲಂಕಾರ, 10.35 ರಾಜೋಪಚಾರ, ರಥಪೂಜೆ, ಮಧ್ಯಾಹ್ನ 12.15ಕ್ಕೆ ಬ್ರಹ್ಮರಥೋತ್ಸವ, ಸಾನ್ನಿಧ್ಯ: ವಿನಯ್ ಗುರೂಜಿ, ಅತಿಥಿಗಳು: ಉದಯ್ ಬಿ. ಗರುಡಾಚಾರ್, ವಿನುತ, ಎಸ್. ಭಾಸ್ಕರ್, ಗೌರಮ್ಮ, ಎ.ಆರ್. ರಾಜಣ್ಣ, ನಾದಸ್ವರ: ಅಶ್ವತ್ಥಪ್ಪ ಮತ್ತು ತಂಡ, ವೀರಗಾಸೆ: ಪ್ರಶಾಂತ್ ಆರಾಧ್ಯ, 2ಕ್ಕೆ ದಾಸೋಹ, ಸಂಜೆ 4.30ಕ್ಕೆ ಧೂಳೋತ್ಸವ, 5.30ಕ್ಕೆ ಲಲಿತ ಸಹಸ್ರನಾಮ, 6ಕ್ಕೆ ಉಯ್ಯಾಲೋತ್ಸವ, ಆಯೋಜನೆ: ಬಿ.ಎ.ಎಸ್.ವಿ. ನಗರ್ತ ಸಮಿತಿ, ಸ್ಥಳ: ನಗರೇಶ್ವರಸ್ವಾಮಿ ದೇವಸ್ಥಾನದ ಆವರಣ, ನಗರ್ತಪೇಟೆ

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಉಯ್ಯಾಲೋತ್ಸವ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ; ಸಂಜೆ 7ರಿಂದ

ಹರಿನಾಮ ಸಂಕೀರ್ತನೆ: ಗಾಯನ: ಭಾವನಾ ಮೂರ್ತಿ, ಕೀ–ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, 10ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಪದ್ಮಿನಿಪ್ರಿಯ ನೃತ್ಯ ಕಲಾ ಅಕಾಡೆಮಿ ವಿದ್ಯಾರ್ಥಿಗಳು, ನಿರ್ದೇಶನ: ಉಷಾ ಬಸಪ್ಪ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ, ಸಂಜೆ 7.30

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ. nagaradalli_indu@prajavani.co.in



ಕಂಚನಾ ರತ್ನಾ(ಬಲ ಬದಿ) ಅವರ ‘ಮರ್‌ಮರ್ಸ್ ಆ್ಯಂಡ್ ಮರ್‌ಮರೇಷನ್ಸ್’ ಕಲಾಕೃತಿಗಳ ಏಕವ್ಯಕ್ತಿ ಪ್ರದರ್ಶನವನ್ನು ಇಂದು ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ವೀಕ್ಷಕರಿಗೆ ವಿವರಿಸಿದರು –ಪ್ರಜಾವಾಣಿ ಚಿತ್ರ

ಮೆಮು ರೈಲು ಭಾಗಶಃ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ ನಿಲ್ದಾಣದಲ್ಲಿ ವಾರ್ಷಿಕ ಕೇಬಲ್ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 23ರಂದು ಮೆಮು ವಿಶೇಷ ರೈಲುಗಳಲ್ಲಿ ಒಂದು ರದ್ದುಗೊಳ್ಳಲಿದ್ದು, 10 ರೈಲುಗಳು ಭಾಗಶಃ ರದ್ದಾಗಲಿವೆ.

ವೈಟ್‌ಫೀಲ್ಡ್–ಕೆಎಸ್ ಬೆಂಗಳೂರು ಮೆಮು ವಿಶೇಷ ರೈಲು ರದ್ದಾಗಲಿದೆ. ಕೆಎಸ್‌ಆರ್ ಬೆಂಗಳೂರು-ಬಂಗಾರಪೇಟೆ ವಿಶೇಷ ಮೆಮು ರೈಲು ಕೆಎಸ್‌ಆರ್ ಬೆಂಗಳೂರು-ವೈಟ್‌ಫೀಲ್ಡ್ ನಡುವೆ ಭಾಗಶಃ ರದ್ದುಗೊಳ್ಳಲಿದೆ.

ಚಿಕ್ಕಬಳ್ಳಾಪುರ-ಬೆಂಗಳೂರು ಕಂಟೋನ್ಮೆಂಟ್ ಮೆಮು ರೈಲು ಮತ್ತು ಬೆಂಗಳೂರು ಕಂಟೋನ್ಮೆಂಟ್-ಚಿಕ್ಕಬಳ್ಳಾಪುರ ಮೆಮು ರೈಲು ಯಲಹಂಕ-ಬೆಂಗಳೂರು ಕಂಟೋನ್ಮೆಂಟ್ ನಡುವೆ ಭಾಗಶಃ ರದ್ದಾಗಲಿದೆ. ಬೆಂಗಳೂರು-ಮಾರಿಕುಪ್ಪಂ ಮತ್ತು ಮಾರಿಕುಪ್ಪಂ-ಕೆಎಸ್‌ಆರ್ ಬೆಂಗಳೂರು ತಲಾ ಮೂರು ರೈಲು, ಬಂಗಾರ ಪೇಟೆ-ಕೆಎಸ್‌ಆರ್ ಬೆಂಗಳೂರು ಮೆಮು ರೈಲು ಕೃಷ್ಣರಾಜಪುರಂ-ಕೆಎಸ್‌ಆರ್ ಬೆಂಗಳೂರು ನಡುವೆ ಸಂಚಾರ ಇರುವುದಿಲ್ಲ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.



ವಾರದ ರಜೆ ಕಡ್ಡಾಯ ಸೇರಿದಂತೆ ಹಲವು ಸುಧಾರಣಾ ಕ್ರಮ ಜಾರಿ

ನಗರದ 16,296 ಪೊಲೀಸರು ಸದೃಢರಲ್ಲ

• ಚೇತನ್ ಬಿ.ಸಿ.

ಸದೃಢತೆ ವಿವರ

18,665 ದೈಹಿಕ ಸದೃಢತೆ ಪರೀಕ್ಷೆಗೆ (ಬಾಡಿ ಮಾಸ್ ಇಂಡೆಕ್ಸ್–ಬಿಎಂಐ) ಒಳಪಟ್ಟ ಪೊಲೀಸರ ಸಂಖ್ಯೆ	2,369 ದೈಹಿಕ ಸದೃಢತೆ ಇರುವವರು
7,550 ಬೊಜ್ಜು ಇರುವವರು	3,746 ಅಧಿಕ ತೂಕ ಇರುವವರು
5,000+ ಕಡಿಮೆ ತೂಕ ಇರುವವರು	

ಬೆಂಗಳೂರು: ದೈಹಿಕ ಸದೃಢತೆ ಕಾಪಾಡಿ ಕೊಳ್ಳುವಲ್ಲಿ ಬೆಂಗಳೂರು ನಗರದ 16,296 ಪೊಲೀಸರು ವಿಫಲ ರಾಗಿದ್ದಾರೆ. ಅಂಥವರನ್ನು ಮತ್ತೆ ಸರಿದಾರಿಗೆ ತರಲು ಹಲವು ಕಾರ್ಯಸೂಚಿಗಳನ್ನು ಪೊಲೀಸ್ ಇಲಾಖೆ ರೂಪಿಸುತ್ತಿದೆ.

‘ಅನಿಶ್ಚಿತ ಕೆಲಸದ ಸಮಯ, ದೋಷ ಪೂರಿತ ಆಹಾರ ಪದ್ಧತಿ, ತೀವ್ರ ಒತ್ತಡ ಮತ್ತು ಉತ್ತಮವಲ್ಲದ ಜೀವನಶೈಲಿಗಳೇ ಈ ಪರಿಸ್ಥಿತಿಗೆ ಕಾರಣ. ಶೇ 15ರಿಂದ 20ರಷ್ಟು ಹುದ್ದೆಗಳು ಖಾಲಿ ಇರುವ ಕಾರಣ ಈಗಿರುವ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಾಗಿದೆ. ಬಹುತೇಕ ಪೊಲೀಸರು ಸಾಮಾನ್ಯವಾಗಿ ವೈಯಕ್ತಿಕ ಜೀವನವನ್ನು ತ್ಯಾಗ ಮಾಡಿ ಕೆಲಸ ಮಾಡುತ್ತಾರೆ. ಇದು ಮಾನಸಿಕ ಸಮಸ್ಯೆಗಳಿಗೂ ದಾರಿ ಮಾಡಿಕೊಟ್ಟಿದೆ’ ಎನ್ನುತ್ತಾರೆ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್.

‘ಅಪಘಾತ, ಕೊಲೆಗಳು ನಡೆದಾಗ, ಬಂದೋಬಸ್ತ್ ಮತ್ತಿತರ ಪ್ರಕರಣ ಗಳಲ್ಲಿ ಪೊಲೀಸರು ಪಾಳಿಯ ಸಮಯ ವನ್ನು ಲೆಕ್ಕಿಸದೆ ಕೆಲಸ ಮಾಡುತ್ತಾರೆ. ಸಂಘಟಕರು ಕೊಟ್ಟ ಆಹಾರ ಸೇವಿಸುತ್ತಾರೆ. ಎಷ್ಟೋ ಬಾರಿ ಆಹಾರ ಕಳಪೆಯಾಗಿರುತ್ತದೆ. ಹಸಿವಿನ ನಿವಾರಣೆಗಾಗಿ ಕೆಲವು ಬಾರಿ ತಕ್ಷಣಕ್ಕೆ ಸಿಗುವ ಜಂಕ್‌ಫುಡ್ ಸೇವಿಸುತ್ತಾರೆ. ರಾತ್ರಿ ಪಾಳಿಯಲ್ಲೂ ದುಡಿಯ ಬೇಕಾಗುತ್ತದೆ. ಬಿಡುವು ಸಿಕ್ಕಾಗ ಒತ್ತಡ ನಿವಾರಣೆಗಾಗಿ ಕೆಲ ಪೊಲೀಸರು ಮದ್ಯದ ಮೊರೆ ಹೋಗುತ್ತಾರೆ. ಇವೆಲ್ಲವೂ ಸ್ಥೂಲಕಾಯ ಹೆಚ್ಚಾಗಲು ದಾರಿ ಮಾಡಿಕೊಡುತ್ತದೆ’ ಎಂದು ಅವರು ವಿವರಿಸಿದರು.

‘ಬಿಎಂಐ ನಿರ್ವಹಣೆ ಮಾಡದ ಪೊಲೀಸರು ದೈಹಿಕ ಸದೃಢತೆಗೆ ಮರಳಬೇಕು. ಇಲ್ಲವೇ, ಕಡ್ಡಾಯ ನಿವೃತ್ತಿ ಪಡೆಯಬೇಕು ಎಂದು ಅಸ್ಸಾಂ ಸರ್ಕಾರ 2023ರಲ್ಲಿ ನಿಯಮ ರೂಪಿಸಿದೆ. ಇದರಿಂದ ಪೊಲೀಸರ ಕುಟುಂಬಕ್ಕೆ ಜೀವನ ಭದ್ರತೆ ಇಲ್ಲವಾಗುತ್ತದೆ. ಹಾಗಾಗಿ, ರಾಜ್ಯದಲ್ಲಿ ಅಂತಹ ಕ್ರಮ ಕೈಗೊಳ್ಳುವ ಆಲೋಚನೆ ಇಲ್ಲ. ಶಿಕ್ಷೆ ಎಂದಿಗೂ ಸಮಸ್ಯೆಗೆ ಪರಿಹಾರವಲ್ಲ’ ಎಂದು ದಯಾನಂದ ಹೇಳಿದರು.

‘ಸ್ಥೂಲಕಾಯ ಹೆಚ್ಚಾದ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಕೆಲ ಅಧಿಕಾರಿಗಳು ವಯಸ್ಸಾದಂತೆ ಮಾನಸಿಕ ಆರೋಗ್ಯದ ಸಮಸ್ಯೆಗೂ ಒಳಗಾಗುತ್ತಾರೆ. ಅಂಥವರಿಗೆ ಸೂಕ್ತ ಸಮಾಲೋಚನೆಗೆ ವ್ಯವಸ್ಥೆ ಮಾಡಬೇಕು. ಕೆಲಸದ ಮಧ್ಯೆಯೂ ನಿಯಮಿತ ವ್ಯಾಯಾಮಕ್ಕೆ ಅವಕಾಶ ಕಲ್ಪಿಸಬೇಕು. ಇಂತಹ ಸಾಧ್ಯತೆಗಳನ್ನು ಜಾರಿಗೊಳಿಸಲು ಯೋಜನೆ ರೂಪಿಸ ಲಾಗುತ್ತಿದೆ’ ಎನ್ನುತ್ತಾರೆ ಆಡಳಿತ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ರಮಣ್ ಗುಪ್ತ.

ಜೀವನಶೈಲಿ ಸರಿದಾರಿಯಲ್ಲಿ ಸಾಗಲು ಅನುಕೂಲವಾಗುವಂತೆ ಕೆಲಸದ ಹೊಂದಾಣಿಕೆ. ಮದ್ಯಪಾನ ತಡೆಗಟ್ಟಲು ಕೌನ್ಸೆಲಿಂಗ್. ಕೆಲಸದ ಒತ್ತಡ ಕಡಿಮೆ ಮಾಡಲು ವಾರದ ರಜೆ ಕಡ್ಡಾಯ. ವಾರದ ರಜೆಯ ದಿನ ಕೆಲಸ ಮಾಡಿದರೆ ಮರು ದಿನವೇ ಪಡೆಯಲೇಬೇಕು ಎಂಬ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಗರ ಪೊಲೀಸ್ ಅಧಿಕಾರಿಗಳು ನಿರ್ಧರಿಸಿದ್ದಾರೆ. ಈ ಕುರಿತು ಪ್ರತಿ ವಾರ ವರದಿ ಒಪ್ಪಿಸಲು ಸೂಚಿಸಿದ್ದಾರೆ.

ಮೊಬೈಲ್ ಸುಲಿಗೆಕೋರನ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ನಡೆದು ತೆರಳುತ್ತಿದ್ದ ವ್ಯಕ್ತಿಯೊಬ್ಬರ ಮೊಬೈಲ್ ಕಸಿದು ಪರಾರಿಯಾಗಿದ್ದ ಆರೋಪಿಯನ್ನು ಬಾಣಸವಾಡಿ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಸುಬ್ಬಣ್ಣಪಾಳ್ಯದ ಪಂಚಮುಖಿ ಟೆಂಪಲ್ ಬಳಿಯ ನಿವಾಸಿ ವಿ.ಸೂರ್ಯ(20) ಬಂಧಿತ ಆರೋಪಿ.

ಆರೋಪಿ ಮೆಡಿಕಲ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು. ಆರೋಪಿಯಿಂದ ಮೊಬೈಲ್ ಹಾಗೂ ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ.

‘ಠಾಣಾ ವ್ಯಾಪ್ತಿಯ ಕಮ್ಮನಹಳ್ಳಿ ರಾಮಯ್ಯ ಲೇಔಟ್‌ನಲ್ಲಿ ಮೇ 12ರಂದು ಬಹದ್ದೂರ್ ಥಾಪಾ ಅವರು ನಡೆದು ತೆರಳುತ್ತಿದ್ದರು. ಆಗ ಇಬ್ಬರು ಅಪರಿಚಿತರು ಬೈಕ್‌ನಲ್ಲಿ ಬಂದು ಮೊಬೈಲ್ ಕಸಿದು ಪರಾರಿಯಾಗಿದ್ದರು. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ತಂಡವು ಕಾರ್ಯಾಚರಣೆ ನಡೆಸಿ ಒಬ್ಬ ಆರೋಪಿಯನ್ನು ಬಂಧಿಸಿದೆ’ ಎಂದು ಪೊಲೀಸರು ಹೇಳಿದರು.

‘ಪುಲಕೇಶಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇದೇ ರೀತಿಯ ಕೃತ್ಯ ಎಸಗುತ್ತಿದ್ದ ಆರೋಪಿ ನವೀನ್‌ರಾಜ್ ಎಂಬಾತನನ್ನು ಇತ್ತೀಚೆಗೆ ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಸಿ.ಸಿ. ಟಿ.ವಿ. ಕ್ಯಾಮೆರಾ ಪರಿಶೀಲಿಸಿದಾಗ ಆತನ ಸಹಚರನೇ ಸೂರ್ಯ ಎಂಬುದು ದೃಢಪಟ್ಟಿತ್ತು. ನಂತರ ಆರೋಪಿ ಸೂರ್ಯನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಮೊಬೈಲ್ ಸುಲಿಗೆ ಮಾಡಿರುವುದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಾವೇರಿ ಜಿಲ್ಲೆಗೆ ರಸಗೊಬ್ಬರ ಬೊಮ್ಮಾಯಿ ಪತ್ರ

ಬೆಂಗಳೂರು: ಹಾವೇರಿ ಜಿಲ್ಲೆಗೆ ಅಗತ್ಯವಿರುವ ಡಿಎಪಿ, ಯೂರಿಯಾ ಹಾಗೂ ಕಾಂಪ್ಲೆಕ್ಸ್ ಗೊಬ್ಬರವನ್ನು ಕೂಡಲೇ ಸರಬರಾಜು ಮಾಡುವಂತೆ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಅವರು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರನ್ನು ಆಗ್ರಹಿಸಿದ್ದಾರೆ.

ಈ ಕುರಿತು ಸಚಿವರಿಗೆ ಪತ್ರ ಬರೆದಿರುವ ಬೊಮ್ಮಾಯಿ, ‘ಕಳೆದ ಒಂದು ವರ್ಷದಿಂದ ನಮ್ಮ ರೈತರು ಬರಗಾಲದಿಂದ ತತ್ತರಿಸಿ ಹೋಗಿದ್ದಾರೆ. ಹಿಂದಿನ ವರ್ಷ ಬಿತ್ತನೆ ಬೀಜ, ಗೊಬ್ಬರ ಹಾಗೂ ಇತರೆ ಕೃಷಿ ಚಟುವಟಿಕೆಗಳಿಗೆ ವೆಚ್ಚ ಮಾಡಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಲದ ಹೊರೆ ಹೆಚ್ಚಾಗುತ್ತಿರುವುದರಿಂದ ಕೆಲವರಂತೂ ಆತ್ಮಹತ್ಯೆಗೆ ಶರಣಾಗಿದ್ದಾರೆ. ನಿಮ್ಮ ಸರ್ಕಾರ, ರೈತರಿಗೆ ಕೊಟ್ಟಿರುವ ಪರಿಹಾರ ಅತ್ಯಲ್ಪ. ಕೊಡುವುದರಲ್ಲೂ ವಿಳಂಬವಾಗಿದೆ’ ಎಂದು ವಿವರಿಸಿದ್ದಾರೆ.



ರಥೋತ್ಸವ

ಬೆಂಗಳೂರಿನ ಶಿವಾಜಿನಗರದ ಸೆಪ್ಪಿಂಗ್ಸ್ ರಸ್ತೆಯಲ್ಲಿ ಮುತ್ಯಾಲಮ್ಮ ದೇವಿ ರಥೋತ್ಸವ ಬುಧವಾರ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ವೆಂಕಟಮ್ಮನಹಳ್ಳಿ ಹತ್ಯಾಕಾಂಡ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಪಾವಗಡ: ತಾಲ್ಲೂಕಿನ ವೆಂಕಟಮ್ಮನ ಹಳ್ಳಿ ಪೊಲೀಸ್ ಹತ್ಯಾಕಾಂಡದ ಆರೋಪಿ ಕೊತ್ತಗೆರೆ ಶಂಕರ್‌ನನ್ನು ತುಮಕೂರು ಮತ್ತು ಬೆಂಗಳೂರು ಆಂತರಿಕ ಭದ್ರತಾ ವಿಭಾಗದ ತಂಡ ಬುಧವಾರ ಬಂಧಿಸಿದೆ.

2005ರ ಫೆಬ್ರುವರಿ 10ರಂದು ರಾತ್ರಿ 300 ಮಂದಿ ಮಾವೊಯಿಸ್ಟ್ ನಕ್ಸಲರು ಗ್ರನೇಡ್, ಬಂದೂಕು, ಬಾಂಬ್ ಬಳಸಿ ಏಳು ಪೊಲೀಸರನ್ನು ಹತ್ಯೆ ಮಾಡಿದ್ದರು. ಒಬ್ಬ ಖಾಸಗಿ ಬಸ್ ಕ್ಲೀನರ್ ಮೃತಪಟ್ಟಿದ್ದರು. ತಿರುಮಣಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳು ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದರು.

ಪಟ್ಟಣದ ನ್ಯಾಯಾಲಯ ಬಾಡಿ ವಾರೆಂಟ್ ಹೊರಡಿಸಿತ್ತು.

ಬೆಂಗಳೂರಿನ ಬಿಬಿಎಂಪಿ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕೆಲ ತಿಂಗಳುಗಳ ಹಿಂದೆ ಆಂಧ್ರದಲ್ಲಿ ತಲೆಮರೆಸಿಕೊಂಡಿದ್ದ ನರಸಿಂಹ, ಪದ್ಮ, ಓಬಳೇಶ, ಆಂಜನೇಯುಲು, ರಾಮಮೋಹನ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು.

ಹೆಚ್ಚಿನ ಪರಿಹಾರಕ್ಕೆ ಮೋಸ: ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಭೂಸ್ವಾಧೀನಕ್ಕಾಗಿ ಅಧಿಸೂಚನೆ ಹೊರಡಿಸಿರುವ ನೆಲಮಂಗಲ ತಾಲ್ಲೂಕಿನ ಜಮೀನುಗಳಲ್ಲೇ ಕೆಲವರು ಹೆಚ್ಚುವರಿ ಪರಿಹಾರಕ್ಕಾಗಿಯೇ ಗಿಡ– ಮರಗಳನ್ನು ನೆಡುತ್ತಿದ್ದು, ಈ ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ಕೆಐಎಡಿಬಿ ಸಿಇಒ ಡಾ.ಎಂ.ಮಹೇಶ ವಿಶೇಷ ಜಿಲ್ಲಾಧಿಕಾರಿಗೆ ಸೂಚಿಸಿದ್ದಾರೆ.

ನೆಲಮಂಗಲ ತಾಲ್ಲೂಕಿನ ಹನುಮಂತಪುರ, ಬಿದ್ಲೂರು, ಕೋಡಿಪಾಳ್ಯ ವ್ಯಾಪ್ತಿಯಲ್ಲಿ ಇಂತಹ ಪ್ರಕರಣಗಳು ಕಂಡುಬಂದಿದ್ದು, ನಿಯಮಗಳ ಪ್ರಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಿದಾಗ ಜಮೀನುಗಳಲ್ಲಿ ಇರುವ ಗಿಡಮರಗಳು, ಕಟ್ಟಡಗಳಿಗೆ ಮಾತ್ರ ಪರಿಹಾರ ನೀಡಲಾಗುವುದು. ಆದರೆ, ಕೆಲವೆಡೆ ಹೆಚ್ಚಿನ ಪರಿಹಾರಕ್ಕಾಗಿ ಬೇರೆ ಜಮೀನುಗಳಲ್ಲಿ ಬೆಳೆದ ಗಿಡಗಳು, ದೊಡ್ಡ ಮರಗಳನ್ನು ತಂದು ನೆಡುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಅದಕ್ಕಾಗಿ ತನಿಖೆಗೆ ಸೂಚಿಸಲಾಗಿದೆ. ತನಿಖಾ ತಂಡದಲ್ಲಿ ಕೆಐಎಡಿಬಿ ಮುಖ್ಯ ಎಂಜಿನಿಯರ್ ಇರುತ್ತಾರೆ ಎಂದು ಹೇಳಿದ್ದಾರೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಅಥವಾ ಇಸ್ರೋದ ಸ್ಯಾಟಲೈಟ್ ಮ್ಯಾಪಿಂಗ್ ಆಧರಿಸಿ ಅಧಿಸೂಚಿತ ಜಮೀನುಗಳಿಗೆ ಪರಿಹಾರ ವಿತರಣೆ ಕಡ್ಡಾಯಗೊಳಿಸಲಾಗುವುದು. ಅಧಿಸೂಚನೆ ಹೊರಡಿಸಿದ ನಂತರ ಹೆಚ್ಚಿನ ಪರಿಹಾರಕ್ಕಾಗಿ ಗಿಡ ತಂದು ನೆಡುವುದರ ಮೂಲಕ ಸಂಸ್ಥೆಗೆ ನಷ್ಟ ಉಂಟು ಮಾಡಿದರೆ ಸಂಬಂಧಪಟ್ಟ ವಿಶೇಷ ಭೂಸ್ವಾಧೀನಾಧಿಕಾರಿಯನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

ಹಣ ಸುಲಿಗೆ ಆರೋಪ: ಎಎಸ್‌ಐ, ಕಾನ್‌ಸ್ಟೆಬಲ್ ಅಮಾನತು

ಬೆಂಗಳೂರು: ಹೊಯ್ಸಳ ವಾಹನದಲ್ಲಿ ಬಂದು ಸಾರ್ವಜನಿಕರಿಂದ ಹಣ ಸುಲಿಗೆ ಮಾಡುತ್ತಿದ್ದ ಆರೋಪದ ಮೇಲೆ ರಾಜಗೋಪಾಲನಗರ ಪೊಲೀಸ್ ಠಾಣೆಯ ಎಎಸ್‌ಐ ನೀಲಾಂಜನೇಯಮೂರ್ತಿ ಹಾಗೂ ಕಾನ್‌ಸ್ಟೆಬಲ್ ಪ್ರಸನ್ನಕುಮಾರ್ ಅವರನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಅಮಾನತು ಮಾಡಿ ಆದೇಶಿಸಿದ್ದಾರೆ.

ಮೇ 17ರಂದು ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪೀಣ್ಯ 2ನೇ ಹಂತದಲ್ಲಿ ಸಾರ್ವಜನಿಕರೇ ‘ಕಳ್ಳ ಕಳ್ಳ’ ಎಂದು ಹೊಯ್ಸಳ ಪೊಲೀಸರನ್ನು ಅಟ್ಟಾಡಿಸಿಕೊಂಡು ಹೋಗಿದ್ದರು. ಇದನ್ನು ಅಲ್ಲಿದ್ದ ಕೆಲವರು ವಿಡಿಯೊ ಮಾಡಿದ್ದರು. ಆ ವಿಡಿಯೊ ಜಾಲತಾಣದಲ್ಲಿ ಹರಿದಾಡಿತ್ತು.

‘ಅಂದು ಹೊಯ್ಸಳ ವಾಹನದಲ್ಲಿ ಕರ್ತವ್ಯದಲ್ಲಿದ್ದ ಇಬ್ಬರು ಪೊಲೀಸರು ರಾತ್ರಿ ವೇಳೆ ಜನರಿಂದ ಮಾಮೂಲಿ ಹಣ ವಸೂಲಿ ಮಾಡುತ್ತಿದ್ದರು ಎನ್ನುವ ಆರೋಪವಿದೆ. ಆಟೊದಲ್ಲಿ ಬಂದಿದ್ದ ಇಬ್ಬರು, ಪೊಲೀಸ್ ಸಿಬ್ಬಂದಿಯನ್ನು ಪ್ರಶ್ನಿಸಿದ್ದರು. ಆಗ ಗಾಬರಿಗೊಂಡ ಪೊಲೀಸರು ವೇಗವಾಗಿ ವಾಹನ ಚಲಾಯಿಸಿಕೊಂಡು ತೆರಳಿದ್ದರು. ಆಗ ವಾಹನ ಹಿಂಬಾಲಿಸಿದವರು ‘ಪೊಲೀಸ್ ಕಳ್ಳ... ಪೊಲೀಸ್ ಕಳ್ಳ...’ ಎಂದು ಜೋರಾಗಿ ಕಿರುಚಿದ್ದರು. ಆ ವಿಡಿಯೊ ಎಲ್ಲೆಡೆ ಹರಿದಾಡಿತ್ತು’ ಎಂದು ಮೂಲಗಳು ಹೇಳಿವೆ.

ಔತಣಕೂಟದಲ್ಲಿ ಹಲವು ವಿಷಯಗಳ ಕುರಿತು ಚರ್ಚೆ

ಮೇಲ್ಮನೆ ಚುನಾವಣೆ: ಸಚಿವರಿಗೇ ಹೊಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜೂನ್ 3ರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆ
- ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವಂತೆ ಆಯಾ ಕ್ಷೇತ್ರಗಳ ಸಚಿವರಿಗೆ ಗುರಿ

ಬೆಂಗಳೂರು: ಸಚಿವರಿಗೆ ತಮ್ಮ ವ್ಯಾಪ್ತಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಹೊಣೆ ನೀಡಿದಂತೆ ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಯಲ್ಲೂ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವ ಗುರಿ ನೀಡಲಾಗಿದೆ.

ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಕರೆದಿದ್ದ ಔತಣ ಕೂಟದಲ್ಲಿ ಭಾಗವಹಿಸಿದ್ದ ಎಲ್ಲ ಸಚಿವರಿಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿವಕುಮಾರ್ ಈ ಜವಾಬ್ದಾರಿ ವಹಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಸಚಿವರಿಗೆ ಹೊಣೆ ನೀಡುವ ಜತೆಗೆ, ಕೆಲ ಕ್ಷೇತ್ರಗಳಲ್ಲಿ ಸಚಿವರ ಮಕ್ಕಳಿಗೇ ಅವಕಾಶ ನೀಡುವ ಮೂಲಕ ಈ ಬಾರಿ ರಾಜ್ಯದಿಂದ ಅತಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಕಾರ್ಯತಂತ್ರ ರೂಪಿಸಲಾಗಿತ್ತು. ಜೂನ್ 3ರಂದು ಈಶಾನ್ಯ ಪದವೀಧರ ಕ್ಷೇತ್ರ, ಬೆಂಗಳೂರು ಪದವೀಧರ ಕ್ಷೇತ್ರ, ಆಗ್ನೇಯ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರರ ಕ್ಷೇತ್ರ ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರಗಳಲ್ಲಿ ಮತದಾನ ನಡೆಯುತ್ತಿದ್ದು, ಎಲ್ಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲು ಆಯಾ ವ್ಯಾಪ್ತಿಯ ಸಚಿವರು ಸಮನ್ವಯದಿಂದ ಕೆಲಸ ಮಾಡುವಂತೆ ಇಬ್ಬರು ನಾಯಕರು ಸೂಚನೆ ನೀಡಿದ್ದಾರೆ.

ವಿಧಾನಸಭೆಯಿಂದ ಆಯ್ಕೆಗೆ ಕಾರ್ಯತಂತ್ರ: ವಿಧಾನಸಭೆಯಿಂದ ಪರಿಷತ್ತಿನ 11 ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿದ್ದು, ಕಾಂಗ್ರೆಸ್‌ಗೆ 7 ಸ್ಥಾನ ಸಿಗಲಿವೆ. ಹಲವು ಸಚಿವರು ಕೆಲವರ ಹೆಸರು ಪ್ರಸ್ತಾಪಿಸಿ, ಅವರಿಗೆ ಅವಕಾಶ ನೀಡಬೇಕು ಎಂದು ಬೇಡಿಕೆ ಮಂಡಿಸಿದ್ದಾರ ಎಂದು ಗೊತ್ತಾಗಿದೆ.

ಹಾಲಿ ಸದಸ್ಯರಾದ ಹರೀಶ್ ಕುಮಾರ್, ಅರವಿಂದ ಕುಮಾರ್ ಅರಳಿ ಅವರನ್ನು ಮುಂದುವರಿಸುವ ಕುರಿತು, ಈಚೆಗೆ ಪಕ್ಷ ಸೇರಿದ ಸಂಸದ ಸಂಗಣ್ಣ ಕರಡಿ, ಬಾಬುರಾವ್ ಚಿಂಚನಸೂರ್, ಮಾಲೀಕಯ್ಯ ಗುತ್ತೇದಾರ್ ಅವರನ್ನು ಪರಿಗಣಿಸುವ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಮುಖ್ಯಮಂತ್ರಿ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರಿಗೂ ಅವಕಾಶ ಕಲ್ಪಿಸಬೇಕು ಎಂಬ ಚರ್ಚೆಯೂ ನಡೆಯಿತು ಎಂದು ಮೂಲಗಳು ಹೇಳಿವೆ.

ಮುಂದೆ ಬರಲಿರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಿಗೆ ಸಿದ್ಧತೆ ನಡೆಸುವ, ಪಕ್ಷದ ಕಾರ್ಯಕರ್ತರನ್ನು ಈಗಿಂದಲೇ ಸಜ್ಜುಗೊಳಿಸುವ ಕುರಿತು ಚರ್ಚೆಗಳು ನಡೆದಿವೆ.

ದಿನಕ್ಕೊಂದು ವಿಷಯ ತೆಗೆದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ನಡೆಗೆ ಹಲವು ಸಚಿವರು ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ತಕ್ಕ ಪ್ರತ್ಯುತ್ತರ ನೀಡುವ ಕುರಿತು ಚರ್ಚೆ ನಡೆಸಿದ್ದಾರೆ.

ಕಾರು ಚಾಲಕ, ಬೈಕ್ ಸವಾರನ ಬಡಿದಾಟ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಸರ್ಜಾಪುರದ ರಸ್ತೆಯಲ್ಲಿ ಮುಂದಕ್ಕೆ ಸಾಗಲು ಜಾಗ ಬಿಡದ ವಿಚಾರಕ್ಕೆ ಕಾರು ಚಾಲಕ ಹಾಗೂ ಬೈಕ್ ಸವಾರನ ನಡುವೆ ಬಡಿದಾಟ ನಡೆದಿದ್ದು, ದೂರು–ಪ್ರತಿದೂರು ದಾಖಲಾಗಿದೆ.

ಕಾರು ಚಾಲಕ, ಫ್ಲಿಪ್ ಕಾರ್ಟ್ ಇಂಟರ್‌ನೆಟ್ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಅಖಿಲ್ ಸಾಬ್ ಹಾಗೂ ಬೈಕ್ ಸವಾರ, ವಕೀಲ ಜಗದೀಶ್ ದೂರು–ಪ್ರತಿದೂರು ನೀಡಿದ್ದಾರೆ.

ಇಬ್ಬರೂ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. ಕೇರಳದ ಅಖಿಲ್ ಸಾಬ್ ಅವರು ಕೊಡತಿಯಲ್ಲಿ ನೆಲಸಿದ್ದಾರೆ. ಜಗದೀಶ್ ಅವರು ಸರ್ಜಾಪುರದ ನಿವಾಸಿ.

‘ಮೇ 17ರಂದು ಬೆಳಿಗ್ಗೆ 10.30ಕ್ಕೆ ಪತ್ನಿ ಹಾಗೂ ಪುತ್ರಿಯ ಜೊತೆಗೆ ಕಾರಿನಲ್ಲಿ ಸರ್ಜಾಪುರ ಮುಖ್ಯರಸ್ತೆಯಲ್ಲಿ ತೆರಳುತ್ತಿದ್ದೆ. ಸರ್ಜಾಪುರ ರಸ್ತೆಯ ಪ್ಯಾಟ್ರಿಕ್ ರಸ್ತೆಯ ಬಳಿ ಸ್ಕೂಟರ್‌ನಲ್ಲಿ ಬಂದ ಸವಾರ ಎಡಭಾಗದಿಂದ ಬಂದು ಕಾರು ಹಿಂದಿಕ್ಕಲು ಪ್ರಯತ್ನಿಸಿದರು. ರಸ್ತೆಯಲ್ಲಿ ಜಾಗ ಬಿಡದಿದ್ದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ನಂತರ ಕಾರು ಅಡ್ಡಗಟ್ಟಿ ಕಾರಿನ ಕಿಟಕಿಯನ್ನು ಹೆಲ್ಮೆಟ್‌ನಿಂದ ಒಡೆದು ಹಾಕಿದರು. ಅದರ ಗಾಜು ಬಿದ್ದು ಪುತ್ರಿ ಹಾಗೂ ಪತ್ನಿಗೆ ಗಾಯವಾಗಿದೆ’ ಎಂದು ಅಖಿಲ್ ಸಾಬ್ ದೂರು ನೀಡಿದ್ದಾರೆ. ಜಗದೀಶ್ ಅವರೂ ‘ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ದೂರು ನೀಡಿದ್ದಾರೆ.

ಕೇರಳದಲ್ಲಿ ಮಳೆ ನಾಲ್ವರ ಸಾವು

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು, ಹಲವೆಡೆ ಮನೆಗಳಿಗೆ ನೀರು ನುಗ್ಗಿದೆ. ವಿವಿಧೆಡೆ ಇದರಿಂದಾಗಿ ಸಂಭವಿಸಿರುವ ಅವಘಡಗಳಲ್ಲಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಕೇರಳ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಸಂಸ್ಥೆಯು (ಕೆಎಸ್‌ಡಿಎಂಎ) ತಿಳಿಸಿದೆ.

ಪತನಂತ್ತಿಟ್ಟ, ಅಳಪ್ಪುಳ, ಕೊಟ್ಟಾಯಂ, ಎರ್ನಾಕುಲಂ ಹಾಗೂ ಇಡುಕ್ಕಿ ಜಿಲ್ಲೆಗಳಿಗೆ ಭಾರತ ಹವಾಮಾನ ಇಲಾಖೆಯು (ಐಎಂಡಿ) ‘ರೆಡ್ ಅಲರ್ಟ್’ ಘೋಷಿಸಿದೆ.



ಬೆಂಗಳೂರು ನಗರದ ಆರ್‌.ವಿ. ಎಂಜಿನಿಯರಿಂಗ್ ಕಾಲೇಜು ಬಳಿಯಲ್ಲಿನ ಮೈಸೂರು ರಸ್ತೆ ಮತ್ತು ದುಬಾಸಿಪಾಳ್ಯ ಸಂಪರ್ಕಿಸುವ ಅಂಡರ್‌ಪಾಸ್ ಕೆಲವು ತಿಂಗಳುಗಳ ಹಿಂದೆಯಷ್ಟೆ ಉದ್ಘಾಟನೆಗೊಂಡಿತ್ತು. ಅಲ್ಲಿ ಈಗ ಮಳೆ ನೀರು ನಿಂತಿರುವುದರಿಂದ ನಾಲ್ಕು ದಿನಗಳಿಂದ ಸಾರ್ವಜನಿಕ ಬಳಕೆಗೆ ಲಭ್ಯ ಇಲ್ಲದಂತಾಗಿದೆ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಖಾಸಗಿ ಶಾಲೆಗಳಿಗೆ ಮಕ್ಕಳ ಆಯೋಗ ಭೇಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರಾಜಾಜಿನಗರ ಸುತ್ತಮುತ್ತ ಕೆಲವು ಶಾಲೆಗಳ ಆರಂಭ
- ಮೇ29ರ ಮುನ್ನ ತೆರೆದ ಶಾಲೆಗಳ ವಿರುದ್ಧ ಕ್ರಮಕ್ಕೆ ಅಧಿಕಾರಿಗಳ ಶಿಫಾರಸು

ಬೆಂಗಳೂರು: ಬೇಸಿಗೆ ರಜೆಯಲ್ಲೂ ತರಗತಿ ನಡೆಸುತ್ತಿದ್ದ ಕೆಲ ಖಾಸಗಿ ಶಾಲೆಗಳಿಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಕೆಸಿಪಿಸಿಆರ್) ಬುಧವಾರ ದಿಢೀರ್ ಭೇಟಿ, ಪರಿಶೀಲನೆ ನಡೆಸಿತು.

‘ಕೆಲ ಖಾಸಗಿ ಶಾಲೆಗಳು ಏ.15ರಿಂದಲೇ ಕಾರ್ಯ ನಿರ್ವಹಿಸುತ್ತಿವೆ ಎಂದು ಕರ್ನಾಟಕ ಶಾಲಾ ಕಾಲೇಜು ಪಾಲಕರ ಸಂಘಗಳ ಸಮನ್ವಯ ಸಮಿತಿ ದೂರು ಸಲ್ಲಿಸಿತ್ತು. ಮೇ 29ರಿಂದ ಶಾಲೆ ಆರಂಭಿಸಬೇಕು. ಅದಕ್ಕೆ ಮೊದಲು ತರಗತಿಗಳನ್ನು ನಡೆಸಬಾರದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಈಚೆಗಷ್ಟೇ ಸುತ್ತೋಲೆ ಹೊರಡಿಸಿತ್ತು. ಆದರೂ ಶಾಲೆಗಳು ರಜೆ ನೀಡಿರಲಿಲ್ಲ. ಹಾಗಾಗಿ, ಭೇಟಿ ನೀಡಿ ಎಚ್ಚರಿಕೆ ನೀಡಿದ್ದೇವೆ’ ಎಂದು ಆಯೋಗದ ಅಧ್ಯಕ್ಷ ನಾಗಣ್ಣಗೌಡ ಹೇಳಿದರು.

‘ರಾಜಾಜಿನಗರ ಹಾಗೂ ಸುತ್ತಮುತ್ತಲಿನ ಕೆಲ ಶಾಲೆಗಳಿಗೆ ಭೇಟಿ ನೀಡಿದೆವು. ಶಾಲಾ ಆಡಳಿತ ಮಂಡಳಿಗಳು ಶಾಲೆ ತೆರೆದಿರುವ ತಮ್ಮ ನಿರ್ಧಾರ ಸಮರ್ಥಿಸಿಕೊಳ್ಳಲು ಮುಂದಾದವು. ಕಡಿಮೆ ಅಂಕ ಪಡೆದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರಿಹಾರ ಬೋಧಿಸುತ್ತಿರುವುದಾಗಿ ಶಿಕ್ಷಕರು ತಿಳಿಸಿದರು. ಆದರೆ, ಕೆಳಹಂತದ ತರಗತಿಗಳೂ ನಡೆಯುತ್ತಿದ್ದವು. ಇದು ಮಕ್ಕಳ ಹಕ್ಕುಗಳ ಉಲ್ಲಂಘನೆ. ಇಂತಹ ಶಾಲೆಗಳ ವಿರುದ್ಧ ಕ್ರಮ ಜರುಗಿಸಲು ಶಿಫಾರಸು ಮಾಡುತ್ತೇವೆ’ ಎಂದು ನಾಗಣ್ಣಗೌಡ ಮಾಹಿತಿ ನೀಡಿದರು.

ತುಂಬಿದ ಮಂಚನಬೆಲೆ ಜಲಾಶಯ

ಪ್ರಜಾವಾಣಿ ವಾರ್ತೆ

ಮಾಗಡಿ (ಕುದೂರು): ಬೆಂಗಳೂರಿನ ಸುತ್ತಮುತ್ತ ಉತ್ತಮ ಮಳೆಯಾಗುತ್ತಿದ್ದು, ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರಿನ ಹರಿವು ಹೆಚ್ಚಾಗಿದೆ. ನೀರು ಬರುತ್ತಿರುವುದರಿಂದ ಜಲಾಶಯದಿಂದ ಪ್ರತಿದಿನ 10 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ.

ಮಂಚನಬೆಲೆ ಜಲಾಶಯದ ಮೇಲ್ಭಾಗದಲ್ಲಿ ಉತ್ತಮ ಮಳೆಯಾಗುತ್ತಿದ್ದು ಜಲಾಶಯಕ್ಕೆ ನೀರಿನ ಹರಿವಿನ ಪ್ರಮಾಣ ಹೆಚ್ಚಾಗಿದೆ. ಇದರಿಂದ ಜಲಾಶಯದಲ್ಲಿ ನೀರಿನ ಮಟ್ಟ ಗರಿಷ್ಠ ಮಿತಿ ತಲುಪಿದೆ. ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಜಲಾಶಯದಿಂದ ನೀರು ಬಿಡಲಾಗುತ್ತಿದೆ ಎಂದು ಮಂಚನಬೆಲೆ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಜಲಾಶಯದ ಕೆಳಗಿನ ನದಿ ಪಾತ್ರದ ಅಕ್ಕಪಕ್ಕದ ಗ್ರಾಮಗಳ ಜನರು, ಜಾನುವಾರುಗಳನ್ನು ನದಿ ಪಾತ್ರದಲ್ಲಿ ಬಿಡುವುದಾಗಲಿ, ನದಿಯನ್ನು ದಾಟುವುದಾಗಲಿ ಮಾಡಬಾರದೆಂದು ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ.

ಕಳೆದ ಬಾರಿ ಮಂಚನಬೆಲೆ ಜಲಾಶಯದಿಂದ ಹೆಚ್ಚುವರಿ ನೀರು ಹರಿಬಿಟ್ಟ ಪರಿಣಾಮ ಜಲಾಶಯದ ಪಕ್ಕದ ಮುಖ್ಯ ಸೇತುವೆ ಕೊಚ್ಚಿಹೋಗಿದೆ. ಈಗ ತಾತ್ಕಾಲಿಕ ಸೇತುವೆಯಲ್ಲಿ ಸಾರ್ವಜನಿಕರು ಸಂಚಾರ ಮಾಡುತ್ತಿದ್ದಾರೆ. ಕಾವೇರಿ ನೀರಾವರಿ ನಿಗಮದಿಂದ ಹೊಸದಾಗಿ ಸೇತುವೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣವಾಗಿದೆ. ಶೀಘ್ರ ಹೊಸ ಸೇತುವೆ ಕಾಮಗಾರಿ ಆರಂಭಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದಿಂದ ಹೆಚ್ಚುವರಿ ನೀರನ್ನು ಹೊರ ಬಿಡಲಾಯಿತು

‘ಲೈಂಗಿಕ ಕಾರ್ಮಿಕರನ್ನು ಗೌರವದಿಂದ ಕಾಣಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ಕಾರ್ಮಿಕರನ್ನು ಇತರೆ ಎಲ್ಲ ಪ್ರಜೆಗಳಂತೆ ಘನತೆ ಮತ್ತು ಗೌರವದಿಂದ ನೋಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಾಧನ ಮಹಿಳಾ ಸಂಘ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಸದಸ್ಯೆ ಗೀತಾ ಎಂ., ‘ಲೈಂಗಿಕ ಕಾರ್ಮಿಕರ ಘನತೆಯ ಹಕ್ಕು, ಪೊಲೀಸ್ ಹಿಂಸಾಚಾರದ ವಿರುದ್ಧ ಅವರ ಹಕ್ಕು ಮತ್ತು ಇತರೆ ಪ್ರಮುಖ ಸಾಂವಿಧಾನಿಕ ಖಾತರಿಗಳನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ವೇಶ್ಯಾವಾಟಿಕೆಯೂ ಒಂದು ವೃತ್ತಿ ಮತ್ತು ಲೈಂಗಿಕ ಕಾರ್ಯಕರ್ತೆಯರು ಕೂಡ ಕಾನೂನಿನ ಅಡಿಯಲ್ಲಿ ಘನತೆಯಿಂದ ಬದುಕಲು ಹಾಗೂ ಸಮಾನ ರಕ್ಷಣೆಯನ್ನು ಪಡೆಯಲು ಅರ್ಹರು ಎಂಬ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ರಾಜ್ಯ ಸರ್ಕಾರಗಳು ಕಾರ್ಯರೂಪಕ್ಕೆ ತರಬೇಕು’ ಎಂದು ಆಗ್ರಹಿಸಿದರು.

ಉತ್ತರ ಕರ್ನಾಟಕ ಮಹಿಳಾ ಒಕ್ಕೂಟದ ಕಾರ್ಯದರ್ಶಿ ಹುಲಿಗೆಮ್ಮ, ‘ಐಟಿಪಿಎ ಕಾಯ್ದೆಯು ಸ್ವ–ಇಚ್ಛೆಯಿಂದ ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಗ್ರಾಹಕರನ್ನು ಆಯ್ದುಕೊಳ್ಳುವಂತಿಲ್ಲ. 18 ವರ್ಷ ಮೇಲ್ಪಟ್ಟವರು ಲೈಂಗಿಕ ಕಾರ್ಮಿಕರ ಮೇಲೆ ಅವಲಂಬಿತರಾಗ ಬಾರದೆಂದು ಐಟಿಪಿಎ ಕಾಯ್ದೆ ಹೇಳುತ್ತದೆ. ಆದ್ದರಿಂದ ಈ ಕಾಯ್ದೆಯನ್ನು ಪರಾಮರ್ಶಿಸುವ ಅಗತ್ಯವಿದೆ’ ಎಂದರು.

‘ಸರ್ಕಾರ ಲೈಂಗಿಕ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ಯೋಜನೆ ರೂಪಿಸಬೇಕು. ಲೈಂಗಿಕ ಕಾರ್ಮಿಕರಿಗೆ ಸಾಮಾಜಿಕ ರಕ್ಷಣೆ ಸಿಗುವಂತೆ ಏಕಗವಾಕ್ಷಿ ವ್ಯವಸ್ಥೆಯನ್ನು ಸ್ಥಾಪಿಸಬೇಕು. ಸರ್ವರಿಗೂ ಸೂರು ಅಭಿಯಾನದಡಿ ಲೈಂಗಿಕ ಕಾರ್ಮಿಕರಿಗೂ ಮನೆಗಳನ್ನು ಒದಗಿಸಬೇಕು. ಎಚ್‌ಐವಿ ಬಾಧಿತ ಲೈಂಗಿಕ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿ ಔಷಧಿಗಳು ಸೇರಿದಂತೆ ಪೌಷ್ಟಿಕ ಆಹಾರವನ್ನು ನೀಡಬೇಕು. ದಾಖಲಾತಿ ಕೇಳದೇ ಲೈಂಗಿಕ ಕಾರ್ಮಿಕರ ಮಕ್ಕಳನ್ನು ಶಾಲೆಗಳಿಗೆ ಸೇರಿಸಿಕೊಳ್ಳಬೇಕು. ಕೇಂದ್ರೀಯ ಶಾಲೆಗಳಲ್ಲೂ ನಮ್ಮ ಮಕ್ಕಳಿಗೆ ಮೀಸಲಾತಿಯನ್ನು ನೀಡಬೇಕು’ ಎಂದು ಒತ್ತಾಯಿಸಿದರು.

ಲಂಚ ಪಡೆದ ಸಿಬಿಐ ಇನ್‌ಸ್ಪೆಕ್ಟರ್ ವಜಾ

ನವದೆಹಲಿ(ಪಿಟಿಐ): ಮಧ್ಯಪ್ರದೇಶ ಮೂಲದ ನರ್ಸಿಂಗ್ ಕಾಲೇಜು ಮುಖ್ಯಸ್ಥರಿಂದ ₹10 ಲಕ್ಷ ಲಂಚ ಪಡೆಯುವಾಗ ಸಿಕ್ಕಿಬಿದ್ದ ಸಿಬಿಐ ಇನ್‌ಸ್ಪೆಕ್ಟರ್ ರಾಹುಲ್ ರಾಜ್ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಭ್ರಷ್ಟಾಚಾರದ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವುದು ಸಿಬಿಐ ಧ್ಯೇಯವಾಗಿದ್ದು, 311ನೇ ವಿಧಿಯ ಅಡಿ ಸರ್ಕಾರಿ ನೌಕರರ ಸೇವೆ ವಜಾಗೊಳಿಸಲು ಸಂವಿಧಾನ ಅನುಮತಿಸಿರುವ ಅವಕಾಶ ಬಳಸಿಕೊಂಡು ರಾಹುಲ್ ರಾಜ್ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಅವರು ಹೇಳಿದರು.

ಈ ಪ್ರಕರಣದ ಎಫ್‌ಐಆರ್‌ನಲ್ಲಿ ಹೆಸರಿರುವ ಡಿಎಸ್‌ಪಿ ಆಶೀಶ್ ಪ್ರಸಾದ್ ಅವರನ್ನು ಕೇಂದ್ರ ಕಚೇರಿಗೆ ವಾಪಸ್ ಕಳಿಸಲಾಗಿದೆ. ಮಧ್ಯಪ್ರದೇಶ ಪೊಲೀಸ್ ಇಲಾಖೆಯಿಂದ ಸಿಬಿಐಗೆ ನಿಯೋಜಿತರಾಗಿದ್ದ ಸುಶೀಲ್ ಕುಮಾರ್ ಮಜೋಕಾ ಮತ್ತು ರಿಷಿ ಕಾಂತ್ ಅಸಾಥೆ ಅವರನ್ನು ಶೀಘ್ರದಲ್ಲೇ ರಾಜ್ಯ ಪೊಲೀಸ್ ಇಲಾಖೆಗೆ ವಾಪಸ್ ಕಳುಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

'ನಮ್ಮ ಮೆಟ್ರೊ' ಹಳದಿ ಮಾರ್ಗ: ವಾಣಿಜ್ಯ ಸಂಚಾರ ಆರಂಭಿಸಲು ಮೊದಲ ಹಂತದ ಸಿದ್ಧತೆ

ವಯಾಡಕ್ಟ್‌ನಲ್ಲಿ ಪರಿಶೀಲನೆ ಕಾರ್ಯ

● ಆದಿತ್ಯ ಕೆ.ಎ.

ಬೆಂಗಳೂರು: 'ನಮ್ಮ ಮೆಟ್ರೊ'ದ ಹಳದಿ ಮಾರ್ಗ (ರೀಚ್–5ರ ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರದ ವರೆಗೆ) ಸಿವಿಲ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಈ ಮಾರ್ಗದ ವಯಾಡಕ್ಟ್‌ನಲ್ಲಿ ಪರೀಕ್ಷಾರ್ಥವಾಗಿ ವಿದ್ಯುತ್ ಹರಿಸಿ ಪರಿಶೀಲಿಸುವ ಕಾರ್ಯ ಆರಂಭವಾಗಿದೆ.

ಈ ಪರೀಕ್ಷಾರ್ಥ ಕೆಲಸದಿಂದ ಹಳದಿ ಮಾರ್ಗದಲ್ಲಿ ಕೊನೆಗೂ ಮೆಟ್ರೊ ರೈಲು ಸಂಚಾರ ಆರಂಭಿಸುವ ನಿರೀಕ್ಷೆಗಳು ಗರಿಗೆದರಿವೆ. ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾದರೆ ಜಯದೇವ, ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ ಭಾಗದಲ್ಲಿ ವಾಹನ ದಟ್ಟಣೆ ತಗ್ಗುವ ಸಾಧ್ಯತೆಯಿದೆ.

'ಕಳೆದ ಡಿಸೆಂಬರ್‌ನಲ್ಲೇ ಈ ಮಾರ್ಗದಲ್ಲಿ ವಾಣಿಜ್ಯ ಸಂಚಾರ ಆರಂಭಿಸುವ ಆಲೋಚನೆಯಲ್ಲಿ ಬಿಎಂಆರ್‌ಸಿಎಲ್ ಇತ್ತು. ಆದರೆ, ಚಾಲಕ ರಹಿತ ಬೋಗಿಗಳ ಪೂರೈಕೆ, ಸಿವಿಲ್ ಕಾಮಗಾರಿ ವಿಳಂಬದಿಂದ ಅದು ಸಾಧ್ಯವಾಗಿರಲಿಲ್ಲ. ಅಂದುಕೊಂಡಂತೆ ಎಲ್ಲವೂ ಕಾರ್ಯ ಸಾಧ್ಯವಾದರೆ ಅಕ್ಟೋಬರ್ ಅಥವಾ ನವೆಂಬರ್ ಅಂತ್ಯದ ವೇಳೆಗೆ ವಾಣಿಜ್ಯ ಸಂಚಾರ ಆರಂಭಿಸುತ್ತೇವೆ.



ವಿಶೇಷವಾಗಿ ವಿನ್ಯಾಸಗೊಂಡಿರುವ ಹಳದಿ ಮಾರ್ಗದ ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣ

ಆಗಸ್ಟ್ ಅಂತ್ಯದ ವೇಳೆಗೆ ಎಲ್ಲ ಬೋಗಿಗಳ ಪೂರೈಕೆ ಆಗಲಿದೆ' ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ಮೊದಲ ಹಂತದಲ್ಲಿ ಬಿಟಿಎಂ ಲೇಔಟ್ ನಿಲ್ದಾಣದ ಪ್ಲಾಟ್‌ಫಾರ್ಮ್, ಜಯದೇವ ನಿಲ್ದಾಣ, ರಾಗಿಗುಡ್ಡ ನಿಲ್ದಾಣ, ಆರ್.ವಿ.ರಸ್ತೆ ನಿಲ್ದಾಣದ ಬಫರ್ ಕೊನೆಯವರೆಗೆ ಹೋಗಲಿರುವ 33 ಕೆವಿ ಕೇಬಲ್‌ಗಳು ಹಾಗೂ ವಯಾಡಕ್ಟ್ 750 ವೋಲ್ಟ್ ಡಿಸಿ ಥರ್ಡ್ ರೈಲು ಭಾಗಗಳಲ್ಲಿ ಪರೀಕ್ಷಾರ್ಥವಾಗಿ ವಿದ್ಯುತ್ ಹರಿಸಲಾಗುತ್ತಿದೆ. ಇದಾದ ಮೇಲೆ ಬೊಮ್ಮಸಂದ್ರ, ಹೆಬ್ಬಗೋಡಿ, ಇನ್ಫೋಸಿಸ್ ನಿಲ್ದಾಣ, ಎಲೆಕ್ಟ್ರಾನಿಕ್ ಸಿಟಿ ಸೇರಿ ಹಳದಿ ಮಾರ್ಗದ ವಯಾಡಕ್ಟ್‌ನಲ್ಲಿ ಪರೀಕ್ಷಾರ್ಥವಾಗಿ ವಿದ್ಯುತ್ ಹರಿಸಲಾಗುವುದು ಎಂದು ಅಧಿಕಾರಿಗಳು ಹೇಳುತ್ತಾರೆ.

'ಇದಕ್ಕೂ ಮೊದಲು ಚಾಲಕ ರಹಿತ ಮೆಟ್ರೊ ರೈಲಿನ ಕೆಲವು ಬೋಗಿಗಳನ್ನು ಜನರೇಟರ್ ಸಹಾಯದಿಂದ ಪರೀಕ್ಷಾರ್ಥವಾಗಿ ಓಡಿಸಲಾಗಿತ್ತು. ವಿದ್ಯುದ್ದೀಕರಣ ಆದ ಮೇಲೆ ಮತ್ತೆ ರೈಲಿನ ಪರೀಕ್ಷಾರ್ಥ ಸಂಚಾರ ನಡೆಯಲಿದೆ' ಎಂದು ಸಿಬ್ಬಂದಿ ಹೇಳುತ್ತಾರೆ.

ಹಳದಿ ಮಾರ್ಗ ಹಲವು ವಿಶೇಷತೆಯಿಂದ ಕೂಡಿದೆ. ಈ ಮಾರ್ಗದಲ್ಲಿ ಸಂಚಾರ ಆರಂಭವಾದರೆ ನೇರಳೆ, ಹಸಿರು ನಂತರದ ಮಾರ್ಗ ಇದಾಗಲಿದೆ. ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ 3.3 ಕಿ.ಮೀ. ಉದ್ದ ಒಂದೇ ಪಿಲ್ಲರ್‌ಗೆ ರೋಡ್ ಕಂ ರೇಲ್ (ಡಬಲ್ ಡೆಕ್ಕರ್) ಸೇತುವೆ ನಿರ್ಮಿಸಲಾಗಿದೆ. ಮೊದಲ ಮಟ್ಟದಲ್ಲಿ ರಸ್ತೆಯಿದ್ದು, ಎರಡು ಮಾರ್ಗ ಒಳಗೊಂಡಿದೆ. ಎರಡನೇ ಮಟ್ಟದಲ್ಲಿ ಮೆಟ್ರೊ ರೈಲು ಸಂಚಾರ ಇರಲಿದೆ. ನೆಲದಲ್ಲಿರುವ ರಸ್ತೆಯಲ್ಲಿ ಸದ್ಯವಿರುವ ತ್ರಿಪಥ ರಸ್ತೆ ಮಾರ್ಗವಿದ್ದು, ಮೆಟ್ರೊ ಸಂಚಾರ ಆರಂಭವಾಗದ ಕಾರಣ 'ಡಬಲ್ ಡೆಕ್ಕರ್' ರಸ್ತೆಯನ್ನು ಸದ್ಯ ಬಂದ್ ಮಾಡಲಾಗಿದೆ.



ಪರಿಶೀಲನೆ ಎಲ್ಲೆಲ್ಲಿ?

- ಬೊಮ್ಮಸಂದ್ರ
- ಹೆಬ್ಬಗೋಡಿ
- ಇನ್ಫೋಸಿಸ್ ಮೆಟ್ರೊ ನಿಲ್ದಾಣ
- ಎಲೆಕ್ಟ್ರಾನಿಕ್ ಸಿಟಿ
- ಬಿ.ಅಗ್ರಹಾರ ನಿಲ್ದಾಣ
- ಹೊಸರೋಡ್ ನಿಲ್ದಾಣ
- ಸಿಂಗಸಂದ್ರ
- ಕೂಡ್ಲುಗೇಟ್
- ಹೊಂಗಸಂದ್ರ
- ಬೊಮ್ಮನಹಳ್ಳಿ
- ಸೆಂಟ್ರಲ್ ಸಿಲ್ಕ್‌ಬೋರ್ಡ್
- ಬಿಟಿಎಂ ನಿಲ್ದಾಣ
- ಜಯದೇವ ನಿಲ್ದಾಣ
- ರಾಗಿಗುಡ್ಡ
- ಆರ್.ವಿ.ರಸ್ತೆ ನಿಲ್ದಾಣ

> ಅನುಮತಿ ಇಲ್ಲದೇ ವಯಾಡಕ್ಟ್ ಹತ್ತಿರ ಯಾರೂ ಸುಳಿಯಬಾರದು. ಕೇಬಲ್ ಅಥವಾ ವಯಾಡಕ್ಟ್ ಅನ್ನು ನೇರವಾಗಿ ಸಂಪರ್ಕಿಸಿದರೆ ಅಪಾಯ ಉಂಟು ತರುವ ಸಾಧ್ಯತೆಯಿದೆ
> — ಬಿಎಂಆರ್‌ಸಿಎಲ್ ಅಧಿಕಾರಿ

ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ ಮಾರ್ಗದ ಕಾಮಗಾರಿ 2017ರಲ್ಲಿ ಆರಂಭಗೊಂಡಿತ್ತು. ವಿಶೇಷ ವಿನ್ಯಾಸ ನಡೆಸುವ ಕಾರಣಕ್ಕೆ ಕಾಮಗಾರಿ ನಿಧಾನವಾಗಿ ನಡೆಯುತ್ತಿದೆ. ಸಿಲ್ಕ್ ಬೋರ್ಡ್‌ನಲ್ಲಿ ಪಾದಚಾರಿ ಮಾರ್ಗ ಪ್ರಗತಿಯಲ್ಲಿದೆ. ಜಯದೇವ, 'ಇನ್ಫೊಸಿಸ್ ಸೇರಿದಂತೆ ಕೆಲವು ನಿಲ್ದಾಣಗಳಲ್ಲಿ ಸಣ್ಣಪುಟ್ಟ ಕಾಮಗಾರಿ ಮಾತ್ರ ಬಾಕಿಯಿದೆ. ಜಯದೇವದಲ್ಲಿ 'ಇಂಟರ್‌ಚೇಂಜ್' ನಿಲ್ದಾಣವು 6 ಹಂತದಲ್ಲಿ ನಿರ್ಮಾಣಗೊಂಡಿದೆ.

ಬಿಎಂಆರ್‌ಸಿಎಲ್‌ನ 2ನೇ ಇಂಟರ್ ಚೇಂಜ್ ನಿಲ್ದಾಣವೆಂಬ ಹೆಗ್ಗಳಿಕೆಗೂ ಈ ನಿಲ್ದಾಣ ಪಾತ್ರವಾಗಲಿದೆ. ಮೆಜೆಸ್ಟಿಕ್‌ಗಿಂತ ವಿಸ್ತಾರವಾದ ನಿಲ್ದಾಣ ಇದಾಗಲಿದೆಯೆಂದು ಮೂಲಗಳು ತಿಳಿಸಿವೆ.

ಕೆಪಿಟಿಸಿಎಲ್ ನೌಕರರ ಸಂಘಕ್ಕೆ ಚುನಾವಣೆ: ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ನೌಕರರ ಸಂಘದ ಪದಾಧಿಕಾರಿಗಳ ಆಯ್ಕೆಗೆ ಇದೇ 23ರಂದು ನಿಗದಿಯಾಗಿರುವ ಚುನಾವಣೆಯನ್ನು ನಡೆಸಲು ಹೈಕೋರ್ಟ್ ಅನುಮತಿ ನೀಡಿದೆ.

'ಚುನಾವಣೆ ಪ್ರಕ್ರಿಯೆಗಳಲ್ಲಿ ನಿಯಮಗಳನ್ನು ಸೂಕ್ತವಾಗಿ ಅನುಸರಿಸುತ್ತಿಲ್ಲ' ಎಂದು ಆಕ್ಷೇಪಿಸಿ ಆರ್. ಮುರಳೀಧರ ಸೇರಿದಂತೆ ಸಂಘದ 10 ಮಂದಿ ಸದಸ್ಯರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ಜಿ.ಎಸ್ ಕಮಲ್ ಅವರು ಈ ಕುರಿತಂತೆ ಆದೇಶಿಸಿದ್ದಾರೆ.

'ಚುನಾವಣಾ ಫಲಿತಾಂಶವು ಅರ್ಜಿ ಕುರಿತಂತೆ ಹೈಕೋರ್ಟ್ ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ' ಎಂದು ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

'ಒಮ್ಮೆ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ನಂತರ ಆ ಪ್ರಕ್ರಿಯೆಯಲ್ಲಿ ಯಾವುದೇ ಹಸ್ತಕ್ಷೇಪ ಮಾಡಬಾರದು ಎಂದು ಕಾನೂನು ಸ್ಪಷ್ಟವಾಗಿ ಹೇಳುತ್ತದೆ. ಆದರೂ ಚುನಾವಣೆಗೆ ಸಂಬಂಧಿಸಿದ ಯಾವುದೇ ನಿಯಮಗಳು ಉಲ್ಲಂಘನೆಯಾಗುತ್ತಿವೆ ಎಂಬ ಬಗ್ಗೆ ಅರ್ಜಿದಾರರಿಗೆ ಆಕ್ಷೇಪ ಇದ್ದಲ್ಲಿ ಮತ್ತು ಚುನಾವಣೆಯ ಕಾನೂನು ಬದ್ಧತೆಯನ್ನು ಚುನಾವಣೆ ಮುಗಿದ ನಂತರವೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಬೇಕಿರುತ್ತದೆ. ಆದ್ದರಿಂದ, ನಿಗದಿಯಂತೆ ನೌಕರರ ಸಂಘವು ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಸಬಹುದು' ಎಂದು ನ್ಯಾಯಪೀಠ ತಿಳಿಸಿದೆ. ವಿಚಾರಣೆಯನ್ನು ಮೇ 27ಕ್ಕೆ ಮುಂದೂಡಲಾಗಿದೆ.

ಕಾರು ಮಾರಾಟ ವ್ಯವಹಾರ: ಆರೋಪಿಗೆ ನಿರೀಕ್ಷಣಾ ಜಾಮೀನು



ಹೈಕೋರ್ಟ್ ಸುದ್ದಿ

ಬೆಂಗಳೂರು: ವ್ಯಕ್ತಿಯೊಬ್ಬರಿಂದ ₹9 ಲಕ್ಷಕ್ಕೆ ಟೊಯೊಟಾ ಅರ್ಬನ್ ಕ್ರೂಸರ್ ಕಾರು ಖರೀದಿಸುವುದಾಗಿ ಒಪ್ಪಂದ ಮಾಡಿಕೊಂಡು ₹25 ಸಾವಿರ ಮುಂಗಡ ಪಾವತಿಸಿ ಕಾರು ಪಡೆದು ಮೂರನೇ ವ್ಯಕ್ತಿಗೆ ಮಾರಾಟ ಮಾಡಿದ ಪ್ರಕರಣದಲ್ಲಿ ಬಂಧನದ ಭೀತಿ ಎದುರಿಸುತ್ತಿದ್ದ ವ್ಯಕ್ತಿಗೆ ಹೈಕೋರ್ಟ್ ಷರತ್ತು ಬದ್ಧ ನಿರೀಕ್ಷಣಾ ಜಾಮೀನು ನೀಡಿದೆ.

ಈ ಸಂಬಂಧ ಉಡುಪಿ ಜಿಲ್ಲೆಯ ಕುಂದಾಪುರದ ನಿವಾಸಿ ಆದಿತ್ಯ ದೇವಾಡಿಗ ಸಲ್ಲಿಸಿದ್ದ ಅರ್ಜಿಯನ್ನು ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರು ವಿಚಾರಣೆ ನಡೆಸಿದರು.

'ಅರ್ಜಿದಾರರು ಹದಿನೈದು ದಿನಗಳ ಒಳಗಾಗಿ ತನಿಖಾಧಿಕಾರಿ ಮುಂದೆ ಹಾಜರಾಗಬೇಕು. ₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತರಿ ನೀಡಬೇಕು. ಸಾಕ್ಷ್ಯಾಧಾರ ತಿರುಚಲು ಯತ್ನಿಸಬಾರದು' ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ಪ್ರಯಾಣಿಕರ ಪಿಕ್‌ಅಪ್ ಶುಲ್ಕ ತಾತ್ಕಾಲಿಕ ರದ್ದು

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌ಗಳ ಆಗಮನ ದ್ವಾರದ (ಅರೈವಲ್ ಗೇಟ್) ಬಳಿಯ ಪಿಕ್‌ಅಪ್ ಪಾಯಿಂಟ್‌ನಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಟ್ಯಾಕ್ಸಿಗಳಿಗೆ ವಿಧಿಸಲಾಗಿದ್ದ ₹150 ಪಿಕ್‌ಅಪ್ ಶುಲ್ಕವನ್ನು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ ತಾತ್ಕಾಲಿಕವಾಗಿ ಕೈಬಿಟ್ಟಿದೆ.

ಪಿಕ್‌ಅಪ್ ಪಾಯಿಂಟ್‌ನಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗಲು ಏಳು ನಿಮಿಷಕ್ಕೆ ಟ್ಯಾಕ್ಸಿಗಳಿಗೆ ₹150 ಶುಲ್ಕ ವಿಧಿಸಿದ್ದ ಪ್ರಾಧಿಕಾರ ಟ್ಯಾಕ್ಸಿಗಳ ಫಾಸ್ಟ್ಯಾಗ್‌ನಲ್ಲಿ ಕಡಿತಗೊಳಿಸುವ ವ್ಯವಸ್ಥೆಯನ್ನು ಸೋಮವಾರದಿಂದ ಜಾರಿಗೊಳಿಸಿತ್ತು.

ಈ ನಿರ್ಧಾರವನ್ನು ವಿರೋಧಿಸಿ ಟ್ಯಾಕ್ಸಿ ಚಾಲಕರು ಟರ್ಮಿನಲ್ ಬಳಿಯ ಪಿಕ್‌ಅಪ್ ಪಾಯಿಂಟ್‌ಗಳಲ್ಲಿ ಸೋಮವಾರ ಪ್ರತಿಭಟಿಸಿದ್ದರು. ಇದರಿಂದ ಸಾಕಷ್ಟು ಟ್ರಾಫಿಕ್ ಸಮಸ್ಯೆ ಉಂಟಾಗಿತ್ತು. ಟ್ಯಾಕ್ಸಿ ಚಾಲಕರ ಸಂಘಟನೆಗಳು ಬೃಹತ್ ಪ್ರತಿಭಟನಾ ರ‍್ಯಾಲಿಯನ್ನೂ ಹಮ್ಮಿಕೊಂಡಿದ್ದವು. ಅದಕ್ಕೂ ಮುನ್ನವೇ ಶುಲ್ಕ ವಿಧಿಸುವ ತನ್ನ ನಿರ್ಧಾರವನ್ನು ಪ್ರಾಧಿಕಾರವು ತಾತ್ಕಾಲಿಕವಾಗಿ ತಡೆಹಿಡಿದಿದೆ. ಇದನ್ನು ವಿಮಾನ ನಿಲ್ದಾಣದ ವಕ್ತಾರರು ದೃಢಪಡಿಸಿದ್ದಾರೆ.

ವಾಹನ ಸಂಚಾರ ನಿಷೇಧ

ಬೆಂಗಳೂರು: ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿ ಸುಬ್ಬಯ್ಯ ವೃತ್ತದ ಮಿಷನ್ ರಸ್ತೆಯಲ್ಲಿ ಜಲಮಂಡಳಿಯಿಂದ ಪೈಪ್‌ಲೈನ್ ಕಾಮಗಾರಿ ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಗರದ ಸುಬ್ಬಯ್ಯ ವೃತ್ತದಿಂದ ಶಾಂತಿನಗರ ಜಂಕ್ಷನ್‌ಗೆ ತೆರಳುವ ರಸ್ತೆಯಲ್ಲಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.



ಜತೆಗೆ ಮಿಷನ್ ರಸ್ತೆ, ಲಾಲ್‌ಬಾಗ್ ರಸ್ತೆ, ನಾಲಾ ರಸ್ತೆ, ಡಬಲ್ ರಸ್ತೆಯ ಬದಿಯಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಬಿಜೆಪಿ ಕಾರ್ಯದರ್ಶಿಗೆ ಮುಚ್ಚಳಿಕೆಗೆ ಆಗ್ರಹ: ನೋಟಿಸ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆಯ ಸಮಯದಲ್ಲಿ ಯಾವುದೇ ಕಾನೂನುಬಾಹಿರ ಚಟುವಟಿಕೆ ಹಾಗೂ ಚುನಾವಣಾ ಅಕ್ರಮದಲ್ಲಿ ತೊಡಗುವುದಿಲ್ಲ' ಎಂದು ಮುಚ್ಚಳಿಕೆ ಬರೆದು ಕೊಡುವಂತೆ ಸೂಚಿಸಿ ಮಲ್ಲೇಶ್ವರದ ಬಿಜೆಪಿ ಕಚೇರಿಯ ಕಾರ್ಯದರ್ಶಿ ಲೋಕೇಶ್ ಅಂಬೇಕಲ್ಲು ವಿರುದ್ಧ ನಗರ ಪಶ್ಚಿಮ ವಿಭಾಗದ ಉಪ ಪೊಲೀಸ್ ಆಯುಕ್ತರು ಜಾರಿ ಮಾಡಿದ್ದ ನೋಟಿಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ನೋಟಿಸ್ ಪ್ರಶ್ನಿಸಿ ಲೋಕೇಶ ಅಂಬೇಕಲ್ಲು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ಜಿ.ಎಸ್ ಕಮಲ್ ಅವರು ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದ್ದಾರೆ.

'ಈಗಾಗಲೇ ರಾಜ್ಯದಲ್ಲಿ ಮತದಾನ ಪ್ರಕ್ರಿಯೆ ಪೂರ್ಣಗೊಂಡಿದೆ. ಹೀಗಾಗಿ, ಅರ್ಜಿದಾರರ ವಿರುದ್ಧದ ನೋಟಿಸ್ ಮಾನ್ಯತೆ ಕಳೆದುಕೊಂಡಿದೆ. ಆದ್ದರಿಂದ, ಅದನ್ನು ರದ್ದುಪಡಿಸಲಾಗುತ್ತಿದೆ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ. ವಿನೋದ್ ಕುಮಾರ್ ಅವರು ವಾದ ಮಂಡಿಸಿದ್ದರು.

ಬಿಬಿಎಂಪಿಗೆ ನಿರ್ದೇಶನ ನೀಡಿದ ಹೈಕೋರ್ಟ್

'ಪಾರ್ಕಿಂಗ್ ನೀತಿ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರದಲ್ಲಿ ವಾಹನ ನಿಲುಗಡೆ ನೀತಿ 2.0 ಅನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಪಾರ್ಕಿಂಗ್ ನೀತಿಯನ್ನು ಹೇಗೆ ಅನುಷ್ಠಾನ ಮಾಡಲಾಗುವುದು ಎಂಬುದರ ಕುರಿತಾದ ವಿಸ್ತೃತ ಯೋಜನಾ ವರದಿಯನ್ನು ಜೂನ್ 20ರೊಳಗೆ ಕೋರ್ಟ್‌ಗೆ ಸಲ್ಲಿಸಬೇಕೆಂದು ಬಿಬಿಎಂಪಿ ಆಯುಕ್ತರಿಗೆ ಸೂಚಿಸಿದೆ.

ಈ ಸಂಬಂಧ ಎಚ್.ಎಸ್.ಆರ್. ಬಡಾವಣೆಯ ನಾಗಭೂಷಣ ರೆಡ್ಡಿ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಮಾನ್ಯ ಮಾಡಿದೆ.

ಮುಖ್ಯಾಂಶಗಳು

- ವಾಹನ ನಿಲುಗಡೆ ನೀತಿ 2.0 ಜಾರಿಗೆ ಅಗತ್ಯ ಕ್ರಮಕ್ಕೆ ಹೈಕೋರ್ಟ್ ಸೂಚನೆ
- ಪಾರ್ಕಿಂಗ್ ನೀತಿ ಅನುಷ್ಠಾನ ಹೇಗೆ: ಹೈಕೋರ್ಟ್ ಪ್ರಶ್ನೆ
- ಖಾಲಿ ನಿವೇಶನದಲ್ಲಿ ಪಾರ್ಕಿಂಗ್: ಕಡಿವಾಣಕ್ಕೆ ಸಲಹೆ

'ಪಾರ್ಕಿಂಗ್ ನೀತಿಯು 2.0, 2020ರ ಡಿಸೆಂಬರ್‌ನಿಂದಲೂ ಚಾಲ್ತಿಯಲ್ಲಿದೆ. ಅದರಂತೆ ಬಿಬಿಎಂಪಿ ವಾಹನ ನಿಲುಗಡೆ ಪ್ರದೇಶ, ವಾಹನ ನಿಲುಗಡೆ ಶುಲ್ಕ, ಬೀದಿ ಬದಿ ಪಾರ್ಕಿಂಗ್ ವ್ಯವಸ್ಥೆ ಉತ್ತಮಗೊಳಿಸುವುದು, ಪೈಲಟ್ ಪರ್ಮಿಟ್ ವ್ಯವಸ್ಥೆ ಆರಂಭಿಸುವುದೂ ಸೇರಿದಂತೆ ಹಲವು ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಈ ತನಕ ಬಿಬಿಎಂಪಿ ಈ ನಿಟ್ಟಿನಲ್ಲಿ ಪ್ರಗತಿ ಸಾಧಿಸಿಲ್ಲ. ಬಿಬಿಎಂಪಿ ಮತ್ತು ನಗರ ಭೂ ಸಾರಿಗೆ ನಿರ್ದೇಶನಾಲಯದ ನಿಷ್ಕ್ರಿಯತೆಯಿಂದಾಗಿ ಸಾರ್ವಜನಿಕರು ಅನಗತ್ಯ ತೊಂದರೆ ಎದುರಿಸುವಂತಾಗಿದೆ' ನ್ಯಾಯಪೀಠ ಹೇಳಿದೆ.

'ಕಟ್ಟಡ ಬೈ-ಲಾ ಪ್ರಕಾರ ನಿರ್ಮಾಣವಾಗುವ ಪ್ರತಿಯೊಂದು ವಸತಿ ಸಮುಚ್ಚಯದಲ್ಲೂ ಪಾರ್ಕಿಂಗ್ ಜಾಗವನ್ನು ಒದಗಿಸಬೇಕಾಗುತ್ತದೆ. ಜತೆಗೆ ಬೆಂಗಳೂರು ಮಹಾ ನಗರದಲ್ಲಿನ ವಸತಿ ಹಾಗೂ ವಾಣಿಜ್ಯ ಪ್ರದೇಶಗಳಲ್ಲಿ ಪಾರ್ಕಿಂಗ್ ಸಮಸ್ಯೆ ಮಾಮೂಲಾಗಿದೆ. ಹೀಗಾಗಿ ಕೆಲವು ಖಾಲಿ ನಿವೇಶನ ಹೊಂದಿರುವವರು ಪಾರ್ಕಿಂಗ್‌ಗೆ ಅವಕಾಶ ನೀಡುವ ಮೂಲಕ ಹಣ ಗಳಿಸುತ್ತಿದ್ದಾರೆ. ಇಂತಹ ಕ್ರಮಗಳಿಗೆ ಬಿಬಿಎಂಪಿ ಕಡಿವಾಣ ಹಾಕಬೇಕು' ಎಂದು ನ್ಯಾಯಪೀಠ ಹೇಳಿದೆ.

ಪ್ರೆಸ್ಟೀಜ್ ಏನನ್ನಾದರೂ ಯಾವುದಕ್ಕಾದರೂ

ಎಕ್ಸ್‌ಚೇಂಜ್ ಆಫರ್*

ಪ್ರೆಸ್ಟೀಜ್‌ನೊಂದಿಗೆ ನಿಮ್ಮ ಅಡುಗೆಮನೆಯನ್ನು ಅಪ್‌ಗ್ರೇಡ್ ಮಾಡಿ.

75 Years of Prestige

ಯಾವುದೇ ಬ್ರ್ಯಾಂಡ್‌ನ ಹಳೆಯ ಕಿಚನ್ ಅಪ್ಲಾಯನ್ಸಸ್ ಮತ್ತು ಕಿಚನ್‌ವೇರ್‌ಗಳನ್ನು ವಿನಿಮಯ ಮಾಡಿಕೊಳ್ಳಿ ಮತ್ತು ಪ್ರೆಸ್ಟೀಜ್ ಹಾಗೂ ಜಡ್ಜ್ ನವರ ಅತ್ಯುತ್ತಮ ಆವಿಷ್ಕಾರಗಳನ್ನು ಮನೆಗೆ ತನ್ನಿ.

ಮೇ 1 ರಿಂದ ಜೂನ್ 30, 2024 ವರೆಗೆ

ಹೊರಚೆಲ್ಲುವಿಕೆ ನಿಯಂತ್ರಿಸಬಲ್ಲ ಪ್ರೆಷರ್ ಕುಕ್ಕರ್‌ಗಳ ಸ್ವಚ್ಛ್ ಶ್ರೇಣಿ



ಸ್ವಚ್ಛ್ ಪ್ರೆಷರ್ ಕುಕ್ಕರ್‌ಗಳು

24% - 42% ರಿಯಾಯಿತಿ*

ಹಾನಿಕಾರಕ ರಾಸಾಯನಿಕಗಳಿಂದ ಮುಕ್ತವಾದ, ಪ್ರೆಸ್ಟೀಜ್‌ನ ನಾನ್-ಸ್ಟಿಕ್ ಕುಕ್‌ವೇರ್‌ಗಳೊಂದಿಗೆ ಆರೋಗ್ಯಕರ ಅಡುಗೆಯನ್ನು ಮಾಡಿಕೊಳ್ಳಿ



ನಾನ್-ಸ್ಟಿಕ್ ಕುಕ್‌ವೇರ್ ಶ್ರೇಣಿ

33% - 55% ರಿಯಾಯಿತಿ*

ಸುಲಭ ಸ್ವಚ್ಛತೆಗಾಗಿ ಕ್ರಾಂತಿಕಾರಿ ವಿನ್ಯಾಸ





ಮೇಲೆತ್ತಿ ಮತ್ತು ಲಾಕ್ ಮಾಡಿ | ಒರೆಸಿಕೊಳ್ಳಿ

ಸ್ವಚ್ಛ್ ಗ್ಲಾಸ್ - ಟಾಪ್ ಗ್ಯಾಸ್ ಸ್ಟವ್‌ಗಳು

29% - 41% ರಿಯಾಯಿತಿ*

ಪ್ರೆಷರ್ ಕುಕ್ಕರ್‌ನ ವಿಸಿಲ್ ಲೆಕ್ಕ ಹಾಕುವ ಅನುಕೂಲಕರ ಇಂಡಕ್ಷನ್ ಕುಕ್‌ಟಾಪ್

AUTOMATIC WHISTLE COUNTER



ಇಂಡಕ್ಷನ್ ಕುಕ್‌ಟಾಪ್ 2000W

37% - 51% ರಿಯಾಯಿತಿ*



14 ವಿವಿಧ ಕಾರ್ಯಗಳನ್ನು ಮಾಡುವಂತಹ ಬಹುಪಯೋಗಿ ಗ್ರೈಂಡರ್

14 ವಿವಿಧ ಕಾರ್ಯಗಳು

ಎಂಡ್ಯುರಾ ಪ್ರೋ ಮಿಕ್ಸರ್ ಗ್ರೈಂಡರ್ 1000W

37% - 46% ರಿಯಾಯಿತಿ*

ನಿಮ್ಮ ಅನುಕೂಲಕ್ಕಾಗಿ ಸಣ್ಣ ಉಪಕರಣಗಳು



ಜ್ಯೂಸರ್



ಒಟಿಜಿ



ಸ್ಯಾಂಡ್‌ವಿಚ್ ಮೇಕರ್



ಕೆಟಲ್



ಏರ್ ಫ್ರೈಯರ್

32% - 65% ರಿಯಾಯಿತಿ*

ಗ್ಯಾಸ್ ಲೀಕೇಜ್ ಮತ್ತು ಹೊಗೆ ಪತ್ತೆ ತಂತ್ರಜ್ಞಾನದೊಂದಿಗೆ ಭಾರತದ ಮೊದಲ ಚಿಮಣಿ



ಆಸ್ಕರ್ ಸೇಫ್-ಸೆನ್ಸ್ ಚಿಮಣಿ

52% - 62% ರಿಯಾಯಿತಿ*

JUDGE® By Prestige®

ಅತ್ಯುತ್ತಮ ಪ್ರಾಡಕ್ಟ್‌ಗಳು ಮತ್ತು ಉತ್ಕೃಷ್ಟ ಮೌಲ್ಯ.

ಪ್ರೆಷರ್ ಕುಕ್ಕರ್	ಕುಕ್‌ವೇರ್	ಗ್ಯಾಸ್ ಸ್ಟವ್	ಮಿಕ್ಸರ್ ಗ್ರೈಂಡರ್	ಇಂಡಕ್ಷನ್	ಇತರ ಅಪ್ಲಾಯನ್ಸಸ್	ಸರ್ವ್ ವೇರ್
37%-53% ರಿಯಾಯಿತಿ*	38%-71% ರಿಯಾಯಿತಿ*	41%-47% ರಿಯಾಯಿತಿ*	41%-52% ರಿಯಾಯಿತಿ*	45%-52% ರಿಯಾಯಿತಿ*	39%-68% ರಿಯಾಯಿತಿ*	36%-74% ರಿಯಾಯಿತಿ*

*ಷರತ್ತುಗಳು ಅನ್ವಯಿಸುತ್ತವೆ. ಈ ಕೊಡುಗೆಗಳು ಕೇವಲ ಎಕ್ಸ್‌ಚೇಂಜ್‌ಗೆ ಮಾತ್ರ ಅನ್ವಯಿಸುತ್ತದೆ. ಎಲ್ಲ ಡಿಸ್ಕೌಂಟ್‌ಗಳು ಎಮ್‌ಆರ್‌ಪಿ ಮೇಲೆ ಮಾತ್ರ. ಎಲ್ಲಾ ರಿಯಾಯಿತಿಗಳು ಸಂಬಂಧಿತ ಉತ್ಪನ್ನದ ವಿಭಾಗಕ್ಕೆ ಮಾತ್ರ ಅನ್ವಯವಾಗುತ್ತವೆ, ಉಲ್ಲೇಖಿಸಿದ ಉತ್ಪನ್ನದ ಮೇಲೆ ಅಲ್ಲ. ಆಯ್ದ ಡೀಲರ್ ಔಟ್‌ಲೆಟ್‌ಗಳಲ್ಲಿ ದಾಸ್ತಾನು ಇರುವವರೆಗೆ ಮಾತ್ರ. ಬದಲಾವಣೆ ಬೆಲೆಯು ಖರೀದಿಸಿದ ಸಾಮಾನು ಮತ್ತು ಹಿಂತಿರುಗಿಸಲಾಗುವ ಹಳೆಯ ಸಾಮಾನುಗಳನ್ನು ಅವಲಂಬಿಸಿರುತ್ತದೆ. ಯಾವುದೇ ಬ್ರ್ಯಾಂಡ್ ನ ಹಳೆಯ ಸಾಮಾನುಗಳನ್ನು ಸ್ವೀಕರಿಸಲಾಗುತ್ತದೆ. ವಾಸ್ತವಿಕ ಬದಲಾವಣೆ ಕೊಡುಗೆ ಬೆಲೆಯ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು ಆಯ್ದ ಡೀಲರ್ ಅಂಗಡಿಗಳಲ್ಲಿ ಲಭ್ಯವಿರುವ ಏನನ್ನಾದರೂ ಯಾವುದಕ್ಕಾದರೂ ಬದಲಾವಣೆ ಕೊಡುಗೆ ಬೆಲೆ ಪಟ್ಟಿಯನ್ನು ನೋಡಿರಿ. ಹಿಂತಿರುಗಿಸಬಹುದಾದ ಹಳೆಯ ಸಾಮಾನುಗಳೆಂದರೆ ಅಲ್ಯುಮಿನಿಯಮ್/ಸ್ಟೈಯನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್‌ಗಳು, ಅಲ್ಯುಮಿನಿಯಮ್/ ಸ್ಟೈಯನ್‌ಲೆಸ್ ಸ್ಟೀಲ್ ಕುಕ್‌ವೇರ್ (ಕನಿಷ್ಠ 400 ಗ್ರಾಂ ಪಾತ್ರೆ ತೂಕ), ಗ್ಯಾಸ್ ಸ್ಟವ್‌ಗಳು (ಕನಿಷ್ಠ 2 ಬರ್ನರ್‌ಗಳು), ಮಿಕ್ಸರ್ ಗ್ರೈಂಡರ್‌ಗಳು (ಬಾಡಿ, ಮೋಟರ್ ಮತ್ತು ಎರಡು ಸ್ಟೈನ್‌ಲೆಸ್ ಸ್ಟೀಲ್ ಜಾರ್‌ಗಳನ್ನು ಒಳಗೊಂಡಿರಬೇಕು), ಇಂಡಕ್ಷನ್ ಕುಕ್‌ಟಾಪ್‌ಗಳು, ರೈಸ್ ಕುಕ್ಕರ್‌ಗಳು, ಚಿಮಣಿಗಳು, ಹಾಬ್‌ಟಾಪ್‌ಗಳು, ವೆಟ್ ಗ್ರೈಂಡರ್‌ಗಳು, ಓಟಿಜಿಗಳು, ಕೆಟಲ್, ಟೋಸ್ಟರ್‌ಗಳು, ಇಸ್ತ್ರಿ ಪೆಟ್ಟಿಗೆ, ಮೈಕ್ರೊವೇವ್ ಅವೆನ್, ಜ್ಯೂಸರ್‌ಗಳು, ಬ್ಲೆಂಡರ್‌ಗಳು, ವಾಟರ್ ಪ್ಯೂರಿಫೈಯರ್‌ಗಳು ಮತ್ತು ವಾಕ್ಯೂಮ್ ಕ್ಲೀನರ್‌ಗಳು. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ಜಡ್ಜ್® ಲೋಗೋ ಭಾರತದಲ್ಲಿ ಹಾರ್ವುಡ್ ಹೋಮ್‌ವೇರ್ಸ್ ಲಿಮಿಟೆಡ್‌ನ ನೋಂದಾಯಿತ ಟ್ರೇಡ್‌ಮಾರ್ಕ್ ಆಗಿದೆ. ನಿಯಮಗಳು ಮತ್ತು ಷರತ್ತುಗಳನ್ನು ವಿವರವಾಗಿ ತಿಳಿಯಲು ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ /ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ ಅಥವಾ ನಮ್ಮ ವೆಬ್‌ಸೈಟ್ https://shop.ttkprestige.com/anything-for-anything-offer ಗೆ ಭೇಟಿ ನೀಡಿ.

Prestige®

CUSTOMER CARE NO 080-6000 4411 | Store Locator | For any institution or bulk enquiries, contact: 7908 710841 biz.enquiry@ttkprestige.com | Scan to Connect | Shop Online on shop.ttkprestige.com | ttk

ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

Prestige® Xclusive **Outer Ring Road- Hennur Coco,** Ph: 7204250679; **Tumkur Rd. 8th Mile T.Dasarahalli**, Ph: 9972541116; **Koramangala,** Ph: 9663515616; **Tumkur**, Ph: 9164853121; **Bull Temple,** Ph: 26609012; **Malleswaram,** Ph: 9448282470; **Rt Nagar Main Rd**, Ph: 41698761; **Ganganagar Cbi Rd**, Ph: 43705914; **Wheeler Rd**, Ph: 25803080; **Kattriguppe Circle**, Ph: 40900685; **Vijayanagar**, Ph: 9739004750; **Hsr Bda Complex**, Ph: 25726991; **Marathahalli**, Ph: 42197088; **Sanjaynagar**, Ph: 41258300; **Banaswadi Ring Rd,** Ph: 41634115; **Jayanagar,** Ph: 9845066549; **J.P.Nagar**, Ph: 41122235; **Rajarajeshwaringr,** Ph: 28603540, 9008418800; **Kengeri Stl Town,** Ph: 28485296; **Rajajinagar,** Ph: 41731224; **B.T.M.Layout**; Ph: 40939168; **Sarjapura Rd**, Ph: 42038646; **Konankunte Cross,** Ph: 9845057728; **Nagharabhavi Bda Cmplx,** Ph: 9739004750; **Begur**, Ph: 8970366139; **Vidyaranayapura**, Ph: 9845518824; **Wilson Garden**, Ph: 9480010720; **Brookefield,** Ph: 28541555; **Ramamurthynagar**, Ph: 08042049545; **Kr Puram,** Ph: 8861494277; **Cambridge Layoutv** 42074468; **Kaggadaspura,** Ph: 7306666610; **Kammanahalli,** Ph: 41606044; **Whitefield,** Ph: 40907273; **Chandapura,** Ph: 9036190725; **Dommasandra,** Ph: 9611423555; **Hesarghatta Road**, Ph: 28370400; **Uttarahalli**, Ph: 9986879095; **Anjananagr Magadi Rd**, Ph: 23281206; **Kadugodi,** Ph: 8123042234; **Hosur Rd Huskur Gate**, Ph: 9606406009; **Yelahanka Newtown**, Ph: 8668034376; **Jayamahal Ext**, Ph: 41616484; **Mahalakshmi Lyt**, Ph: 23572233; **Jpnagar 7th Phase, Puttenahalli**, Ph: 41465855; **Kumaraswamy Lyt**, Ph: 8618517716; **Chandra Lyt**, Ph:9739004750; **Channasandra**, Ph: 9986369569; **Sheshadripuram**, Ph: 8711090976; **Kasturinagar**, Ph: 08049923166; **Attibele**, Ph: 9341221525; **Jigani**, Ph: 8762069852; **Sarjapura Town**, Ph: 9036373175; **Hosa Rd Junction**, Ph: 9845597099; **Mathikere**, Ph: 6366636592; **Basaveshwaranagar**, Ph: 9739591008; **Thalagatapura**, Ph: 9964116888; **Hegganahalli**, Ph: 28360289; **Gottigere**, Ph: 8431241099; **Ullal**, Ph: 9686646565; **Jayanagar 4th Block East Extension**, Ph: 9945446335; **Nelamangala**, Ph: 9632356627; **Kolar**, Ph: 9738882584; **Channapatna**, Ph: 9686661294; **Madhugiri**, Ph: 9611552805; **Gauribidanur**, Ph: 8317399465; **Gubbi**, Ph: 9035195120/8095459040; **Banshankari Stage 2, Bda Complex**, Ph: 49890679, 9740677740; **Vijayabank Colony, Bilekahalli**, Ph: 8970366139; **Whitefield**, Ph: 08040907273; **Malur**, Ph: 9845028859; **Kumbalagodu**, Ph:9845014860; **Devanahalli**, Ph: 9845737576; **Thanisandra**, Ph:9686340159; **Hulimavu**, Ph: 8904654433; **Singanayakanahalli**, Ph: 9151717779; **Anekal** – 8660070202, **Tiptur** – 9164688773, **Bhyadarahalli** – 9845982089, **Hennur Bande** – 9980097982, **Tc Palya Road**, Ph: 9148775224; **Chikkajaala**, Ph: 9036202892; **Mutthanallur**, Ph: 8970736606; **Madnayakhalli**, Ph: 9886230009, Ph: **Hoskote**; 9845028859, Ph: **Sira** – 8310660400.

Also Available At: Jayanagar: Sarathy, Ph: 41210047; Vishaals, Ph: 08022447285; Royal Mart, Ph: 8790311104; Anjana Superstores, Ph: 41301836; Kitchenmart, Ph: 26652885; Aravinda, Ph: 41301989; **Bankcolony:**Vardhaman Ind, Ph: 22428300; **Banashankari:**Varada Glass & Crky, Ph: 9980949316; Patel Agn, Ph: 26714285; Patel Ktchen Apl, Ph: 9079061706; Chamundi Ind, Ph: 26712633; **Bilekhalli:**Sree Pooja Ha, Ph: 9036919084; **Bommanahalli:**Sri Durga Ha, Ph: 9900674018; **Chamarjpet:**Vadirajstores, Ph: 41517646; **Devarachikkanahalli:**Sapna Ha, Ph: 9738732036; **Electronic City:**Dream Mart Hm, Ph: 9148934858; **Hosa Rd:**Maharaja Kw, Ph: 9036400829; **Hosakota:**Dream Mart Hm, Ph: 9964744480; **Isro Layout;**Bhumi Kitchen, Ph: 9916830850; **Jp Nagar,**Surya Kitchen World, Ph: 9449762988; **Kanakapura Rd:** Royal Mart, Ph: 28425777; **Padmanabnagar:**Royalmart, Ph: 9886088993; **Uthrahalli:**Royalmart, Ph: 26394114; Rme Super Market, Ph: 9964228208; **Mysore Road:**The Karnataka Metal Industry, Ph: 9449342727; **Ayyappanagar:**Top Mart Sm, Ph: 7204448111; **Babusapalya**:Karnataka Ha, Ph: 8105754544; **Basaveshwarnagar:**Bigday Hm, Ph: 9972517344; Mahaveer Ha, Ph: 9844173501; Modern Colln, Ph: 23583440; Aadhinath Kitchen Gal, Ph: 41220555; **Gayathri Ngr:**J.K.Steel, Ph: 23320853; **Giri Nagar**:Vidya Ent, Ph:9449988650; Matahji Ha, Ph: 7019385120; **Bagalgunte**:Royal Mart, Ph: 9538000072; **Chandra Layout:**Rajguru Kw, Ph: 9513034351; Pavan Kw, Ph: 8618028319; **Ganganagar:**Salemindustries, Ph: 41284470; Patel Ind, Ph: 8050899296; **Hesargatta Main Rd:**Royal Mart, Ph: 28398200; **Horamavu:**Mamtha Ha, Ph: 8880050050; **Hrbr Layout:**Bhavani Ha, Ph: 9845916164; **Harlurur**: Vinayaka Ha, Ph: 7760531454; **Katriguppe:**Mk Metal Mart, Ph: 9035779199; **Kr Puram:**Srm Elect, Ph: 9845445748; Pooja Ele And Mob, Ph: 9738850503; **Boodhigere Rd**:New Royal Fresh, Ph:9538038885; **Kamanhalli:**Ramdev Steel, Ph:7259575732; Hm Traders, Ph: 9964797616; **Kasavanahalli:**Mathaji Ha, Ph: 8880796036; **Kunadanahalli:** New Prakash Ha, Ph: 7090444111; **Kengeri**;Falcon Hm, Ph:7829999066; **Koramangala:**Sowbhagya Traders, Ph: 7337733887; **Kmr Swy Layout**:Patel Ha, Ph: 8951979665; **Laggere:**Top Mart, Ph: 9110246047; **Lnpura:**Arihanth Ent, Ph: 7899633338; **Malleshwaram:**Deviprasad Ha, Ph: 23564536; Bright Novelty, Ph: 23343505; **Mathikere:**M.Bhawarlals Inc, Ph: 41724740; Maharaja Agency, Ph: 41278050; **Kadugodi:**Little Wonder, Ph: 9961224224; **Madiwala:**Surya Ha, Ph: 9449635332; **Malleshpalya:**Bajrang Ha, Ph: 9449526463; New Bheru Ha, Ph: 9448680738; Ramdev Ha, Ph: 9035175860; Sri Bhagawathi Ha, Ph: 9590575427; Maa Ambe Ha, Ph: 8884198322; **Magadiroad:**Royal Mart, Ph: 23584498; **Annaporneshwari Nagar:**Deepak Ha, Ph: 9148912736; **M S Palya:**Royal Mart, Ph: 8147014079; **B Narayanpura:**Yellow Mart, Ph: 7676726487; **Rajajinagar:**Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World -41285801; Jayalakshmi Kw, Ph: 9844755146; R S Mart, Ph: 6363602929; Pooja Stl Cent, Ph: 23327014; **Rr Nagar:**Milan Ha, Ph: 28605619; Pavan Kg, Ph: 9739207043; **Tavarakere:**Mytri Mart Sm, Ph: 7996598838; **T C Palya:**Rhk Super Mkt, Ph: 9731668995; Big Day Sm, Ph: 8867604818; Karnataka Ha, Ph: 8105754544; **Tipsandra:**Pawar Ha, Ph: 9980517021; Milan Ha, Ph: 9986196375; Ramdev Ha, Ph: 7406901545; **Ulsoor:**Aishwaryapranam Ha, Ph: 9902788429; Pranam Steel Center, Ph: 9448053781; **Udaynagar:**Mother India, Ph: 9036189765; **Venkatapura:**Pooja Kg, Ph: 9900426176; **Vijayanagar:**Vijaylaxmi Kw, Ph: 9845022284; Mahendras, Ph: 23141126; Maruthi Ha, Ph: 8904689155; **Vidyarnapura:**Praksh Kw, Ph: 8050620877; Mahalakshmi Steel House-9663375159,All Seasons Hm, Ph: 9946728736; **Whitefield:**Rolla Hm, Ph: 9148003448; Loyalcity, Ph: 7892565797; Royal Mart, Ph: 7079734574; **Yelahanka:**Royalmart, Ph: 41705760; Mutha Electricals, Ph: 22971920; Sai Kitchen World, Ph: 9632811797; **Btm Layout**:Patel Agencies, Ph: 9482853401; **Tumkur:** N.R Metal Agency, Ph: 0816-275003; Kavitha Kitchen Ware, Ph: 9538537166; Surya Metal Store, Ph: 9731351050;Tumkur Trade Centre, Ph: 9901432287; Dharshan Ha, Ph: 9632132567; Sudha Ha, Ph: 9964011253; **Gubbi**:Keerthi Gas Stove, Ph: 9686004169;**Tiptur**: Sri Sai Electronics, Ph: 8861432166; Srirama-Ent, Ph: 9880362018; Kumar And Kumar, Ph: 9141609900;**Turuvekere**:Sri Sai Electronics, Ph: 8861432166; **Pavgada:**Shivanagere Ha, Ph: 9880768236; Meenakshi Appl, Ph: 9880360326; **Sira**:Swamy Ent, Ph: 9741561491; Lakshmi Sreel, Ph: 9060434807; Mallikarjuna Ha, Ph: 8123206930; **Madhugiri**:Akshya Ha, Ph: 9141786066; Vinayaka Store, Ph: 9900219291; **Kunigal:**Karnataka Metal Stores, Ph: 9448550390; New Karnataka Steel Centre, Ph: 08132221548; Karnataka Ha, Ph: 8892197645; **Kgf:** Prakash Ha, Ph: 9845113454; **Bangarpet**-Kumar Stores, Ph: 9845935240; **Gauribidanur:**Sri Raju Ha, Ph: 9448249527; Dhighvijaya Elec, Ph: 7204757456; **Kanakapura:**Sri Kabbalamma Ha, Ph: 9880835508; **Kolar:**Reddy Ele, Ph: 9844472531; Rakesh Ele, Ph: 9880634555; Naveenprakash Ha, Ph: 9844997787; **Malur:**Srm Elec, Ph: 9845445748; Reddy Ele, Ph: 9844435121; **Vijayapura**-Rmcity, Ph: 9845164990; Reddy Ele, Ph: 9900336061; **Devanahalli:**New Sowmya Ele, Ph: 9141335210; **Chintamani:**Great India Ele-9742963551; Lavanya Stores, Ph: 9242498294.



ಗಡಿಭಾಗದಲ್ಲಿ ರಸ್ತೆ ನಿರ್ಮಿಸುವ 'BRO'

ಚನ್ನಬಸಪ್ಪ ರೊಟ್ಟಿ

ಗಡಿ ರಸ್ತೆಗಳ ಸಂಸ್ಥೆ (BRO: Border Roads Organisation) ತನ್ನ 65ನೇ ಸಂಸ್ಥಾಪನಾ ದಿನವನ್ನು ಮೇ 7ರಂದು ಆಚರಿಸಿಕೊಂಡಿತು. ಭಾರತದ ಗಡಿ ಪ್ರದೇಶಗಳಲ್ಲಿ ರಸ್ತೆ ಜಾಲಗಳನ್ನು ಅಭಿವೃದ್ಧಿಪಡಿಸುವ ಮತ್ತು ನಿರ್ವಹಿಸುವ ಉದ್ದೇಶದಿಂದ ಮೇ 7, 1960 ರಂದು ಸ್ಥಾಪಿತವಾದ BRO ರಕ್ಷಣಾ ಸಚಿವಾಲಯದಡಿ 'ಬಾರ್ಡರ್ ರೋಡ್ಸ್ ಡೆವಲಪ್‌ಮೆಂಟ್ ಬೋರ್ಡ್' (BRDB) ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. 'ಶ್ರಮೇಣ ಸರ್ವಂ ಸಾಧ್ಯಂ' (ಕಠಿಣ ಪರಿಶ್ರಮದಿಂದ ಎಲ್ಲವನ್ನೂ ಸಾಧಿಸಬಹುದು) ಎಂಬುದು ಇದರ ಧ್ಯೇಯವಾಕ್ಯವಾಗಿದೆ. ಪ್ರಸ್ತುತ ಲೆಫ್ಟಿನೆಂಟ್ ಜನರಲ್ ರಘು ಶ್ರೀನಿವಾಸನ್ BROದ ಮಹಾನಿರ್ದೇಶಕರಾಗಿದ್ದಾರೆ.

ಆರಂಭದಲ್ಲಿ 'ಪ್ರಾಜೆಕ್ಟ್ ಟಸ್ಕರ್' (ಈಗ ವರ್ತಕ್) ಮತ್ತು ಉತ್ತರ ಭಾರತದಲ್ಲಿ 'ಪ್ರಾಜೆಕ್ಟ್ ಬೀಕನ್' ಎಂಬ ಎರಡು ಯೋಜನೆಗಳ ಜವಾಬ್ದಾರಿಯನ್ನು ಈ ಸಂಸ್ಥೆಗೆ ವಹಿಸಲಾಗಿತ್ತು. ಈಗ BRO, 11 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಿರ್ಮಾಣ ಮತ್ತು ನಿರ್ವಹಣಾ ಕಾರ್ಯನಿರ್ವಹಿಸುತ್ತಿದೆ. ದೂರದ ಪ್ರದೇಶಗಳಲ್ಲಿ ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡುವ ರಸ್ತೆ ಜಾಲಗಳನ್ನು BRO ಅಭಿವೃದ್ಧಿಪಡಿಸುತ್ತದೆ. ಹಿಮಾಲಯದಂಥ ಸವಾಲಿನ ಭೂಪ್ರದೇಶದಲ್ಲೂ ರಸ್ತೆಗಳು, ಸೇತುವೆಗಳು ಮತ್ತು ವಾಯುನೆಲೆಗಳನ್ನು ನಿರ್ಮಿಸಿ, ನಿರ್ವಹಿಸುವ ಮೂಲಕ BRO ಸೈ ಎನಿಸಿಕೊಂಡಿದೆ. BRO ಇಲ್ಲಿಯವರೆಗೆ 62,214 ಕಿ.ಮೀ. ಉದ್ದದ ರಸ್ತೆಗಳು, 1005 ಸೇತುವೆಗಳು, ಏಳು ಸುರಂಗಗಳು ಮತ್ತು 21 ವಾಯುನೆಲೆಗಳನ್ನು ನಿರ್ಮಿಸಿದೆ.

BRO ಭಾರತದ ಗಡಿಯೊಳಗೆ ಮಾತ್ರವಲ್ಲದೇ, ಭೂತಾನ್, ಮ್ಯಾನ್ಮಾರ್, ಅಫ್ಘಾನಿಸ್ತಾನ್ ಮತ್ತು ತಜಿಕಿಸ್ತಾನ್‌ನಂಥ ರಾಷ್ಟ್ರಗಳಲ್ಲೂ ರಸ್ತೆ, ಸೇತುವೆಗಳನ್ನು ನಿರ್ಮಿಸಿದೆ. BRO ಸಿಲ್ಕ್ಯಾರಾ ಸುರಂಗ ಕುಸಿತ ಮತ್ತು ಸಿಕ್ಕಿಂ ಪ್ರವಾಹದಂಥ ತುರ್ತು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳಲ್ಲೂ ಅತಿ ವೇಗವಾಗಿ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಿಸಿ ಪರಿಹಾರ ಕಾರ್ಯಾಚರಣೆಯ ತಂಡಗಳು ಹಾಗೂ ಸಾಮಗ್ರಿಗಳು ಸಾಗಲು ಅನುವು ಮಾಡಿಕೊಟ್ಟದ್ದು ಪ್ರಶಂಸಾರ್ಹ ಕಾರ್ಯವಾಗಿದೆ. 2022-23 ರಲ್ಲಿ ಒಂದೇ ವರ್ಷದಲ್ಲಿ 103 ಮೂಲಸೌಕರ್ಯ ಯೋಜನೆಗಳನ್ನು ಪೂರ್ಣಗೊಳಿಸಿದ್ದು, BRO ದ ಅಪ್ರತಿಮ ಕಾರ್ಯನಿರ್ವಹಣಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ.

BRO ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣಕ್ಕೂ ಆದ್ಯತೆ ನೀಡಿದ್ದು, ಕರ್ನಲ್ ಪೊನುಂಗ್ ಡೊಮಿಂಗ್ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಿಖಿತಾ ಚೌಧರಿ BROದಲ್ಲಿನ ಮಹಿಳಾ ಶಕ್ತಿಗೆ ಉದಾಹರಣೆಯಾಗಿದ್ದಾರೆ.

BRO ಕೈಗೊಂಡ ಕೆಲ ಗಮನಾರ್ಹ ಯೋಜನೆಗಳು

- **ಅಟಲ್ ಟನಲ್ (ರೋಹ್ತಾಂಗ್ ಟನಲ್):** ಇದು ಹಿಮಾಚಲ ಪ್ರದೇಶದಲ್ಲಿ 3,000 ಮೀಟರ್ ಎತ್ತರದಲ್ಲಿ ನಿರ್ಮಿಸಲಾದ ವಿಶ್ವದ ಅತಿ ಉದ್ದದ ಹೆದ್ದಾರಿ ಸುರಂಗವಾಗಿದೆ (9.02 ಕಿಮೀ). ಇದು ಮನಾಲಿ ಮತ್ತು ಲಾಹೌಲ್-ಸ್ಪಿತಿ ನಡುವೆ ಎಲ್ಲಾ ಹವಾಮಾನ ಸಂದರ್ಭಗಳಲ್ಲೂ ಸಂಪರ್ಕವನ್ನು ಒದಗಿಸುತ್ತದೆ.

ದೇಲರಾಮ್-ಝುರಂಜ್ ಹೆದ್ದಾರಿ: ಅಫ್ಘಾನಿಸ್ತಾನದಲ್ಲಿ 2009 ರಲ್ಲಿ ನಿರ್ಮಿಸಲಾದ 218 ಕಿ.ಮೀ. ಉದ್ದದ ರಸ್ತೆ ಇದಾಗಿದ್ದು, ಇರಾನ್ ಗಡಿಯ ಸಮೀಪವಿರುವ ಝುರಂಜ್ ಜತೆ ಡೆಲಾರಾಮ್ ಅನ್ನು ಸಂಪರ್ಕಿಸುತ್ತದೆ.

- **ಧೋಲಾ-ಸಾದಿಯಾ ಸೇತುವೆ:** ಅಸ್ಸಾಂ ಮತ್ತು ಅರುಣಾಚಲ ಪ್ರದೇಶವನ್ನು ಸಂಪರ್ಕಿಸುವ ಅಸ್ಸಾಂನ ಲೋಹಿತ್ ನದಿಯ ಮೇಲೆ ನಿರ್ಮಿಸಲಾದ ಭಾರತದ ಉದ್ದದ ನದಿ ಸೇತುವೆ (9.15 ಕಿಮೀ) ಇದಾಗಿದೆ.

ಉಮ್ಲಿಂಗ್ ಲಾ ಪಾಸ್: ಪೂರ್ವ ಲಡಾಖ್‌ನಲ್ಲಿ 19,300 ಅಡಿ ಎತ್ತರದಲ್ಲಿ ನಿರ್ಮಿಸಲಾದ ವಿಶ್ವದ ಅತಿ ಎತ್ತರದ ಮೋಟಾರು ರಸ್ತೆ ಇದಾಗಿದ್ದು, ಖರ್ದುಂಗ್ ಲಾ ಪಾಸ್ ಹೊಂದಿದ್ದ ಹಿಂದಿನ ದಾಖಲೆಯನ್ನು ಇದು ಮೀರಿಸಿದೆ.

- **ಬ್ರಾಂಗ್ಪಾ ಸೇತುವೆ:** ಶೋಕ್ ನದಿಯ ಮೇಲೆ BRO ನಿರ್ಮಿಸಿರುವ ಬ್ರಾಂಗ್ಪಾ ಸೇತುವೆಯನ್ನು ಲಂಡನ್‌ನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ವಿಶ್ವದ ಅತಿ ಎತ್ತರದ ಮಲ್ಟಿ ಸ್ಪ್ಯಾನ್ ಸೇತುವೆ ಎಂದು ಗುರುತಿಸಿದೆ. ಈ ಸೇತುವೆಯನ್ನು 14900 ಅಡಿ ಎತ್ತರದಲ್ಲಿ ಕೇವಲ 174 ದಿನಗಳಲ್ಲಿ ನಿರ್ಮಿಸಲಾಗಿದೆ. ಇದು ಲಡಾಖ್‌ನಲ್ಲಿ ಕಾರ್ಯತಂತ್ರದ ಸಂಪರ್ಕವನ್ನು ಒದಗಿಸುತ್ತದೆ.

ಬಿಲಾಫೊಂಡ್ ಲಾ ಪಾಸ್: ಲಡಾಕ್‌ನಲ್ಲಿ ಎತ್ತರದ ಪರ್ವತ ಪಾಸ್ ಇದಾಗಿದೆ. ಇಲ್ಲಿ BRO 17,500 ಅಡಿ ಎತ್ತರದಲ್ಲಿ ಮೋಟಾರು ರಸ್ತೆಯನ್ನು ನಿರ್ಮಿಸಿದೆ.

- **ಸೇಲಾ ಸುರಂಗ:** ₹825 ಕೋಟಿ ವೆಚ್ಚದಲ್ಲಿ 13,700 ಅಡಿ ಎತ್ತರದಲ್ಲಿ ನಿರ್ಮಿಸಲಾದ ಈ ಸುರಂಗ ಅರುಣಾಚಲ ಪ್ರದೇಶದ ಪಶ್ಚಿಮ ಕಮೆಂಗ್ ಜಿಲ್ಲೆಯ ತೇಜ್‌ಪುರದಿಂದ ತವಾಂಗ್‌ಗೆ (ಬಲಿಪರಾ-ಚಾರ್ದ್ವಾರ್-ತವಾಂಗ್) ಎಲ್ಲ ಕಾಲಮಾನಗಳಲ್ಲೂ ಸಂಪರ್ಕ ಕಲ್ಪಿಸುತ್ತದೆ. ಈ ಸುರಂಗ 3,000 ಮೀಟರ್ (9,800 ಅಡಿ) ಉದ್ದದ ರಸ್ತೆ ಸುರಂಗವಾಗಿದೆ. ಈ ಸುರಂಗ ಭಾರತದ ಮಿಲಿಟರಿ ಅನುಕೂಲತೆಯನ್ನು ಹೆಚ್ಚಿಸಿದ್ದು, LAC ಸಮೀಪದ ಪ್ರದೇಶಗಳಿಗೆ ಸೈನಿಕರು, ಶಸ್ತ್ರಾಸ್ತ್ರಗಳು ಮತ್ತು ಯುದ್ಧೋಪಕರಣಗಳನ್ನು ತ್ವರಿತವಾಗಿ ನಿಯೋಜಿಸಲು ಅನುವು ಮಾಡಿಕೊಡುತ್ತದೆ. ಸೆಲಾ ಸುರಂಗವನ್ನು ಇಂಗ್ಲೆಂಡಿನ 'ಇಂಟರ್‌ನ್ಯಾಷನಲ್ ಬುಕ್ ಆಫ್ ಆನರ್' ಭಾರತದ ಅತಿ ಎತ್ತರದ ಸುರಂಗ ಎಂದು ಗುರುತಿಸಿದೆ.
- **ಕೈಲಾಸ-ಮಾನಸ ಸರೋವರ ರಸ್ತೆ:** ಕೈಲಾಸ-ಮಾನಸ ಸರೋವರ ಯಾತ್ರಾ ಸ್ಥಳವನ್ನು ಸಂಪರ್ಕಿಸುವ ಭಾರತ-ಚೀನಾ ಗಡಿಯ ಬಳಿ ಲಿಪುಲೇಖ್ ಪಾಸ್‌ನಲ್ಲಿ 17,060 ಅಡಿ ಎತ್ತರದಲ್ಲಿ BRO ಮೋಟಾರು ರಸ್ತೆಯನ್ನು ನಿರ್ಮಿಸಿದೆ.
- **ಸಿಯೋಮ್ ಸೇತುವೆ:** ಅರುಣಾಚಲ ಪ್ರದೇಶದ ಅಲಾಂಗ್-ಯಿನ್‌ಕಿಯಾಂಗ್ ನಡುವೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಸಿಯೋಮ್ ನದಿಗೆ ಅಡ್ಡಲಾಗಿ ಉಕ್ಕಿನ ಕಮಾನುಗಳ ನೆರವಿನಿಂದ ನಿರ್ಮಿಸಲಾದ 'ಸಿಯೋಮ್' ಸೇತುವೆ BRO ದ ಅದ್ಭುತ ನಿರ್ಮಾಣವಾಗಿದೆ. 100 ಮೀಟರ್ ಉದ್ದದ ಈ ಸೇತುವೆ 'ಕ್ಲಾಸ್ 70' ದರ್ಜೆಯ ಉಕ್ಕನ್ನು ಬಳಸಿ ನಿರ್ಮಿಸಲಾಗಿದೆ.

ಟೇಜಿಂಗ್ ಲಾಮೊ ಲೇಕ್ ರಸ್ತೆ: ಉತ್ತರ ಸಿಕ್ಕಿಂನ ತ್ಸೋ ಲಾಮೊ ಸರೋವರದ ಬಳಿ 17,000 ಅಡಿ ಎತ್ತರದಲ್ಲಿ ನಿರ್ಮಿಸಲಾದ ಎತ್ತರದ ರಸ್ತೆ ಇದಾಗಿದೆ.

ಮುಂಬರುವ ಯೋಜನೆಗಳು

- **ಶಿಂಕುನ್ ಲಾ ಸುರಂಗ:** BROದ ಮುಂಬರುವ ಮಹತ್ವದ ಯೋಜನೆ ಎಂದರೆ ಶಿಂಕುನ್ ಲಾ ಸುರಂಗ. ಇದು ಪೂರ್ಣಗೊಂಡ ನಂತರ 15,800 ಅಡಿ ಎತ್ತರದಲ್ಲಿರುವ ಮತ್ತು ಚೀನಾದ ಮಿಲಾ ಸುರಂಗವನ್ನು ಮೀರಿಸುವ ವಿಶ್ವದ ಅತಿ ಎತ್ತರದ ಸುರಂಗವಾಗಲಿದೆ. 4.10 ಕಿ.ಮೀ. ದೂರ ವ್ಯಾಪಿಸುವ ಈ ಸುರಂಗವು ಲಡಾಖ್ ಮತ್ತು ಲಾಹೌಲ್ ಮತ್ತು ಸ್ಪಿತಿ ಪ್ರದೇಶಗಳ ನಡುವಿನ ಸಾರ್ವಕಾಲಿಕ ಸಂಪರ್ಕವನ್ನು ಖಾತ್ರಿಗೊಳಿಸುವ ಗುರಿಯನ್ನು ಹೊಂದಿದೆ.
- **ಪ್ರಾಜೆಕ್ಟ್ ಸಂಪರ್ಕ್:** ಜಮ್ಮು ಮತ್ತು ಕಾಶ್ಮೀರದ ಅಖ್ನೂರ್‌ನಿಂದ ಪೂಂಚ್‌ಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 144A ನಲ್ಲಿ 'ಸುಂಗಲ್ ಸುರಂಗ' ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಈ ಸುರಂಗ 2.79 ಕಿಮೀ ಉದ್ದವಿರಲಿದೆ. ಇದು ಪೂರ್ಣಗೊಂಡ ನಂತರ ರಾಜೌರಿ ಮತ್ತು ಪೂಂಚ್ ನಡುವಿನ ಪ್ರಯಾಣದ ಸಮಯ ಮತ್ತು ದೂರವನ್ನು ಗಣನೀಯವಾಗಿ ಕಡಿಮೆ ಮಾಡಲಿದೆ.

BRO ತನ್ನ ಕಾರ್ಯಾಚರಣೆಗಳಲ್ಲಿ ಸುಧಾರಿತ ತಂತ್ರಜ್ಞಾನಗಳು ಮತ್ತು ಯಾಂತ್ರೀಕರಣವನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಯೋಜಿಸುವತ್ತ ಗಮನಹರಿಸುತ್ತಿದೆ. ಕಾರ್ಯತಂತ್ರದ ದಕ್ಷತೆಯನ್ನು ಹೆಚ್ಚಿಸುವುದು ಮತ್ತು ಯೋಜನೆಯ ಅನುಷ್ಠಾನದಲ್ಲಿ ಸುರಕ್ಷತೆ ಕಾಪಾಡಿಕೊಳ್ಳುವುದು, ಯೋಜನೆಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದನ್ನು ಇದು ಖಾತ್ರಿಪಡಿಸುತ್ತದೆ. ❖

ಬಹುಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ..

1. ಸ್ಮಾರ್ಟ್ ನಗರಗಳ ಅಭಿಯಾನದಲ್ಲಿ ಸೂಕ್ತ ಜಲ ನಿರ್ವಹಣೆಗಾಗಿ ಕೆಳಗಿನ ಯಾವ ಕ್ರಮ ಕೈಗೊಳ್ಳಲಾಗುತ್ತದೆ?
1. ಸ್ಮಾರ್ಟ್ ಮೀಟರ್‌ಗಳ ಅಳವಡಿಕೆ.
2. ಜಲಸಂಪನ್ಮೂಲಗಳು ಸೋರಿಕೆ ಆಗದ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳುವುದು.
3. ನೀರಿನ ಗುಣಮಟ್ಟವನ್ನು ಪರಿವೀಕ್ಷಿಸುವುದು.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2 ಮತ್ತು 3
ಸಿ. 1 ಮತ್ತು 3 ಡಿ. 2 ಮತ್ತು 3

ಉತ್ತರ : ಬಿ

2. ಸ್ಮಾರ್ಟ್ ನಗರ ಎನ್ನುವ ಚಿಂತನೆ ಕೆಳಗಿನ ಯಾವ ಜಾಗತಿಕ ಪರಿಣಾಮದ ನಂತರ ಉದ್ಭವವಾಯಿತು?
ಎ. 2008ರ ಜಾಗತಿಕ ಹಿಂಜರಿತ.
ಬಿ. ವಿಶ್ವ ವ್ಯಾಪಾರ ಒಕ್ಕೂಟದ ಮೇಲಿನ ಭಯೋತ್ಪಾದಕರ ದಾಳಿ.
ಸಿ. ವಿಶ್ವಸಂಸ್ಥೆಯ 2008ರ ನಿರ್ಣಯದ ಆಧಾರದ ಮೇಲೆ.
ಡಿ. ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರ ವರದಿ ಆಧಾರದ ಮೇಲೆ.

ಉತ್ತರ : ಎ

3. ಕೆಳಗಿನ ಯಾವ ಕಾಯ್ದೆಗಳನ್ವಯ ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವನ್ನು ಸ್ಥಾಪಿಸಲಾಯಿತು?
ಎ. ಗ್ರಾಹಕರ ಹಿತಾಸಕ್ತಿಗಳ ಸಂರಕ್ಷಣಾ ಕಾಯ್ದೆ- 2019.
ಬಿ. ಗ್ರಾಹಕರ ಸಂರಕ್ಷಣಾ ಕಾಯ್ದೆ- 2019.
ಸಿ. ಗ್ರಾಹಕರ ಕುಂದು ಕೊರತೆಗಳ ನಿವಾರಣೆ ಕಾಯ್ದೆ- 2020.
ಡಿ. ದಾರಿ ತಪ್ಪಿಸುವ ಜಾಹೀರಾತು ನಿಯಂತ್ರಣ ಕಾಯ್ದೆ- 2014.

ಉತ್ತರ : ಬಿ

4. ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರಕ್ಕೆ ಕೆಳಗಿನ ಯಾವ ಅಧಿಕಾರಗಳನ್ನು ನೀಡಲಾಗಿದೆ?
1. ₹10 ಲಕ್ಷದವರೆಗೂ ದಂಡ ವಿಧಿಸುವ ಅಧಿಕಾರ.
2. ನಿರಂತರವಾಗಿ ತಪ್ಪು ಮಾಡಿದರೆ ₹50 ಲಕ್ಷದವರೆಗೂ ದಂಡ ವಿಧಿಸುವ ಅಧಿಕಾರ.

ಕೋಡ್ ಬಳಸಿ ಸರಿಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

5. ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಕೆಳಗಿನ ಯಾವ ಕಾರಣಗಳು ತಡೆಯುತ್ತಿವೆ ವಿಶ್ವಸಂಸ್ಥೆಯ ವರದಿ ಉಲ್ಲೇಖಿಸಿದೆ?
1. ಹವಾಮಾನ ಬದಲಾವಣೆ.
2. ಸಾಲದ ವೆಚ್ಚದಲ್ಲಿ ಹೆಚ್ಚಳ.
3. ಬಡ್ಡಿ ದರದಲ್ಲಿ ಹೆಚ್ಚಳ.
4. ತೆರಿಗೆ ವಂಚನೆ.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1, 2, 3 ಮತ್ತು 4 ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಎ

6. ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆ ವಿಳಂಬವಾಗುತ್ತಿದೆ ಎಂದು ಕೆಳಗಿನ ಯಾವ ಸಂಸ್ಥೆ ವರದಿಯನ್ನು ಬಿಡುಗಡೆ ಮಾಡಿದೆ?
ಎ. ಕೇಂದ್ರ ಸಮಾಜ ಕಲ್ಯಾಣ ಇಲಾಖೆ.
ಬಿ. ಅಂತರರಾಷ್ಟ್ರೀಯ ಹಣಕಾಸು ನಿಧಿ.
ಸಿ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ.
ಡಿ. ವಿಶ್ವಸಂಸ್ಥೆ.

ಉತ್ತರ : ಡಿ

7. ಆರನೇ ಅನುಸೂಚಿಯ ಅಡಿಯಲ್ಲಿ ಸ್ಥಾಪನೆಯಾಗಿರುವ ಸ್ವಾಯತ್ತತಾ ಜಿಲ್ಲಾ ಮಂಡಳಿಗಳು ಕೆಳಗಿನ ಯಾವ ವಿಚಾರಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ರೂಪಿಸಬಹುದು?
1. ಭೂಮಿ. 2. ಕೃಷಿ ವಲಯ.
3. ಅರಣ್ಯ. 4. ಆಂತರಿಕ ಭದ್ರತೆ.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 1 ಮತ್ತು 4
ಸಿ. 2 ಮತ್ತು 4 ಡಿ. 3 ಮತ್ತು 4

ಉತ್ತರ : ಎ

8. ಕೆಳಗಿನ ಯಾವ ರಾಜ್ಯಗಳಲ್ಲಿರುವ ಬುಡಕಟ್ಟುಗಳಿಗೆ ಆರನೇ ಅನುಸೂಚಿಯಲ್ಲಿ ಸ್ಥಾನಮಾನವನ್ನು ಕಲ್ಪಿಸಲಾಗಿದೆ?
1. ಅಸ್ಸಾಂ. 2. ಮೇಘಾಲಯ.
3. ತ್ರಿಪುರ. 4. ಮಣಿಪುರ.
5. ಅರುಣಾಚಲ ಪ್ರದೇಶ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 2 ಬಿ. 1, 2, 3 ಮತ್ತು 4
ಸಿ. 2 ಮತ್ತು 5 ಡಿ. 3 ಮತ್ತು 4

ಉತ್ತರ : ಬಿ

9. ಕೆಳಗಿನ ಯಾವ ಕೈಗಾರಿಕಾ ವಲಯಗಳಲ್ಲಿ ಚಿನ್ನವನ್ನು ಬಳಸಲಾಗುತ್ತದೆ?
1. ವಿದ್ಯುನ್ಮಾನ ವಲಯ.
2. ದಂತ ವೈದ್ಯಕೀಯ ವಲಯ.
3. ವಿಮಾನಯಾನ.
4. ವೈದ್ಯಕೀಯ ಸಲಕರಣೆಗಳ ಉತ್ಪಾದನೆ.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2, 3 ಮತ್ತು 4 ಡಿ. 2 ಮತ್ತು 4

ಉತ್ತರ : ಸಿ

10. ಕೆಳಗಿನ ಯಾವ ರಾಷ್ಟ್ರಗಳಲ್ಲಿ ಚಿನ್ನವನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತದೆ?
1. ಚೀನಾ. 2. ಆಸ್ಟ್ರೇಲಿಯಾ.
3. ರಷ್ಯಾ. 4. ಕೆನಡಾ.
5. ಅಮೆರಿಕ. 6. ಸ್ವಿಟ್ಜರ್ಲೆಂಡ್.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1, 2, 3, 4 ಮತ್ತು 5
ಬಿ. 1, 3, 4, 5 ಮತ್ತು 6
ಸಿ. 3 ಮತ್ತು 5
ಡಿ. 4 ಮತ್ತು 6.

ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Second Language ENGLISH

Unit-1 Prose : A Hero

34. Suppose you are the Swami of the story. Write a brief letter to your friend describing how you helped to catch a burglar in your house

Answer: My Dear ………..

Hope you are doing fine and have received my last mail. I am eagerly waiting for your reply. Meanwhile something exciting happened with me and hence this mail.

My father and I had a difference of opinion on the news report as to whether courage or strength is important to fight a tiger. I said it is strength and my father said that it is courage. Then he challenged me to sleep alone in the office room without even a light and with the door closed to prove my courage. I had a nightmare. Then in the dark I saw some creature approaching me. I held it tightly and bit it with such a force that it screamed with pain. Everyone at home rushed to see what happened. To my astonishment you know what, I had helped the police in catching one of the most notorious house-breakers of the district. Next day I was showered with congratulations. The headmaster called me a true scout and police inspector invited me to join the police! I am happy that I have proved my courage.

Please reply soon to both the mails.

Thank you

Yours sincerely

……………

35. Some words describing the characters of the story 'A Hero' are given in brackets: (Caring, protective, innocent, tricky, authoritative, disciplined, helpless, and nervous). Put them in appropriate columns

Swami's father	Mother	Granny	Swami

Answer:

Swami's father	Mother	Granny	Swami
Authoritative, Disciplined	Caring, Protective	Helpless	Innocent, Nervous, Tricky

Enrich your vocabulary

Task 1: Homophones: Homophones are the words that sound same but have different meanings and different spellings. Fill in the blanks with appropriate word.

1) We had …………many apples to carry. (too/two)
2) I …………a horse at Marina beach. (road/rode)
3) Did you have a ……………for lunch? (pear/pair)
4) The books are over……..on the shelf. (their/there)

Answer: (1) too, (2) rode, (3) pear, (4) there

Task 2: Fill in the blanks with choosing the appropriate word and complete the story.

This is a 1___(Storey/Story) told by a 2____(night/knight). Once he received a letter. When he 3____(red/read) it 4 (through/ threw), he could not believe his own eyes. 5 (Far/For), it was written 6____(buy/by) none other than Queen of the land. She asked him to meet her 7____(at/yet) a secret place. The knight was in a fix. But he thought 8 (of/off) a plan to tide over this problem. He 9 (vent/went) to the meeting place, not alone, but along with his 10 (fair/fare) wife. Can you guess what happened then?

Ans:- 1. story, 2. knight, 3. read, 4. through, 5. for, 6. by, 7. at, 8. of, 9. went, 10. fair

Task 3: Scramble the letters to form words. See the meaning clues in brackets

1. atrtefl……………….(praise),
2. boudt……………….(suspect),
3. ragtedy………………(unhappy ending),
4. ragfenmt……………..(a piece),
5. raetl……………………(careful),
6. cacsriyt……………….(short supply),
7. ymtsathpeic…………….(not cruel)

Answer: 1. Flatter, 2. Doubt, 3. Tragedy, 4. Fragment, 5. Alert, 6. Scarcity, 7. Sympathetic

Dialogue writing:

Imagine that Swami receives advice by his father and granny how would Swami say that he accepts or refuses it? Write a dialogue using the expressions given below:

Accepting:

a) That's a very good idea. Thank you.
b) Of course! I didn't think of it that. Many thanks.
c) Thank you for suggesting it. I think I will.
d) I think I must do that
e) Yes, I will. It's very good of you to make the offer.
f) That's very kind of you. I will.

Answer:

Father: Swami, can you think of learning and going on trekking during this summer vacation?
Swami: That's a very good idea. Thank you.
Father: You can start with practicing at rock climbing club in town sports complex during weekends.
Swami: Of course! I didn't think of that. Many thanks.
Father: You may also learn map reading with the help of your school NCC officer.
Swami: Thank you for suggesting it. I think I will.
Father: You may also request him to teach you about using electronic map reading using GPS equipments.
Swami: I think I must do that.
Father: If you master the electronic map reading, I will buy you a GPS navigator.
Swami: Yes, I will. It's very good of you to make the offer.
Father: I will accompany you on your first trek. But for successful trekking, you need good physical strength. Can you start morning exercise and running with me from tomorrow?
Swami: That's very kind of you.

I will Imagine that Swami receives advice by his father and granny how would Swami say that he accepts or refuses it? Write a dialogue using the expressions given below:

Refusing:

a) Thank you for the suggestion. I will certainly think about it.
b) That may be a good idea. Let me think about it.
c) I think, on the whole, I'd rather not. Thank you all the same.

(Contd……)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Chapter -3
ELECTROCHEMISTRY

1. What is electrochemistry?
Ans:- Electrochemistry is the branch of chemistry which deals with the interconversions of chemical and electrical energies and study of the behaviour of electrolytes.

2. What are electrolytes?
Ans:- A compound which conducts electricity in the molten state and in the aqueous solution is called an electrolyte. Eg:- NaCl, $CuSO_4$, HCl, H_2SO_4, NaOH, CH_3COOH etc.,

3. What are non- electrolytes?
Ans:- A compound which does not conduct electricity in the molten state and in the aqueous solution is called an electrolyte. Eg:- Urea, glucose, benzene, ethyl alcohol etc.,

4. What are electrolytic cells?
Ans:- The electrolytic cells are the cells that convert electrical energy into the chemical energy.

5. State Faraday's I law of electrolysis.
Ans:- Faraday's I law of electrolysis states that -
The amount of chemical reaction which occurs at any electrode during electrolysis by a current is proportional to the quantity of electricity passed through the electrolyte (solution or melt).

6. State Faraday's II law of electrolysis.
Ans:-Faraday's II law of electrolysis states that -
The amounts of different substances liberated by the same quantity of electricity passing through the electrolytic solution are proportional to their chemical equivalent weights.

7. What is a Galvanic cell?
Ans:- A device in which electricity is produced using a spontaneous chemical reaction involving oxidation and reduction is called an electrochemical or Galvanic cell. *Eg:-* Daniel cell, Leclanche cell etc.,

8. What are conductors?
Ans:- The substances which conducts electrical charges is called a conductor. *Eg:-* Metals like copper, silver and the solutions of common salt, hydrochloric acid etc.,

9. What are insulators?
Ans:- The substances that do not allow electricity to pass through them are called the insulators. *Eg:-* Glass, rubber, alcohol etc.,

10. Mention the types of conductors.
Ans:- The two types of conductors are –
(a) metallic conductors
(b) electrolytic conductors

11. What are metallic conductors?
Ans:- Metallic conductors are the metals that conduct electricity by allowing the flow of electrons through them. They are also called as the electronic conductors. *Eg:-* Copper, aluminium.

12. Name a non-metallic conductor.
Ans:- Graphite.

13. What is corrosion?
Ans:- The loss of the metal in the form of its compounds due to chemical attack by the constituents of the environment on a metal is called corrosion.

14. Give some examples for corrosion.
Ans:- Rusting of iron, tarnishing of silver, tailing of mercury are some examples for corrosion.

15. What is rusting?
Ans:- The phenomenon wherein the iron exposed to moist air for a long time develops a brown coating of hydrated ferric oxide ($Fe_2O_3 . 3H_2O$) on its surface is called as rusting.


16. Mention some of the methods of preventing corrosion.
Ans:-The different methods of prevention of corrosion are-
(1) Barrier protection
(2) Sacrificial protection
(3) Cathode protection

17. Give the chemical formula of rust.
Ans:- The chemical formula of rust is $Fe_2O_3 . xH_2O$

18. How does the salt water accelerate corrosion?
Ans:- The salt water increases the electrical conduction of the electrolyte solution formed on the metal surface, hence it accelerates corrosion.

19. Write a brief note on the Barrier protection method of preventing corrosion.
Ans:- Barrier protection method – A thin barrier is developed between the metal like iron to be protected and the environment by painting the surface or by coating the surface with a thin film of oil or grease or by developing a thin layer of some non – corrosive metals like nickel, chromium, copper etc., by electroplating.

20. Write a brief note on the Sacrificial protection method of preventing corrosion.
Ans:- Sacrificial protection method is the method in which the metal to be protected say iron is coated with more electropositive metal like zinc which loses electrons easily than iron and hence protects it from corroding. The process of coating zinc to iron is called galvanisation. (The zinc gradually gets lost as basic zinc carbonate $Zn(OH)_2 . ZnCO_3$).



21. Mention the factors, which affect corrosion.
Ans:- Some factors which affect corrosion are –
(a) Position of metals in the emf series
(b) Presence of impurities in the metals
(c) Presence of the electrolytes
(d) Presence of CO_2 in water and
(e) Presence of protective coatings.

22. How can we prevent corrosion using the anti- rust solutions?
Ans:- The solutions of the alkaline phosphates and alkaline chromates are generally used as anti-rust solutions. Due to the alkaline nature of these solutions, the H^+ ions are removed from the solutions, and rusting is prevented. *Eg:-* Iron articles are dipped in the alkaline sodium phosphate solutions and a protective insoluble film of iron phosphate is formed.

23. What is Standard Electrode Potential?
Ans:- The Standard Electrode Potential is the potential developed between the metal and the solution containing its own ions, when the metal is in equilibrium with its ions of unit concentration at 25^0 C

(Contd…)

ಇಂದು ಬುದ್ಧ ಪೂರ್ಣಿಮಾ

ಗೌತಮ ಬುದ್ಧ: ಎಲ್ಲ ಕಾಲದ ವೈದ್ಯ

• ಎಸ್. ಸೂರ್ಯಪ್ರಕಾಶ ಪಂಡಿತ್


ಒಳಿತು ಯಾರಿಗೆ ತಾನೆ ಬೇಡ? ಎಲ್ಲರಿಗೂ ಬೇಕಷ್ಟೆ. ಅದರಲ್ಲೂ ನಮ್ಮ ಸದ್ಯದ ಕಾಲಕ್ಕಂತೂ ಇದು ತುಂಬ ತುರ್ತಾಗಿ ಬೇಕಾಗಿದೆ. ಒಳಿತು ಎಂದರೆ ಯಾವುದು? ಮಂಗಳಕರವಾದದ್ದೇ ಒಳಿತು. ಎಲ್ಲರ ಹಿತವನ್ನು ಎತ್ತಿ ಹಿಡಿಯುವಂಥದ್ದೇ 'ಮಂಗಳ'. ಈ ಮಂಗಳದ ಹುಡುಕಾಟ ಕೇವಲ ನಮ್ಮ ಕಾಲದ ಪ್ರಶ್ನೆಯಷ್ಟೆ ಅಲ್ಲ; ಅದು ಸಾವಿರಾರು ವರ್ಷಗಳಿಂದ ನಡೆದಿರುವ ಹುಡುಕಾಟ. ಇದು ಕೇವಲ ಮನುಷ್ಯರ ಹುಡುಕಾಟವೂ ಅಲ್ಲವೆನ್ನಿ! ದೇವತೆಗಳೂ ಈ ಹುಡುಕಾಟದಲ್ಲಿ ಮನುಷ್ಯರ ಜೊತೆ ಒಮ್ಮೆ ಸೇರಿಕೊಂಡರಂತೆ. ದಿಟವಾದ ಮಂಗಳ ಎಲ್ಲಿ ಸಿಗುತ್ತದೆ – ಎಂದು ಹುಡುಕಾಟ ನಡೆಸಿದರು. ಹೀಗೆ ಹನ್ನೆರಡು ವರ್ಷಗಳು ಹುಡುಕಿ ಹುಡುಕಿ ಸೋತರಂತೆ. ಕೊನೆಗೆ ಬುದ್ಧ ಭಗವಂತ ಅವರಿಗೆಲ್ಲ ಮಂಗಳದ ದಾರಿಯನ್ನು ತೋರಿದನಂತೆ; ಮಂಗಳಗಳು ಮೂವತ್ತೆಂಟು ಬಗೆ – ಎಂದು ಅವನು ಒಕ್ಕಣಿಸಿದ.

ಇದು ಬೌದ್ಧವಾಙ್ಮಯದಲ್ಲಿ ಬರುವ ವಿವರ. ಬುದ್ಧ ಉಪದೇಶಿಸಿದ ಮೊದಲನೆಯ ಮಂಗಳವೇ – 'ಮೂರ್ಖರ ಸಹವಾಸವನ್ನು ತೊರೆಯಿರಿ' (ಅಸೇವನಾ ಚ ಬಾಲಾನಂ); 'ಮೂರ್ಖರಿಂದ ದೂರವಾಗಿ, ಜ್ಞಾನಿಗಳನ್ನು ಸೇರಿಕೊಳ್ಳಿ' (ಪಂಡಿತಾನಞ್ಚ ಸೇವನಾ) – ಇದು ಅವನು ಕಾಣಿಸಿದ ಎರಡನೆಯ ಮಂಗಳ.

ಬುದ್ಧ ಉಪದೇಶಿಸಿದ ಮಂಗಳದ ದಾರಿಯಲ್ಲಿರುವುದೆಲ್ಲವೂ ನಮ್ಮ ವ್ಯಕ್ತಿತ್ವವನ್ನು ಶುದ್ಧವಾಗಿಯೂ ಸುಂದರವಾಗಿಯೂ ಸಾರ್ಥಕವಾಗಿಯೂ ರೂಪಿಸಿಕೊಳ್ಳುವ ವಿಧಿ–ವಿಧಾನಗಳೇ ಎನ್ನುವುದು ಗಮನಾರ್ಹ. ಬುದ್ಧ ಪ್ರಧಾನವಾಗಿ ಉಪದೇಶಿಸಿದ್ದೇ ಶೀಲಗಳನ್ನು; ಎಂದರೆ ನಮ್ಮ ಮೈ–ಮನಸ್ಸುಗಳ ಕೊಳೆಯನ್ನು ಕಳೆದು, ಕಾಂತಿಯನ್ನು ಒದಗಿಸುವಂಥ ಶಾರೀರಿಕ ಮತ್ತು ಮಾನಸಿಕ ಸಾಧನೆಗಳನ್ನು. 'ಧಮ್ಮಪದ'ದ ಈ ಒಂದು ಸೊಲ್ಲಿನಲ್ಲಿ ಬುದ್ಧ ಭಗವಂತನ ಉಪದೇಶದ ಸಾರವಷ್ಟೂ ಇದೆ ಎಂದರೆ ತಪ್ಪಾಗದು:

ಸಬ್ಬ ಪಾಪಸ್ಸ ಅಕರಣಂ
ಕುಶಲಸ್ಸ ಉಪಸಂಪದಾ
ಸಚಿತ್ತ ಪರಿಯೋದಪನಂ
ಏತಂ ಬುದ್ಧಾನ ಸಾಸನಂ

'ಯಾವ ಪಾಪವನ್ನೂ ಮಾಡಬಾರದು; ಕುಶಲವನ್ನು ಸಂಪಾದಿಸಿಕೊಳ್ಳಬೇಕು; ತನ್ನ ಚಿತ್ತವನ್ನು ಪರಿಶುದ್ಧಿಗೊಳಿಸಿಕೊಳ್ಳಬೇಕು. ಇದೇ ಬುದ್ಧನ ಅನುಶಾಸನ.'



ಈ ಗಾಥೆಯನ್ನು ಬುದ್ಧನ ಉಪದೇಶದ ತ್ರಿವೇಣಿಸಂಗಮ ಎನ್ನಬಹುದು; ಶೀಲ, ಪ್ರಜ್ಞಾ ಮತ್ತು ಸಮಾಧಿ – ಎಂಬ ಮೂರು ತತ್ತ್ವಗಳು ಇದರಲ್ಲಿ ಅಡಕವಾಗಿವೆ. ಬುದ್ಧ ಎತ್ತಿಹಿಡಿದಿದ್ದು ಈ ಮೂರು ವಿವರಗಳನ್ನೇ ಹೌದೆನ್ನಿ.

ಎಲ್ಲ ಮಹಾತ್ಮರ ವಿಷಯದಲ್ಲಿ ಆಗುವಂತೆ ಬುದ್ಧ ಭಗವಂತನ ವಿಷಯದಲ್ಲೂ ನಮ್ಮ ಗ್ರಹಿಕೆ ಸಂಕುಚಿತವಾಗಿದೆ. ಇದು ನಮ್ಮ ಸಮಾಜದ ದುರಂತವೇ ಸರಿ. 'ಬುದ್ಧ' ಎಂಬ ಮಹಾತತ್ತ್ವವೂ ಇಂದು ನಮ್ಮ ದೇಶದಲ್ಲಿ ರಾಜಕೀಯಕ್ಕೆ ವಸ್ತುವಾಗಿದೆ; ನಮ್ಮ ರಾಗ–ದ್ವೇಷಗಳ ಸಮರ್ಥನೆಯ ದಾಳವಾಗಿದೆ. ಸಿದ್ಧಾರ್ಥ ತಪಸ್ಸಿಗೆ ಕುಳಿತಾಗ ಮಾರ ಅವನ ಮೇಲೆ ದಾಳಿ ಮಾಡಿದ. ಮಾರನೆಂಬುವನು ಕ್ಷುದ್ರ ಬಯಕೆಗಳ ಪ್ರತಿನಿಧಿ; ಶರೀರ–ಮನಸ್ಸು–ಬುದ್ಧಿಗಳನ್ನು ಕೊಳೆಮಾಡುವ ವಂಚಕ. ಸಿದ್ಧಾರ್ಥನ ಮೇಲೆ ಅವನು ಏಳು ವರ್ಷಗಳು ಸಮರ ಸಾರಿದ. ಆದರೆ ಸಿದ್ಧಾರ್ಥ ಅವನಿಗೆ ಸೋಲಲಿಲ್ಲ; ಮಾರನಿಂದ ಗೆದ್ದ ಸಿದ್ಧಾರ್ಥ, ಕೊನೆಗೆ ಬುದ್ಧನಾಗಿ ಎದ್ದ. ಆದರೆ ನಾವು ಇಂದು ಮಾರನ ಪ್ರತಿನಿಧಿಗಳಾಗಿಯೇ ಬುದ್ಧನನ್ನು ವ್ಯಾಖ್ಯಾನಿಸುತ್ತಿದ್ದೇವೆ; ನಮ್ಮ ಸ್ವಾರ್ಥಕೇಂದ್ರಿತ ಸಂಕುಚಿತ ಸಿದ್ಧಾಂತಗಳಿಂದ ಅವನ ದರ್ಶನವನ್ನು ಮಂಕುಗೊಳಿಸುತ್ತಿದ್ದೇವೆ. ಬುದ್ಧತ್ವ ಎಂಬುದು ಪೂರ್ಣತೆಗೆ ಸಂಕೇತ. ಬುದ್ಧ ಹುಟ್ಟಿದ್ದು, ಬೋಧಿಯನ್ನು ಪಡೆದದ್ದು, ಮಹಾನಿರ್ವಾಣವನ್ನು ಹೊಂದಿದ್ದು – ಎಲ್ಲವೂ ಹುಣ್ಣಿಮೆಯಂದೇ. ಹುಣ್ಣಿಮೆ ಪೂರ್ಣತೆಗೆ ಸಂಕೇತ; ಜೊತೆಗೆ ಆಹ್ಲಾದಕ್ಕೂ ದ್ಯೋತಕ. ಆದರೆ ಪೂರ್ಣತೆಯನ್ನು ಕಾಣುವಂಥ ಶೀಲವನ್ನೂ ಧ್ಯಾನವನ್ನೂ ಪ್ರಜ್ಞೆಯನ್ನೂ ನಾವು ಇಂದು ಕಳೆದುಕೊಂಡಿದ್ದೇವೆ. ಹೀಗಾಗಿ ಆಹ್ಲಾದದ ತಂಪು ನಮ್ಮಿಂದ ದೂರವಾಗಿ, ನಮ್ಮ ಭಾವ–ಬುದ್ಧಿಗಳಲ್ಲಿ ರಾಗ–ದ್ವೇಷಗಳ ಉರಿಯೇ ನೆಲೆಯೂರಿದೆ.

ಲೋಕದಲ್ಲಿ ದುಃಖ ಇದೆ ಎನ್ನುವುದನ್ನು ಬುದ್ಧ ಸಾರಿ ಹೇಳಿದ. ಆದರೆ ಅವನು ಈ ದುಃಖದಿಂದ ಬಿಡುಗಡೆಯನ್ನು ಪಡೆಯುವ ದಾರಿಯನ್ನೂ ಲೋಕಕ್ಕೆ ತಿಳಿಸಿದ. ರೋಗವನ್ನೂ, ಅದಕ್ಕೆ ಔಷಧವನ್ನೂ ತಿಳಿಸಿದ ಮಹಾವೈದ್ಯ ಬುದ್ಧ. ನಮ್ಮ ರೋಗಗಳು ವಾಸಿಯಾಗಬೇಕಾದರೆ, ಮಂಗಳಮಯವಾದ ಬದುಕು ನಮ್ಮದಾಗಬೇಕಾದರೆ, ಬುದ್ಧನು ಉಪದೇಶಿಸಿದ ದಾರಿಯಲ್ಲಿ ನಡೆಯುವ ಸಮ್ಯಕ್ ಸಂಕಲ್ಪ ನಮ್ಮದಾಗಬೇಕು. *

ಅಂಜಲಿ ಕೊಲೆ ಆರೋಪಿ ಸಿಐಡಿಗೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದಲ್ಲಿ ನಡೆದ ಅಂಜಲಿ ಅಂಬಿಗೇರ ಹತ್ಯೆಗೆ ಸಂಬಂಧಿಸಿದಂತೆ ಆರೋಪಿ ಗಿರೀಶ ಸಾವಂತನನ್ನು ಸಿಐಡಿ ಅಧಿಕಾರಿಗಳು ಬುಧವಾರ ತಮ್ಮ ವಶಕ್ಕೆ ಪಡೆದರು.

ದಾವಣಗೆರೆಯಲ್ಲಿ ಚಲಿಸುತ್ತಿದ್ದ ರೈಲಿನಿಂದ ಜಿಗಿದು, ಕೆಳಗೆ ಬಿದ್ದಿದ್ದರಿಂದ ಗಾಯಗೊಂಡಿದ್ದ ಗಿರೀಶನನ್ನು ನಗರದ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಗೆ ಬಂದು ವಶಕ್ಕೆ ತೆಗೆದುಕೊಂಡ ಸಿಐಡಿ ಅಧಿಕಾರಿಗಳು, ಬೆಂಡಿಗೇರಿ ಪೊಲೀಸ್ ಠಾಣೆಗೆ ಕರೆದೊಯ್ದು ಸುದೀರ್ಘ ವಿಚಾರಣೆ ನಡೆಸಿದರು. ಆತನ ತಾಯಿ ಸವಿತಾ ಅವರನ್ನೂ ವಿಚಾರಣೆ ನಡೆಸಿ, ಹಳೆಯ ಪ್ರಕರಣಗಳ ಬಗ್ಗೆ ಮಾಹಿತಿ ಕಲೆ ಹಾಕಿದರು.

ವಿದ್ಯಾ ಕೊಲೆ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬನ್ನೂರು (ಮೈಸೂರು ಜಿಲ್ಲೆ): ನಟಿ ಹಾಗೂ ನಗರ ಕಾಂಗ್ರೆಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ವಿದ್ಯಾ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಪತಿ ನಂದೀಶ್‌ನನ್ನು ಪೊಲೀಸರು ಬುಧವಾರ ಸಂಜೆ ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ವಿದ್ಯಾ ಸೋಮವಾರ ತಡರಾತ್ರಿ ತಿ.ನರಸೀಪುರ ತಾಲ್ಲೂಕಿನ ತುರಗನೂರಿನಲ್ಲಿರುವ ಪತಿಯ ಮನೆಗೆ ತೆರಳಿದ್ದಾಗ ಇಬ್ಬರ ನಡುವೆ ಜಗಳವಾಗಿ, ಆರೋಪಿಯು ಪತ್ನಿಯ ತಲೆಗೆ ತಲವಾರಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದರು. ಅಲ್ಲಿಂದ ಮಂಡ್ಯದಲ್ಲಿರುವ ಚಿಕ್ಕಮ್ಮನ ಮನೆಗೆ ತೆರಳಿದ್ದ ಆರೋಪಿ, ನಂತರ ಬೆಂಗಳೂರಿನ ಸಂಬಂಧಿಕರೊಬ್ಬರ ಮನೆಗೆ ಹೋಗಿದ್ದರು. 'ಆ ಬಗ್ಗೆ ಮಾಹಿತಿ ಪಡೆದ ಜಿಲ್ಲಾ ಪೊಲೀಸರ ತಂಡ ಆತನನ್ನು ಬಂಧಿಸಿ, ಸ್ಥಳ ಮಹಜರು ನಡೆಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು 'ಸಿ.ಡಿ ಶಿವು' ಎಂದು ಕರೆದ ಎಚ್‌.ಡಿ.ಕುಮಾರಸ್ವಾಮಿ

'ಸರ್ಕಾರದ ಪ್ರಾಯೋಜಕತ್ವದಲ್ಲೇ ಪ್ರತಿಭಟನೆ'

ಪ್ರಜಾವಾಣಿ ವಾರ್ತೆ



ಎಚ್‌.ಡಿ. ಕುಮಾರಸ್ವಾಮಿ

ಮೈಸೂರು: 'ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿ, ಮೇ 30ರಂದು ಹಾಸನದಲ್ಲಿ ಸರ್ಕಾರದ ಪ್ರಾಯೋಜಕತ್ವದಲ್ಲೇ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಅದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಾಯೋಜಕತ್ವದ್ದೋ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರದ್ದೋ ಗೊತ್ತಿಲ್ಲ. ಅಂಗನವಾಡಿ ಕಾರ್ಯಕರ್ತೆಯರನ್ನು ಕರೆತರುವಂತೆ ಸರ್ಕಾರ ಸೂಚಿಸಿದೆ ಎಂದು ಕೆಲವು ಅಧಿಕಾರಿಗಳೇ ಮಾಹಿತಿ ನೀಡಿದ್ದಾರೆ' ಎಂದರು.

'ಹೇಳಿದ್ದರೆ ನಾನೇ ಒಂದಷ್ಟು ಮಹಿಳೆಯರನ್ನು ಕಳಿಸಿ, ಬೆಂಬಲವನ್ನೂ ಕೊಡುತ್ತಿದ್ದೆ. ನೊಂದ ಕುಟುಂಬಗಳಿಗೆ ಏನು ನ್ಯಾಯ ಕೊಡಿಸುತ್ತೀರಿ' ಎಂದು ಪ್ರಶ್ನಿಸಿದರು.

'ಪೆನ್‌ಡ್ರೈವ್ ಪ್ರಕರಣ ಹಾಗೂ ಪ್ರಜ್ವಲ್ ಬರುವುದು ವಿಳಂಬ ಆಗುತ್ತಿರುವುದರಿಂದ ದೇವೇಗೌಡರ ಕುಟುಂಬಕ್ಕೆ ಸ್ವಲ್ಪ ಹಾನಿಯಾಗಿರುವುದು ಸತ್ಯ. ಅದಕ್ಕಾಗಿಯೇ ಪ್ರಕರಣ ಸೃಷ್ಟಿಸಿದ್ದಾರೆ. ಡಿ.ಕೆ.ಶಿವಕುಮಾರ್ ಬಗ್ಗೆ ನಾನೇಕೆ ಹೊಟ್ಟೆಕಿಚ್ಚು ಪಡಲಿ, ಅದರಿಂದ ನನಗೇನು ಸಿಗುತ್ತದೆ? ಹೊಟ್ಟೆಕಿಚ್ಚು ಇದೆ ಎಂದಾದರೆ, ಅಂಥ ಪರಿಸ್ಥಿತಿ ತಂದುಕೊಂಡಿರೇಕೆ?' ಎಂದು ಕೇಳಿದರು.

'ವಿಡಿಯೊ ಮಾಡಿದ್ದೊಂದು ಭಾಗ. ಅದನ್ನು ಚುನಾವಣೆಗಾಗಿ ಹಬ್ಬಿಸಿದ್ದು ದೊಡ್ಡ ಅಪರಾಧವಲ್ಲವೇ? ಮಹಿಳೆಯರ ಮುಖ ಮಸುಕು ಮಾಡದೇ ಹಂಚಿಕೊಂಡಿದ್ದರಿಂದ ಕುಟುಂಬಗಳ ಪರಿಸ್ಥಿತಿ ಏನಾಗಿದೆ, ಕಾರಣ ಯಾರು ಮಹಾನುಭಾವರೇ' ಎಂದು ಪ್ರಶ್ನಿಸಿದ ಅವರು, 'ಮಹಾನುಭಾವರು 1980ರಲ್ಲೇ ಸಿ.ಡಿ ಕಾರ್ಖಾನೆ ತೆರೆದಿದ್ದಾರೆ' ಎಂದರು.

'ಸಿ.ಡಿ ಶಿವು ಅವರೇ, ಪ್ರಧಾನಿ ಸ್ಥಾನವನ್ನೇ ಬಿಟ್ಟುಕೊಟ್ಟ ವಂಶ ನಮ್ಮದು. ಎಲ್ಲ ಅಧಿಕಾರವನ್ನೂ ನೋಡಿಯಾಗಿದೆ. ಬೇಡವೆಂದರೂ ಅಧಿಕಾರ ಬಂದಿದೆ; ಬೇಕು ಎಂದಾಗ ಉಳಿದಿಲ್ಲ. ಆದರೆ, ಹುಡುಕಿಕೊಂಡು ಹೋಗಿಲ್ಲ' ಎಂದು ತಿರುಗೇಟು ನೀಡಿದರು.

'ಪೆನ್‌ಡ್ರೈವ್ ಪ್ರಕರಣದಲ್ಲಿ ಎಸ್‌ಐಟಿಯವರು ಎಷ್ಟು ಮನೆಗಳಿಗೆ ಹೋಗಿ ತನಿಖೆ ನಡೆಸುತ್ತಾರೆ, ಮೂಲವನ್ನು ಹೇಗೆ ಪತ್ತೆ ಹಚ್ಚುತ್ತಾರೆ? ರೇವಣ್ಣ ಅವರ ಮನೆಯಲ್ಲಿ ಕೆಲಸಕ್ಕಿದ್ದ ಕಾರ್ತಿಕ್ ಪೆನ್‌ಡ್ರೈವ್ ಮೂಲ. ಆತ ಹಾಸನದ ಕಾಂಗ್ರೆಸ್ ಅಭ್ಯರ್ಥಿ ಹಿಡಿದುಕೊಂಡು ಡಿ.ಕೆ.ಸುರೇಶ್ ಮನೆಗೆ ಹೋಗಿದ್ದ, ಅಲ್ಲಿ ಸಿ.ಡಿ ಶಿವಕುಮಾರ್ ವಿಡಿಯೊಗಳನ್ನು ವರ್ಗಾಯಿಸಿಕೊಂಡಿದ್ದಾರೆ' ಎಂದು ದೂರಿದರು.

'ನಾನು ಪ್ರಜ್ವಲ್ ಪರವಲ್ಲ. ಆತ ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ. ಭಯಬೀಳುವುದು ಬೇಡ, ಬಂಧನವಾದರೆ ಆಗಲಿ, ಬಂದುಬಿಡು. ವಕೀಲರ ಸಲಹೆಗಿಂತ, ನೈತಿಕತೆ ಉಳಿಸಿಕೊಳ್ಳಲು ಬಾ' ಎಂದರು. 'ಮುಖ್ಯಮಂತ್ರಿಯವರೇ, ನಿಮ್ಮ ಅಕ್ಕಪಕ್ಕದಲ್ಲಿರುವವರೇ ನಮಗೂ ಮಾಹಿತಿ ಕೊಡುತ್ತಾರೆ. ಏನೇನು ನಡೆಯುತ್ತಿದೆ ಎನ್ನುವುದು ಅವರಿಂದಲೇ ತಿಳಿಯುತ್ತದೆ.' ಎಂದರು.

> **ನನ್ನಲ್ಲಿರುವ ಪೆನ್‌ಡ್ರೈವ್ ವರ್ಗಾವಣೆಯ ಭ್ರಷ್ಟಾಚಾರಕ್ಕೆ ಸಂಬಂಧಿಸಿದ್ದು. ಅಧಿಕಾರಿಗಳ ನೊಂದು ಏನೇನು ಚರ್ಚಿಸಿದ್ದಾರೆ, ಎಲ್ಲಿಂದ ಸಾಲ ತರಬೇಕೆಂದು ಮಾತನಾಡಿಕೊಂಡಿದ್ದಾರೆ**
> **ಎಚ್‌.ಡಿ.ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಸಿ.ಎಂ, ಡಿಸಿಎಂ ಬಳಿ ಇರುವವರು ಉಗ್ರರು'

'ದೂರವಾಣಿ ಕದ್ದಾಲಿಕೆ ಮಾಡಲು ಅವರೇನು ಉಗ್ರರಾ?' ಎಂದು ಕೆಲವರು ಕೇಳಿದ್ದಾರೆ. ಸಿ.ಎಂ, ಡಿಸಿಎಂ ಬಳಿ ಇರುವವರೆಲ್ಲಾ ಉಗ್ರಗಾಮಿಗಳೇ. ಬಹಳಷ್ಟು ಉಗ್ರರು ಅವರ ಸುತ್ತಮುತ್ತಲೇ ಇದ್ದಾರೆ. ಪೆನ್‌ಡ್ರೈವ್ ಪ್ರಕರಣದಲ್ಲಿ ಆ ಉಗ್ರರಲ್ಲಿ ಒಬ್ಬರನ್ನಾದರೂ ಮುಟ್ಟಿದ್ದಾರೆಯೇ? ಪ್ರಮುಖ ಪಾತ್ರಧಾರಿಗಳಲ್ಲಿ ಒಬ್ಬರನ್ನಾದರೂ ಬಂಧಿಸಿದ್ದಾರೆಯೇ?' ಎಂದು ಕುಮಾರಸ್ವಾಮಿ ಕೇಳಿದರು.

'ಪೆನ್‌ಡ್ರೈವ್ ಪ್ರಕರಣದ ಬಗ್ಗೆ ಸಚಿವರು, ಕಾಂಗ್ರೆಸ್ ಕಾರ್ಯಕರ್ತರು ಮಾತನಾಡಬಾರದೆಂದು ಮುಖ್ಯಮಂತ್ರಿ ಸೂಚಿಸಿದ್ದಾರೆ. ಅವರ ಬುಡಕ್ಕೆ ಬರುತ್ತಿದೆಯಲ್ಲಾ, ಅದಕ್ಕಾಗಿ ಹಾಗೆ ಹೇಳಿದ್ದಾರೆ' ಎಂದು ಆರೋಪಿಸಿದರು.

'ಪ್ರಜ್ವಲ್, ರೇವಣ್ಣ ಸಂಪರ್ಕದಲ್ಲಿಲ್ಲ'

'ಸಂಸದ ಪ್ರಜ್ವಲ್, ತಂದೆ ಎಚ್‌.ಡಿ. ರೇವಣ್ಣ ಸಂಪರ್ಕದಲ್ಲೂ ಇಲ್ಲ. ನಾನು ಈಗ ವಿದೇಶಕ್ಕೆ ಹೋದರೆ, ಪ್ರಜ್ವಲ್ ರಕ್ಷಣೆಗೆಂದೇ ಹೋಗಿದ್ದಾರೆಂದು ಸುದ್ದಿ ಹಬ್ಬಿಸುತ್ತಾರೆ. ಯಾವ ಗ್ರಹಚಾರ ನಮಗೆ?' ಎಂದು ಕುಮಾರಸ್ವಾಮಿ ಅಸಮಾಧಾನ ಹೊರಹಾಕಿದರು. 'ಪೆನ್‌ಡ್ರೈವ್ ಪ್ರಕರಣವನ್ನು ಹಳ್ಳ ಹಿಡಿಸಲಾಗುತ್ತಿದೆ. ಯಾರೇ ತಪ್ಪಿತಸ್ಥರಾಗಿದ್ದರೂ ಕ್ರಮ ಜರುಗಿಸಲೇಬೇಕು. ಹೆಚ್ಚಿನ ತನಿಖೆಯೂ ಅಗತ್ಯ. ಅದಕ್ಕಾಗಿ ಕಾನೂನು ಹೋರಾಟ ಮಾಡುತ್ತೇವೆ. ಬಿಜೆಪಿ-ಜೆಡಿಎಸ್ ಮೈತ್ರಿಗೂ ಪೆನ್‌ಡ್ರೈವ್ ಪ್ರಕರಣಕ್ಕೂ ಸಂಬಂಧ ಇಲ್ಲ' ಎಂದರು.

ರಾಹುಲ್ ವಿರುದ್ಧ ಜೆಡಿಎಸ್ ದೂರು

ಬೆಂಗಳೂರು: ಪ್ರಜ್ವಲ್ ರೇವಣ್ಣ 400 ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ್ದಾರೆ ಎಂದು ಬಹಿರಂಗ ಸಭೆಯಲ್ಲಿ ಹೇಳಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಜೆಡಿಎಸ್ ಆಗ್ರಹಿಸಿದೆ. ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಬುಧವಾರ ಭೇಟಿ ಮಾಡಿದ ಜೆಡಿಎಸ್ ನಿಯೋಗ, ಈ ಕುರಿತು ದೂರು ಸಲ್ಲಿಸಿದೆ.

ಪ್ರಜ್ವಲ್ ಪ್ರಕರಣ ಮರೆಮಾಚಲು ಕದ್ದಾಲಿಕೆ ಆರೋಪ: ಡಿಕೆಶಿ

ಬೆಂಗಳೂರು: 'ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಬೇರೆ ಕಡೆ ತಿರುಗಿಸಲು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಫೋನ್ ಕದ್ದಾಲಿಕೆ ವಿಚಾರ ಪ್ರಸ್ತಾಪಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೂರಿದರು.

ಸುದ್ದಿಗಾರರ ಜತೆ ಬುಧವಾರ ಈ ಕುರಿತು ಮಾತನಾಡಿದ ಸಿದ್ದರಾಮಯ್ಯ, ರಾಜ್ಯ ಸರ್ಕಾರ ನಮ್ಮ ಕುಟುಂಬದ ಫೋನ್ ಕದ್ದಾಲಿಕೆ ಮಾಡುತ್ತಿದೆ ಎಂಬ ಕುಮಾರಸ್ವಾಮಿ ಹೇಳಿಕೆಯಲ್ಲಿ ಸತ್ಯವಿಲ್ಲ. ಅಂತಹ ಕೆಲಸವನ್ನು ಸರ್ಕಾರ ಮಾಡಿಲ್ಲ. ಹಿಂದೆ ಮುಖ್ಯಮಂತ್ರಿಯಾದಾಗಲೂ, ಈಗಲೂ ಮಾಡಿಲ್ಲ. ನನ್ನ ರಾಜಕೀಯ ಜೀವನದಲ್ಲಿ ಇಲ್ಲಿಯವರೆಗೂ ಇಂತಹ ನೀಚತನಕ್ಕೆ ಅವಕಾಶ ನೀಡಿಲ್ಲ' ಎಂದರು.

ಫೋನ್ ಕದ್ದಾಲಿಕೆ ಬಗ್ಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅವರು ಕೂಡ ಗೃಹ ಸಚಿವರಾಗಿದ್ದವರು. ಮತ್ತೆ ಕೆಲವರು ಮಾಜಿ ಮುಖ್ಯಮಂತ್ರಿಗಳಾಗಿದ್ದವರು. ಅವರೆಲ್ಲ ದೂರು ಕೊಡಲಿ' ಎಂದು ತಿರುಗೇಟು ನೀಡಿದರು.

ಕೋರ್ಟ್ ಮೇಲೆ ಗೌರವ, ದೇವರ ಮೇಲೆ ನಂಬಿಕೆ: ರೇವಣ್ಣ

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ತಾಲ್ಲೂಕಿನ ಹರದನಹಳ್ಳಿಯಲ್ಲಿ ಮಂಗಳವಾರ ರಾತ್ರಿ ವಾಸ್ತವ್ಯ ಮಾಡಿದ್ದ ಎಚ್‌.ಡಿ. ರೇವಣ್ಣ, ಬುಧವಾರ ಬೆಳಿಗ್ಗೆ ಅಲ್ಲಿನ ಶಿವನ ದೇವಸ್ಥಾನ, ಬೆಟ್ಟದ ರಂಗನಾಥಸ್ವಾಮಿ ದೇವಸ್ಥಾನ, ಪಟ್ಟಣದ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ ಹಾಗೂ ಆಂಜನೇಯಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು.

ನಂತರ, ಪ್ರಜ್ವಲ್ ರೇವಣ್ಣ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, 'ಅದು ನನಗೆ ಗೊತ್ತಿಲ್ಲ. ಪ್ರಕರಣ ನ್ಯಾಯಾಲಯದಲ್ಲಿರುವಾಗ ಪ್ರತಿಕ್ರಿಯೆ ಕೊಡುವುದಿಲ್ಲ. ನ್ಯಾಯಾಲಯದ ಬಗ್ಗೆ ಗೌರವವಿದೆ. ಆದರೆ, ನಾನು ದೇವರ ಮೇಲೆ ನಂಬಿಕೆ ಇಟ್ಟಿರುವವ' ಎಂದರು.

'ಬದುಕಿರುವವರೆಗೆ ಜಿಲ್ಲೆಯ ಜನರ ಸಹಕಾರಕ್ಕೆ ಋಣಿಯಾಗಿರುತ್ತೇನೆ. ಕಾರ್ಯಕರ್ತರ ಸಂಕಷ್ಟಕ್ಕೆ ಜೊತೆಯಾಗಿ ನಿಲ್ಲುತ್ತೇನೆ. ರಾಜ್ಯದ, ಜಿಲ್ಲೆಯ ಹಾಗೂ ಹೊಳೆನರಸೀಪುರದ ಜನ ದೇವೇಗೌಡರಿಗೆ 60 ವರ್ಷದಿಂದ ರಾಜಕೀಯ ಶಕ್ತಿ ಕೊಟ್ಟಿದ್ದಾರೆ. ಕುಮಾರಸ್ವಾಮಿ ನನಗೆ ಶಕ್ತಿ ಕೊಟ್ಟಿದ್ದಾರೆ. 25 ವರ್ಷ ಶಾಸಕನಾಗಿ ಕೆಲಸ ಮಾಡಿದ್ದೇನೆ. ಯಾರೂ ಧೃತಿಗೆಡಬೇಕಾಗಿಲ್ಲ. ನಮ್ಮ ಕುಟುಂಬ ನಿಮ್ಮೊಂದಿಗಿರುತ್ತದೆ' ಎಂದರು.

'ನಿನ್ನೆ ಇಲ್ಲಿಗೆ ಬರಲೆಂದೇ ಹೊರಟಿದ್ದೆ. ಕಡೆಗಳಿಗೆಯಲ್ಲಿ ವಿಧಾನ ಪರಿಷತ್ ಚುನಾವಣೆ ಬಗ್ಗೆ ಸಭೆ ಇದ್ದು, ಬರಲೇಬೇಕೆಂದಿದ್ದರಿಂದ ಮೈಸೂರಿಗೆ ಹೋದೆ' ಎಂದು ಸಮಜಾಯಿಷಿ ನೀಡಿದರು.

'ಕುಮಾರಸ್ವಾಮಿ, ಯಡಿಯೂರಪ್ಪ ಆಡಳಿತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ ಹೊಸ ಶಾಲಾ– ಕಾಲೇಜುಗಳನ್ನು ತೆರೆದು ಶಿಕ್ಷಕರಿಗೂ ಹೆಚ್ಚಿನ ಅನುಕೂಲ ಕಲ್ಪಿಸಿದರು. ಈ ಬಾರಿಯ ವಿಧಾನ ಪರಿಷತ್ ಚುನಾವಣೆಯಲ್ಲಿ ಒಮ್ಮತದ ಅಭ್ಯರ್ಥಿಯಾಗಿ ವಿವೇಕಾನಂದ ಅವರನ್ನು ಕಣಕ್ಕಿಳಿಸಿದ್ದೇವೆ. ಎನ್‌ಡಿಎ ಅಭ್ಯರ್ಥಿಯನ್ನು ಗೆಲ್ಲಿಸಲು ಪಣತೊಟ್ಟಿದ್ದೇವೆ' ಎಂದರು.

'ಕಾರ್ತಿಕ್ ಬಂಧನ ಶೀಘ್ರ'

'ನಾಲ್ಕೈದು ದಿನ ಸಮಯ ಕೊಡಿ. ಪೆನ್‌ಡ್ರೈವ್ ಪ್ರಕರಣ ದಲ್ಲಿ ಸಂಸದ ಪ್ರಜ್ವಲ್ ರೇವಣ್ಣ ಮಾಜಿ ಕಾರು ಚಾಲಕ ಕಾರ್ತಿಕ್‌ನನ್ನೂ ಪೊಲೀಸರು ಬಂಧಿಸಬಹುದು' ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಎಲ್ಲವನ್ನೂ ಮಾಧ್ಯಮ ದವರಿಗೆ ಹೇಳಲೇಬೇಕೆಂದಿಲ್ಲ. ಸ್ವಲ್ಪ ಕಾಯಿರಿ' ಎಂದರು.

'ಪೆನ್ ಡ್ರೈವ್ ವಿಚಾರವನ್ನು ರಾಜಕೀಯವಾಗಿ ಬಳಸಿಕೊಳ್ಳುವವರ ಮುಖಕ್ಕೆ ಉಗಿಯಬೇಕು. ರಾಜಕೀಯಕ್ಕಾಗಿ ಜಿಲ್ಲೆಗೆ ಕೆಟ್ಟ ಹೆಸರು ತರಬಾರದು' ಎಂದರು.

ಪ್ರಜಾಪ್ರಭುತ್ವ ಇಲ್ಲಿ ನಾಟ್ ರೀಚಬಲ್!

ಒಂದನೇ ಪುಟದಿಂದ

'ಕ್ಷೇತ್ರಕ್ಕೆ ಕೆಲಸ ತರುವಲ್ಲಿ ಶಾಸಕ ಎಚ್‌.ಡಿ. ರೇವಣ್ಣ ಅವರದು ಎತ್ತಿದ ಕೈ. ಸುಸಜ್ಜಿತ ರಸ್ತೆಗಳಿವೆ. ದೇವಾಲಯಗಳು ಜೀರ್ಣೋದ್ಧಾರ ಗೊಂಡಿವೆ. ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಂಡ ಮೇಲೆ ನೀರಿನ ಬವಣೆ ತಪ್ಪಿದೆ. ಆದರೆ, ದರ್ಪ, ದಬ್ಬಾಳಿಕೆಯ ಆಡಳಿತ ಇವನ್ನೆಲ್ಲ ಗೌಣವಾಗಿಸಿದೆ. ಪಕ್ಷದ ಕಾರ್ಯಕರ್ತರಿಗೆ ರೇವಣ್ಣ ಸುಲಭಕ್ಕೆ ಸಿಗುವವರಾದರೂ, ಜನರು ಅರ್ಜಿ ಹಿಡಿದು ಹೋಗುವುದಾದರೆ, ಪಕ್ಷದ ಪ್ರಭಾವಿಗಳು ಜೊತೆಗಿದ್ದರೆ ಮಾತ್ರ ಭೇಟಿಯ ಭಾಗ್ಯ. ಆದರೆ, ಅವರ ಮಗ ಪ್ರಜ್ವಲ್ ರೇವಣ್ಣ ಕ್ಷೇತ್ರದಲ್ಲಿ ಕಾಣಸಿಗುವುದೂ ಅಪರೂಪ, ಅವರಿಂದ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿಯೂ ಅಷ್ಟಕ್ಕಷ್ಟೇ' ಎಂದರು ತರಕಾರಿ ಖರೀದಿಗೆ ಬಂದಿದ್ದ ನಿವೃತ್ತ ಉದ್ಯೋಗಿಯೊಬ್ಬರು.

ಹೀಗಿದ್ದರೂ, ಮತ್ತೆ ಅಧಿಕಾರ ಹಿಡಿಯುತ್ತಿರುವ ಗುಟ್ಟೇನು ಎಂದು ಪ್ರಶ್ನಿಸಿದಾಗ, ಎದುರಾಳಿ ಪಕ್ಷಗಳೇ ಇಲ್ಲದಿರುವುದು, ಚುನಾವಣೆ ವೇಳೆ ಮಾತ್ರ ಉಳಿದ ಪಕ್ಷಗಳು ಸಕ್ರಿಯ ರಾಜಕಾರಣಕ್ಕಿಳಿಯುವುದು, ಏಕ ಸ್ವಾಮ್ಯದ ಆಡಳಿತ ಮುನ್ನಡೆಯಲು ಸಾಧ್ಯವಾಗಿದೆ. ಅದಿಲ್ಲದಿದ್ದರೆ, ಹಾಲು ಸಂಘಗಳ ಮುಖ್ಯಸ್ಥರಿಗೆ 'ಮತ ಲೆಕ್ಕಾಚಾರ'ದ ಹೊಣೆ ವಹಿಸಿ, ಚುನಾವಣೆ ಸಂದರ್ಭದಲ್ಲೂ ಜನರ ನಡುವೆ ಕಾಣಿಸಿಕೊಳ್ಳದ ವ್ಯಕ್ತಿಗಳು ಹೇಗೆ ಆಯ್ಕೆಯಾಗಲು ಸಾಧ್ಯ ಎಂದು ಪ್ರಶ್ನಿಸಿ, ನಮಗ್ಯಾಕೆ ದೊಡ್ಡವರ ಉಸಾಬರಿ ಎಂದು ಹೊರಟೇಬಿಟ್ಟರು.

ಭೂ ಕಬಳಿಕೆ: 'ಹೊಳೆನರಸೀಪುರದ ಹಳ್ಳಿಗಳ ಹಲವಾರು ರೈತರು ದಾಖಲೆಯಲ್ಲಿ ಶ್ರೀಮಂತರು. ವಾಸ್ತವದಲ್ಲಿ ಅವರು ಕಾರ್ಮಿಕರು. ರೈತರ ಹೆಸರಿನಲ್ಲಿ ಬೇನಾಮಿ ಆಸ್ತಿಗಳು ಇವೆ. ಇವುಗಳ ದಾಖಲೆಗಳು, ಕ್ರಯಪತ್ರದ ಹಕ್ಕುಗಳು 'ಗೌಡ'ರ ಕುಟುಂಬದ ಮುಷ್ಟಿಯಲ್ಲಿವೆ. ಈ ಬಗ್ಗೆ ಧ್ವನಿ ಎತ್ತಿದವರನ್ನು 'ಭಟ'ರ ಪಡೆ ಹತ್ತಿಕ್ಕಿದ ಪ್ರಕರಣಗಳು ಇವೆ. ಆರಂಭದಲ್ಲಿ ಇಂತಹ ಪ್ರಕರಣಗಳು ನಮ್ಮ ಬಳಿ ಬಂದರೂ, ಬಲಾಢ್ಯರನ್ನು ಎದುರಿಸುವ ಶಕ್ತಿಯಿಲ್ಲದೆ ಹೊಂದಾಣಿಕೆಗೆ ಶರಣಾಗುತ್ತಾರೆ. ಈ ರೀತಿಯ ಸರ್ವಾಧಿಕಾರಿ ಮನಃಸ್ಥಿತಿಯೇ ಲೈಂಗಿಕ ದೌರ್ಜನ್ಯ, ರಾಜಕೀಯ ವಿಕೃತಿಗೆ ಎಡೆಮಾಡಿಕೊಟ್ಟಿದೆ' ಎನ್ನುತ್ತಾರೆ ವಕೀಲರೊಬ್ಬರು.

30ಕ್ಕೂ ಹೆಚ್ಚು ಕರೆಗಳು

ಹಾಸನದಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ರಚಿಸಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಸಹಾಯವಾಣಿಗೆ ಈವರೆಗೆ 30ಕ್ಕೂ ಹೆಚ್ಚು ಕರೆಗಳು ಬಂದಿವೆ. ಹಾಸನದ ಪ್ರಕರಣ ಹೊರತುಪಡಿಸಿ, ಬೇರೆ ರಾಜ್ಯಗಳಿಂದಲೂ ಕರೆಗಳು ಬಂದಿವೆ. ದೌರ್ಜನ್ಯಕ್ಕೆ ಒಳಗಾಗಿರುವ ಸಂತ್ರಸ್ತೆಯರು ಎಸ್‌ಐಟಿ ಸಂಪರ್ಕಿಸಿ ದೂರು ನೀಡಬಹುದು. ಅವರು ಹೇಳಿದ ಸ್ಥಳಕ್ಕೆ ಬಂದು ಮಾಹಿತಿ ಸಂಗ್ರಹಿಸಲು ತಂಡ ಸಿದ್ಧವಿದೆ. ಗುರುತು ಹಾಗೂ ಮಾಹಿತಿ ವಿಷಯದಲ್ಲಿ ಗೋಪ್ಯತೆ ಕಾಪಾಡಲಾಗುತ್ತದೆ. ನೇರವಾಗಿ ಅಧಿಕಾರಿಗಳನ್ನೂ ಸಂಪರ್ಕಿಸಬಹುದು ಎಂದು ಎಸ್‌ಐಟಿ ಅಧಿಕಾರಿಗಳು ತಿಳಿಸಿದ್ದಾರೆ.

ಸಹಾಯವಾಣಿ ಸಂಖ್ಯೆ: 6360938947

ಜಾತ್ಯತೀತ ಕವಚದಲ್ಲಿ ಜಾತಿ ವಾದ

'ಕಾರ್ಯಕ್ರಮವೊಂದಕ್ಕೆ ಶಾಸಕರನ್ನು ಅತಿಥಿಯಾಗಿ ಕರೆದಿದ್ದೆ. ಮುಖತಃ ಭೇಟಿಯಾಗಿ ಆಹ್ವಾನಿಸೋಣ ಎಂದು ಬೆಳಗಿನ ಹೊತ್ತಿನಲ್ಲಿ ಅವರ ಮನೆಗೆ ಹೋಗಿದ್ದೆ. ನನ್ನೆಡೆಗೆ ದೃಷ್ಟಿ ಬೀರಿದ ಅವರು ಕೈಯೆತ್ತಿ ಬಂದರು. ಕಾರ್ಯಕರ್ತರು, ಅಧಿಕಾರಿಗಳಿಂದ ತುಂಬಿದ್ದ ಸ್ಥಳದಲ್ಲಿ ಸಾರ್ವಜನಿಕ ಅವಮಾನ ಎದುರಿಸಿದ ಪರಿಶಿಷ್ಟ ನಾನು' ಎಂದು 12 ವರ್ಷಗಳ ಹಿಂದಿನ ದೃಷ್ಟಾಂತವನ್ನು ತೆರೆದಿಟ್ಟರು ಮಾದಿಗ ದಂಡೋರ ಸಂಘಟನೆ ಜಿಲ್ಲಾಧ್ಯಕ್ಷ ವಿಜಯ್ ಕುಮಾರ್. 'ಅಣ್ಣಾವ್ರು ಪ್ರತಿದಿನ ಬೆಳಿಗ್ಗೆ ಮೊದಲ ಬಾರಿಗೆ ಮನೆಯಿಂದ ಹೊರಬರುವಾಗ ಪರಿಶಿಷ್ಟರು ಕಣ್ಣಿಗೆ ಬೀಳುವಂತಿಲ್ಲ. ಇದು ಹೊಳೆನರಸೀಪುರದಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಅಘೋಷಿತ ಕಾನೂನು. ಜಾತ್ಯತೀತ ಎನ್ನುತ್ತಲೇ ಜಾತಿ ಮುಖವಾಡ ತೊಟ್ಟ ಪಾಳೆಗಾರಿಕೆ ಇಲ್ಲಿ ಜೀವಂತವಾಗಿದೆ' ಎನ್ನುತ್ತ ಹಲವಾರು ಸಂದರ್ಭಗಳಲ್ಲಿ ಪ್ರತಿರೋಧವೊಡ್ಡಿದ್ದನ್ನು ನೆನಪಿಸಿಕೊಂಡರು.

ತಾಂಡಾದಲ್ಲಿ 'ಅಕ್ಷರ ಕ್ರಾಂತಿ'

ಒಂದನೇ ಪುಟದಿಂದ

'ಗಂಗುನಾಯಕ ತಾಂಡಾದಿಂದ ಮಕ್ಕಳು ಆಟೊ ಹಾಗೂ ಇನ್ನಿತರ ವಾಹನಗಳಲ್ಲಿ ಶಾಲೆಗೆ ಹೋಗುತ್ತಾರೆ. ಬಸ್ ಸೌಕರ್ಯವಿಲ್ಲ. ನಾರಾಯಣಪುರ ಮುಖ್ಯ ಎಡದಂಡೆ ಕಾಲುವೆ (ಎನ್‌ಎಲ್‌ಬಿಸಿ) ವೈ ಜಂಕ್ಷನ್‌ಗೆ ಹೊಂದಿಕೊಂಡಿರುವ ಕಾಲುವೆಯ ರಸ್ತೆಯ ಮೇಲೆ ಜೀವ ಕೈಯಲ್ಲಿ ಹಿಡಿದುಕೊಂಡು ಮಕ್ಕಳು ಸಾಗಬೇಕು. ಸರಿಯಾದ ರಸ್ತೆ ಸೌಕರ್ಯವಿಲ್ಲದ ಕಾರಣ 5ನೇ ತರಗತಿ ಮುಗಿದ ತಕ್ಷಣ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ' ಎನ್ನುತ್ತಾರೆ ತಾಂಡಾದ ನಿವಾಸಿ ಅಜಯ ದೇಸಾಯಿ.

'ನಮ್ಮ ತಾಂಡಾದ 2–3 ಮಕ್ಕಳು ಪ್ರತಿ ವರ್ಷ ನವೋದಯ, ಸೈನಿಕ, ಮೊರಾರ್ಜಿ ವಸತಿ ಶಾಲೆಗೆ ಆಯ್ಕೆಯಾಗುತ್ತಾ ಬಂದಿದ್ದಾರೆ. ಕಳೆದ 10 ವರ್ಷಗಳಲ್ಲಿ 20ಕ್ಕೂ ಹೆಚ್ಚು ಮಕ್ಕಳು ಆಯ್ಕೆಯಾಗಿದ್ದಾರೆ. ನಮ್ಮ ತಾಂಡಾದಲ್ಲಿ ಉತ್ತಮ ವಾತಾವರಣವಿದೆ. ಉನ್ನತ ಶಿಕ್ಷಣ ಕೊಡಿಸುವುದು ನಮ್ಮ ಗುರಿಯಾಗಿದೆ. ನಾವು ಶಾಲೆ ಕಲಿಯದಿದ್ದರೂ ಚಿಂತೆ ಇಲ್ಲ, ನಮ್ಮ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ, ಜಮೀನುಗಳಲ್ಲಿ ಕೆಲಸ ಮಾಡಿ ಬಂದ ಕೂಲಿ ಹಣದಿಂದ ಅಭ್ಯಾಸ ಮಾಡಿಸುತ್ತಿದ್ದೇವೆ. ಮೀಸಲಾತಿ ನಮಗೆ ವರವಾಗಿ ಪರಿಣಮಿಸಿದೆ' ಎನ್ನುತ್ತಾರೆ ತಾಂಡಾದ ನಿವಾಸಿ ಚನ್ನಪ್ಪ ರಾಠೋಡ.

'ನಾವು ಇಷ್ಟೆಲ್ಲ ಓದಲಿಕ್ಕೆ ಮುಖ್ಯ ಕಾರಣ ಬಡತನ. ನಾನೊಬ್ಬನೇ ವೈದ್ಯನಾದರೆ ಸಾಲದು. ನನ್ನಂತೆ ತಾಂಡಾದಲ್ಲಿ ಉಳಿದವರೂ ವೈದ್ಯರಾಗಬೇಕು. ವಿದ್ಯಾರ್ಥಿಗಳು ಕಷ್ಟಪಟ್ಟು ಓದುತ್ತಿದ್ದಾರೆ. ಏನಾದರೂ ಸಾಧಿಸಬೇಕು ಎಂದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ' ಎಂದು ಡಾ.ರಾಜು ರಾಠೋಡ ಅಭಿಪ್ರಾಯಪಡುತ್ತಾರೆ.

ಮಕ್ಕಳು ಏನ್ ಓದ್ತಾರ ಗೊತ್ತಿಲ್ಲ: ಸುರೇಶ ರಾಠೋಡ ಅವರ ಮಕ್ಕಳು ವೈದ್ಯಕೀಯ ಅಭ್ಯಾಸ ಮಾಡುತ್ತಿದ್ದರೂ, ತಾಯಿ ಸೀತಾಬಾಯಿ ಅನಕ್ಷರಸ್ಥೆಯಾದ ಕಾರಣ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅವರಿಗೆ ಗೊತ್ತಿಲ್ಲ. 'ಮಕ್ಕಳು ಏನ್ ಓದ್ತಾರ ಗೊತ್ತಿಲ್ಲ' ಎನ್ನುತ್ತಲೇ ಮನೆ ಮುಂದೆ ಕಟ್ಟಿದ್ದ ಎಮ್ಮೆಯ ಸಗಣಿ ತೆಗೆಯಲು ಅವರು ಆರಂಭಿಸಿದರು.

'371(ಜೆ) ವರ'

'ಕಲ್ಯಾಣ ಕರ್ನಾಟಕದ ಜನರ ಮಕ್ಕಳ ಪಾಲಿಗೆ ಸಂವಿಧಾನದ ಕಲಂ 371(ಜೆ) ವಿಶೇಷ ಸ್ಥಾನಮಾನದ ಮೀಸಲಾತಿ ವರವಾಗಿದೆ. ವೈದ್ಯಕೀಯ ಕೋರ್ಸ್ ಆಯ್ಕೆಯಲ್ಲಿ ವಿಶೇಷ ಸ್ಥಾನಮಾನದಿಂದ ನಮ್ಮ ಮಕ್ಕಳು ಆಯ್ಕೆಯಾಗಿ ವೈದ್ಯರಾಗುತ್ತಿದ್ದಾರೆ ಎಂದು ಹೇಳಲು ಖುಷಿಯಾಗುತ್ತದೆ' ಎನ್ನುತ್ತಾರೆ ತಾಂಡಾದ ಮಕ್ಕಳ ಪಾಲಕರು.

'ಪ್ರಜ್ವಲ್ ಪಾಸ್‌ಪೋರ್ಟ್ ರದ್ದು: ಕೇಂದ್ರದ ಪ್ರತಿಕ್ರಿಯೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಅವರ ಪಾಸ್‌ಪೋರ್ಟ್ ರದ್ದು ಮಾಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರೂ ಈವರೆಗೆ ಸ್ಪಂದಿಸಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ ದೂರಿದರು.

ಈ ವಿಚಾರವಾಗಿ ಕೇಂದ್ರಕ್ಕೆ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ, ಎಸ್‌ಐಟಿಯೂ ಪತ್ರ ಬರೆದಿದೆ. ಆದರೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಕೇಂದ್ರ ಸರ್ಕಾರವು ಕಾನೂನಿನ ಚೌಕಟ್ಟಿನಲ್ಲಿ ಸಹಾಯ ಮಾಡಬೇಕು. ಬರೀ ಟೀಕೆ ಮಾಡಿದರೆ ಅರ್ಥವಿಲ್ಲ. ಪ್ರಜ್ವಲ್ ವಿರುದ್ಧ ವಾರಂಟ್ ಜಾರಿ ಮಾಡಿರುವುದನ್ನು ಕೇಂದ್ರದ ಗಮನಕ್ಕೆ ತರಲಾಗಿದೆ. ವಾರಂಟ್ ಜಾರಿಯಾದ ಬಳಿಕ ಪಾಸ್‌ಪೋರ್ಟ್ ರದ್ದುಗೊಳಿಸುವುದು ಕೇಂದ್ರ ಸರ್ಕಾರದ ಕರ್ತವ್ಯ ಎಂದರು.

'ಎಚ್‌.ಡಿ.ಕುಮಾರಸ್ವಾಮಿ ಪ್ರತಿಯೊಂದು ವಿಚಾರಕ್ಕೂ ಮಾತನಾಡುತ್ತಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ಎಸ್‌ಐಟಿ ಏನೆಲ್ಲ ಕೆಲಸ ಮಾಡಬೇಕೋ ಅದನ್ನು ಮಾಡುತ್ತಿದೆ. ಕುಮಾರಸ್ವಾಮಿ ಅವರು ತನಿಖೆ ಹೀಗೆ ನಡೆಯಬೇಕು, ಹಾಗೇ ಮಾಡಬೇಕು ಅಂತ ಹೇಳಿದ ಹಾಗೇ ಕಾಣುತ್ತಿದೆ' ಎಂದರು.

ರಾಜ್ಯದಲ್ಲಿ ಕೊಲೆಗಳ ಸಂಖ್ಯೆ ಹೆಚ್ಚಾಗಿದೆ ಎಂಬ ಬಿಜೆಪಿ ಆರೋಪದ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ ಎಂಬುದನ್ನು ನಾನು ಮತ್ತು ಮುಖ್ಯಮಂತ್ರಿಯವರು ಅಂಕಿ–ಅಂಶ ಪ್ರಕಟಿಸಿದ್ದೇವೆ. ಯಾರ ಕಾಲದಲ್ಲಿ ಕೊಲೆ ಪ್ರಕರಣಗಳು ಹೆಚ್ಚಾಗಿದ್ದವು ಎಂಬುದಕ್ಕೆ ಅಂಕಿ–ಅಂಶಗಳಿವೆ. ಅದಕ್ಕೆ ಬಿಜೆಪಿಯವರು ಮೊದಲು ಉತ್ತರ ನೀಡಲಿ ಎಂದರು.

ಹೊರಗುತ್ತಿಗೆ ನೇಮಕಾತಿಯಡಿ ಮೀಸಲಾತಿ ನೀಡುವ ವಿಷಯವನ್ನು ಪ್ರಸ್ತಾಪಿಸಿದ ಅವರು, 'ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕೆಂದು ಬಹಳ ಹಿಂದಿನಿಂದಲೂ ಒತ್ತಾಯಿಸಿದವರು ನಾವು. ಲಕ್ಷಾಂತರ ಹುದ್ದೆಗಳಿಗೆ ಯಾರಿಗೂ ಗೊತ್ತಿಲ್ಲದೇ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಮೀಸಲಾತಿ ನಿಯಮ ಪಾಲನೆ ಆಗುತ್ತಿಲ್ಲ' ಎಂದು ಹೇಳಿದರು.

ಚುಟುಕು

ಇವಿಎಂ ಕೊಠಡಿ ಬಳಿ ತಲುಪಿದ ವ್ಯಕ್ತಿ: ಆರೋಪ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಅಹಮದ್‌ನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮತಯಂತ್ರಗಳನ್ನು (ಇವಿಎಂ) ಇರಿಸಿದ್ದ ಕೊಠಡಿಯೊಳಗೆ ಪ್ರವೇಶಿಸಲು ವ್ಯಕ್ತಿಯೊಬ್ಬರು ಪ್ರಯತ್ನಿಸಿದ್ದಾರೆ ಎಂದು ಎನ್‌ಸಿಪಿ ಶರದ್ ಪವಾರ್ ಬಣದ ಅಭ್ಯರ್ಥಿ ನಿಲೇಶ್ ಲಂಕೆ ಬುಧವಾರ ಆರೋಪಿಸಿದರು.



ಇವಿಎಂ ಇರಿಸಿದ್ದ ಕೊಠಡಿಗೆ ಪ್ರವೇಶಿಸಲು ವ್ಯಕ್ತಿಯೊಬ್ಬರು ಯತ್ನಿಸುತ್ತಿರುವ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಯನ್ನು ನಿಲೇಶ್ ಅವರು 'ಎಕ್ಸ್' ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

'ಮೂರು ಹಂತದ ಭದ್ರತೆಯನ್ನು ಭೇದಿಸಿ, ಕೊಠಡಿಯ ಬಳಿಗೆ ತಲುಪಿದ ವ್ಯಕ್ತಿಯು ಸಿ.ಸಿ.ಟಿ.ವಿ. ಕ್ಯಾಮೆರಾಗೆ ಹಾನಿಯೆಸಗಲು ಯತ್ನಿಸಿದ್ದು, ಕೂಡಲೇ ಕಾರ್ಯಕರ್ತರು ಮಧ್ಯಪ್ರವೇಶಿಸಿ ಆತನನ್ನು ಹಿಡಿದಿದ್ದಾರೆ' ಎಂದು ಅವರು ವಿವರಿಸಿದ್ದಾರೆ.

'ವ್ಯಕ್ತಿಯು ಕೊಠಡಿಯ ಸಮೀಪ ತಲುಪಿದಾಗ ಭದ್ರತಾ ಸಿಬ್ಬಂದಿ ಏನು ಮಾಡುತ್ತಿದ್ದರು' ಎಂದೂ ಅವರು ಪ್ರಶ್ನಿಸಿದ್ದಾರೆ. ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ಸುಜಯ್ ವಿಖೆ ಪಾಟೀಲ್ ಸ್ಪರ್ಧಿಸಿದ್ದಾರೆ.

'ರೈತರನ್ನು ನಿರ್ಲಕ್ಷಿಸಿದ ಬಿಜೆಪಿ'

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿ ಒಂದು ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿದ್ದ ಸಕ್ಕರೆ ಉದ್ಯಮವನ್ನು ಬಿಜೆಪಿ ನಿರ್ಲಕ್ಷಿಸಿತು ಮತ್ತು ಕಬ್ಬಿನ ಬೆಲೆ ಹೆಚ್ಚಳ ಮಾಡಬೇಕೆನ್ನುವ ರೈತರ ಬೇಡಿಕೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ ಎಂದು ಕಾಂಗ್ರೆಸ್ ಬುಧವಾರ ಆರೋಪಿಸಿದೆ.



ಉತ್ತರ ಪ್ರದೇಶದ ಶ್ರಾವಸ್ತಿ ಮತ್ತು ಬಸ್ತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ನಡೆಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದೆ.

'ಶ್ರಾವಸ್ತಿಯಲ್ಲಿ ಉತ್ತರ ಪ್ರದೇಶದಲ್ಲಿಯೇ ಅತಿ ಹೆಚ್ಚು ಶಿಶು ಮರಣ ಪ್ರಮಾಣ ದಾಖಲಾಗುತ್ತಿರುವುದು ಏಕೆ? ಬಸ್ತಿಯ 189 ಪ್ರಾಥಮಿಕ ಶಾಲೆಗಳನ್ನು ಬಳಕೆಗೆ ಅನರ್ಹ ಎಂದು ಘೋಷಿಸಿರುವುದು ಏಕೆ? ಬಸ್ತಿಯ ಸಕ್ಕರೆ ಮಿಲ್‌ಗಳನ್ನು ಮತ್ತು ಕಬ್ಬು ಬೆಳೆಗಾರರನ್ನು ಬಿಜೆಪಿ ನಿರ್ಲಕ್ಷಿಸಿದ್ದು ಏಕೆ?' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಶ್ರಾವಸ್ತಿಯು ಭಾರತದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿದ್ದು, ಇಲ್ಲಿನ ಬಿಕ್ಕಟ್ಟನ್ನು ಎದುರಿಸಲು ಬಿಜೆಪಿಯ ಯೋಜನೆ ಏನು' ಎಂದು ಪ್ರಶ್ನಿಸಿದ್ದಾರೆ.

'ಪಾಕ್‌ನಿಂದ ಹವಾಲಾ ಹಣ ತಂದವರಿಗೆ ಬಿಜೆಪಿ ಬೆಂಬಲ'

ಪೂಂಛ್/ಜಮ್ಮು (ಪಿಟಿಐ): ಅಪ್ನಿ ಪಕ್ಷದ ಅಧ್ಯಕ್ಷ ಅಲ್ತಾಫ್ ಬುಖಾರಿ ವಿರುದ್ಧ ಬುಧವಾರ ಪರೋಕ್ಷವಾಗಿ ವಾಗ್ದಾಳಿ ನಡೆಸಿದ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ, 'ಕಾಶ್ಮೀರದಲ್ಲಿ ಉಗ್ರರಿಗೆ ಹಣಕಾಸಿನ ನೆರವು ನೀಡಲು ಪಾಕಿಸ್ತಾನದಿಂದ ಹವಾಲ ಹಣ ತಂದಿದ್ದ ಪಕ್ಷಕ್ಕೆ ಬಿಜೆಪಿ ಬೆಂಬಲ ನೀಡುತ್ತಿದೆ' ಎಂದು ಆರೋಪಿಸಿದರು.



ಮೆಹಬೂಬಾ ಮುಫ್ತಿ

ಬುಖಾರಿ ಅವರನ್ನು 2019ರಲ್ಲಿ ಪಿಡಿಪಿಯಿಂದ ಉಚ್ಚಾಟಿಸಲಾಗಿತ್ತು. ಅವರ ಅಪ್ನಿ ಪಕ್ಷವು ಅನಂತನಾಗ್-ರಜೌರಿ ಲೋಕಸಭಾ ಕ್ಷೇತ್ರದಿಂದ ಮೆಹಬೂಬಾ ಹಾಗೂ ನ್ಯಾನಲ್ ಕಾನ್ಫರೆನ್ಸ್ ಮುಖಂಡ ಮಿಯಾನ್ ಅಲ್ತಾಫ್ ಅವರ ವಿರುದ್ಧ ಜಾಫರ್ ಇಕ್ಬಾಲ್ ಖಾನ್ ಮನ್ಹಾಸ್ ಅವರನ್ನು ಕಣಕ್ಕಿಳಿಸಿದೆ. ಈ ಕ್ಷೇತ್ರಕ್ಕೆ ಮೇ 25ರಂದು ಮತದಾನ ನಡೆಯಲಿದೆ.

'ಪಹಲ್ಗಾಂನಲ್ಲಿ ಪ್ರವಾಸಿಗರ ಮೇಲೆ ಈಚೆಗೆ ನಡೆದ ದಾಳಿಯ ಬಗ್ಗೆ ತನಿಖೆ ನಡೆಸಬೇಕು. ಭಯೋತ್ಪಾದಕರಿಗೆ ನೆರವಾಗಲು ಪಾಕಿಸ್ತಾನದಿಂದ ಹವಾಲ ಹಣ ತಂದಿರುವ ಪ್ರಕರಣದಲ್ಲಿ ಪಕ್ಷವೊಂದರ ಪಾತ್ರದ ಬಗ್ಗೆಯೂ ತನಿಖೆ ನಡೆಸಬೇಕು' ಎಂದು ಮೆಹಬೂಬಾ ಆಗ್ರಹಿಸಿದರು.

'ನಾನು ಯಾರ ಹೆಸರನ್ನೂ ಉಲ್ಲೇಖಿಸುವುದಿಲ್ಲ. ಅದನ್ನು ನೀವು ಪತ್ತೆ ಹಚ್ಚಿಕೊಳ್ಳಿ' ಎಂದೂ ಹೇಳಿದ್ದಾರೆ.

'ತಾವು ರಾಷ್ಟ್ರೀಯವಾದಿಗಳು ಎನ್ನುತ್ತಿರುವ ಬಿಜೆಪಿಯವರು, ಹವಾಲ ಹಣ ತಂದಿರುವ ಪಕ್ಷಕ್ಕೆ ಬೆಂಬಲ ಘೋಷಿಸಿರುವುದು ಅಚ್ಚರಿಯುಂಟುಮಾಡಿದೆ' ಎಂದರು.

'ದೇಶದಾದ್ಯಂತ ಬದಲಾವಣೆಯ ಅಲೆ'

ಅಹಮದಾಬಾದ್ (ಪಿಟಿಐ): ದೇಶದಾದ್ಯಂತ ಬದಲಾವಣೆಯ ಅಲೆ ಎದ್ದಿದ್ದು, ಗುಜರಾತ್‌ನಲ್ಲಿ ಪಕ್ಷವು 10ಕ್ಕಿಂತಲೂ ಹೆಚ್ಚು ಲೋಕಸಭಾ ಕ್ಷೇತ್ರಗಳಲ್ಲಿ ಗೆಲ್ಲಲಿದೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ಮುಕುಲ್ ವಾಸ್ನಿಕ್ ಬುಧವಾರ ವಿಶ್ವಾಸ ವ್ಯಕ್ತಪಡಿಸಿದರು.



ಕೇಂದ್ರ ಸರ್ಕಾರದ ವಿರುದ್ಧ ಜನರು ರೋಷಗೊಂಡಿದ್ದಾರೆ ಎಂದಿರುವ ಅವರು, ಗುಜರಾತ್‌ನ ಜನರು ಕಾಂಗ್ರೆಸ್ ಅನ್ನು ಬೆಂಬಲಿಸಲಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಗುಜರಾತ್‌ನ 26 ಲೋಕಸಭಾ ಕ್ಷೇತ್ರಗಳ ಪೈಕಿ 25 ಕ್ಷೇತ್ರಗಳಿಗೆ ಮೇ 7ರಂದು ಮತದಾನ ನಡೆದಿತ್ತು. ಸೂರತ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಕಾಂಗ್ರೆಸ್ 23 ಕ್ಷೇತ್ರಗಳಲ್ಲಿ ಹಾಗೂ ಎಎಪಿ ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿವೆ.

ಕಂಗನಾ ರ‍್ಯಾಲಿಗೆ ತಡೆ: ಎಫ್‌ಐಆರ್

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಕಂಗನಾ ರನೌತ್ ಅವರ ಚುನಾವಣಾ ರ‍್ಯಾಲಿಗೆ ಲಾಹೌಲ್ ಮತ್ತು ಸ್ಪಿತಿಯಲ್ಲಿ ತಡೆಯೊಡ್ಡಿರುವ ಆರೋಪದ ಮೇಲೆ ಅಪರಿಚಿತರ ವಿರುದ್ಧ ಬುಧವಾರ ಎಫ್‌ಐಆರ್ ದಾಖಲಾಗಿದೆ.




ಈ ಸಂಬಂಧ ಯುವ ಕಾಂಗ್ರೆಸ್ ಪದಾಧಿಕಾರಿಗಳ ವಿರುದ್ಧ ಚುನಾವಣಾಧಿಕಾರಿ ನೋಟಿಸ್ ಜಾರಿ ಮಾಡಿದ್ದಾರೆ. ಕಂಗನಾ ಅವರ ರ‍್ಯಾಲಿಯನ್ನು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸ್ಥಳೀಯರು ತಡೆದು ಕಪ್ಪು ಬಾವುಟ ಪ್ರದರ್ಶಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಕಾಂಗ್ರೆಸ್ ಕಾರ್ಯಕರ್ತರು ರ‍್ಯಾಲಿ ಮೇಲೆ ಕಲ್ಲು ತೂರಾಟ ನಡೆಸಿದ್ದು, ಈ ಕುರಿತು ತನಿಖೆ ನಡೆಸಬೇಕು ಎಂದೂ ಆಗ್ರಹಿಸಿದ್ದಾರೆ.

ಎಂಥಾ ಮಾತು!



ಜೂನ್ 4ರಂದು ಹೊಸ ಸಿನಿಮಾ ಬಿಡುಗಡೆಯಾಗಲಿದೆ. ಅದನ್ನು ದೇಶದ ಜನರು ಹೆಚ್ಚಿನ ಉತ್ಸಾಹದಿಂದ ವೀಕ್ಷಿಸಲಿದ್ದಾರೆ. ಪ್ರತಿ ಹಂತದ ಮತದಾನದಲ್ಲೂ 'ಇಂಡಿಯಾ' ಒಕ್ಕೂಟವು ಮುನ್ನಡೆ ಸಾಧಿಸಿದೆ. ಐದು ಹಂತಗಳ ಮತದಾನವು, ಬಿಜೆಪಿ ಸರ್ಕಾರ ಹೊರನಡೆಯುವ ಸೂಚನೆ ನೀಡಿದೆ. ಆರನೇ ಹಂತವು ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಲಿದೆ. 'ಇಂಡಿಯಾ' ಒಕ್ಕೂಟವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ, ಸಮಾಜವಾದಿ ಪಕ್ಷವು ಉತ್ತರ ಪ್ರದೇಶದಲ್ಲಿ ಜಾತಿ ಗಣತಿ ನಡೆಸಲಿದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಅಧ್ಯಕ್ಷ



ಪಾಕಿಸ್ತಾನವನ್ನು ಪ್ರಶಂಸಿಸುವವರು ಜೂನ್ 4ರಂದು ಆ ದೇಶಕ್ಕೆ ತೆರಳಲು ಬ್ಯಾಗ್‌ಗಳನ್ನು ಸಿದ್ಧಪಡಿಸಿಕೊಳ್ಳಿ. ಪಾಕಿಸ್ತಾನ ಅಣುಬಾಂಬ್ ಹೊಂದಿರುವುದರಿಂದ ಅದನ್ನು ಕೆರಳಿಸಬೇಡಿ ಎಂದು ಅವರು ಹೇಳುತ್ತಿದ್ದಾರೆ. ಸಂಕಷ್ಟದಲ್ಲಿರುವ ಆ ದೇಶವು ದೊಡ್ಡ ಆರ್ಥಿಕ ಶಕ್ತಿಯಾಗಿರುವ ಭಾರತಕ್ಕೆ ಬೆದರಿಕೆಯೊಡ್ಡಬಹುದೇ? ರಾಮದ್ರೋಹಿಗಳು ಜಾತಿ ಮತ್ತು ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಬಡವರ ಕಲ್ಯಾಣವಾಗಿದೆ. ಭಾರತವು 80 ಕೋಟಿ ಜನರಿಗೆ ಉಚಿತ ಪಡಿತರ ನೀಡುತ್ತಿದೆ. ಪಾಕಿಸ್ತಾನದ 23 ಕೋಟಿ ಜನರು ಹಸಿವಿನಿಂದ ಬಳಲುತ್ತಿದ್ದಾರೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರ • ಮೋದಿ ಮಾಡಿದ ಕೆಲಸವನ್ನು ಕಾಂಗ್ರೆಸ್ ರದ್ದುಪಡಿಸಲಿದೆ: ಪ್ರಧಾನಿ

'ಇಂಡಿಯಾ' ಕೂಟ ಕ್ಯಾನ್ಸರ್‌ಗಿಂತ ಕೆಟ್ಟದ್ದು'

ಶ್ರಾವಸ್ತಿ/ಬಸ್ತಿ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷ (ಎಸ್‌ಪಿ) ಅಧಿಕಾರಕ್ಕೆ ಬಂದರೆ, ಮೋದಿ ಮಾಡಿದ ಕೆಲಸಗಳನ್ನು ರದ್ದು ಮಾಡಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು. ಇಂಡಿಯಾ ಕೂಟವು ದೇಶಕ್ಕೆ ಕ್ಯಾನ್ಸರ್‌ಗಿಂತ ಕೆಟ್ಟದ್ದು ಎಂದು ಪ್ರತಿಪಾದಿಸಿದರು.

'ಕಾಂಗ್ರೆಸ್ 60 ವರ್ಷದಲ್ಲಿ ಮಾಡಿದ ಸಾಧನೆ ಎಂದರೆ, ಸಮಾಜವನ್ನು ಒಡೆದಿದ್ದು ಮತ್ತು ವೋಟ್ ಜಿಹಾದ್ ಮಾಡಿದ್ದು' ಎಂದು ಟೀಕಿಸಿದರು.

'ಕಳೆದ ಹತ್ತು ವರ್ಷದಲ್ಲಿ ಮೋದಿ 4 ಕೋಟಿ ಜನರಿಗೆ ಶಾಶ್ವತ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಈಗ ಎಸ್‌ಪಿ ಮತ್ತು ಕಾಂಗ್ರೆಸ್ ಎಲ್ಲವನ್ನೂ ಬದಲಿಸಲು ನಿರ್ಧರಿಸಿವೆ. ಆ ಪಕ್ಷಗಳವರು ನಾಲ್ಕು ಕೋಟಿ ಮನೆಗಳ ಬೀಗದ ಕೈಗಳನ್ನು ನಿಮ್ಮಿಂದ ಕಸಿದುಕೊಂಡು, ಮನೆಗಳನ್ನು ವಶಕ್ಕೆ ಪಡೆಯಲಿದ್ದಾರೆ ಮತ್ತು ಅವನ್ನು ತಮ್ಮ ಮತ ಬ್ಯಾಂಕ್‌ಗೆ ನೀಡಲಿದ್ದಾರೆ' ಎಂದು ಹೇಳಿದರು.

'ಅದಷ್ಟೇ ಅಲ್ಲ, ಮೋದಿ 50 ಕೋಟಿಗೂ ಹೆಚ್ಚಿನ ಮಂದಿಗೆ ಜನ್‌ಧನ್ ಖಾತೆಗಳನ್ನು ಆರಂಭಿಸಿದರು. ಅವರು ('ಇಂಡಿಯಾ' ಕೂಟ) ನಿಮ್ಮ ಬ್ಯಾಂಕ್ ಖಾತೆಗಳನ್ನು ರದ್ದು ಮಾಡುತ್ತಾರೆ, ಅದರಲ್ಲಿನ ಹಣವನ್ನು ತೆಗೆದುಕೊಳ್ಳುತ್ತಾರೆ. ಮೋದಿ ಪ್ರತಿ ಹಳ್ಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿದರು. ಅವರು ನಿಮ್ಮ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಅದನ್ನು ಮತ್ತೆ ಕತ್ತಲುಗೊಳಿಸುತ್ತಾರೆ' ಎಂದು ಆರೋಪಿಸಿದರು.

'ನಾನು ಪ್ರತಿ ಮನೆಗೂ ನೀರು ಪೂರೈಸುತ್ತಿದ್ದೇನೆ. ಎಸ್‌ಪಿ ಮತ್ತು ಕಾಂಗ್ರೆಸ್ ಮಂದಿ ನಿಮ್ಮ ಮನೆಯ ನಲ್ಲಿಯನ್ನು ಕಿತ್ತೊಯ್ಯುತ್ತಾರೆ. ಅವರು ಅದರಲ್ಲಿ ಪ್ರವೀಣರು' ಎಂದು ಟೀಕಿಸಿದರು.



ಉತ್ತರ ಪ್ರದೇಶದ ಬಸ್ತಿಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬೆಂಬಲಿಗರತ್ತ ಕೈ ಬೀಸಿದರು– ಪಿಟಿಐ ಚಿತ್ರ

'ಕಾಂಗ್ರೆಸ್ ದಲಿತರು ಮತ್ತು ಹಿಂದುಳಿದವರ ಮೀಸಲಾತಿ ಕಸಿದುಕೊಂಡು, ಅದನ್ನು ತಮ್ಮ ಮತ ಬ್ಯಾಂಕ್‌ಗೆ ನೀಡಲಿದೆ' ಎಂದು ಮೋದಿ ಪುನರುಚ್ಚರಿಸಿದರು.

'60 ವರ್ಷ ಅವರು ಏನೂ ಮಾಡಲಿಲ್ಲ. ಮೋದಿ ಮತ್ತು ಅವರ ಕೆಲಸವನ್ನು ತಡೆಯಲು ಎಲ್ಲರೂ ಒಟ್ಟಾಗಿದ್ದಾರೆ' ಎಂದು ಹೇಳಿದರು.

> **ಹಿಂದೆ ಎಸ್‌ಪಿ ಆಡಳಿತದಲ್ಲಿ ಡಿಜಿಪಿಯಂತಹ ಹಿರಿಯ ಅಧಿಕಾರಿಗಳ ಆಯ್ಕೆಗೆ 'ಬೆಲೆ ಪಟ್ಟಿ' ನಿಗದಿ ಮಾಡಲಾಗಿತ್ತು. ಕೆಲಸ ಮಾಡುವುದಕ್ಕೂ ಮುಂಚೆಯೇ ಹಣ ಬಿಡುಗಡೆಯಾಗುತ್ತಿತ್ತು**
>
> **ನರೇಂದ್ರ ಮೋದಿ,** ಪ್ರಧಾನಿ

'56 ಇಂಚು ಎಂದರೆ ಏನು ಎಂದು ಗೊತ್ತಿಲ್ಲವೇ?'

ಬಸ್ತಿ (ಪಿಟಿಐ): 'ಕಾಂಗ್ರೆಸ್ ಹಾಗೂ ಎಸ್‌ಪಿ ಮುಖಂಡರು ಪಾಕಿಸ್ತಾನದ ಪರ ಸಹಾನುಭೂತಿ ಉಳ್ಳವರು. ಅವರು ಅಣ್ವಸ್ತ್ರದ ಹೆಸರಿನಲ್ಲಿ ಜನರನ್ನು ಹೆದರಿಸುತ್ತಿದ್ದಾರೆ' ಎಂದು ಪ್ರಧಾನಿ ಮೋದಿ ಆರೋಪಿಸಿದರು.

ಉತ್ತರ ಪ್ರದೇಶದ ಬಸ್ತಿಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಒಂದು ಕಾಲದಲ್ಲಿ ಭಯೋತ್ಪಾದನೆಯನ್ನು ಪೋಷಿಸುತ್ತಿದ್ದವರು ಈಗ ಆಹಾರ ಧಾನ್ಯಗಳಿಗಾಗಿ ಪರದಾಡುತ್ತಿದ್ದಾರೆ. ಪಾಕಿಸ್ತಾನ ಮುಗಿದುಹೋಗಿದೆ. ಆದರೆ, ಅದರ ಬಗ್ಗೆ ಸಹಾನುಭೂತಿ ಹೊಂದಿರುವ ಎಸ್‌ಪಿ ಮತ್ತು ಕಾಂಗ್ರೆಸ್ ಜನರನ್ನು ಹೆದರಿಸುತ್ತಿವೆ' ಎಂದು ಆರೋಪಿಸಿದರು.

'ಪಾಕಿಸ್ತಾನದ ಬಳಿ ಅಣ್ವಸ್ತ್ರ ಇರುವುದರಿಂದ ಅದಕ್ಕೆ ಭಯಪಡಬೇಕು ಎಂದು ಅವರು ಹೇಳುತ್ತಾರೆ. '56 ಇಂಚು (ಎದೆ)' ಎಂದರೆ ಏನು ಎಂದು ಅವರಿಗೆ ಗೊತ್ತಿಲ್ಲವೇ? ಇದು ಕಾಂಗ್ರೆಸ್‌ನ ದುರ್ಬಲ ಸರ್ಕಾರ ಅಲ್ಲ, ಮೋದಿಯ ಬಲಿಷ್ಠ ಸರ್ಕಾರ' ಎಂದು ಪ್ರತಿಪಾದಿಸಿದರು.

'ಅವರು ಸನಾತನ ಧರ್ಮವನ್ನು ನಾಶಪಡಿಸುವ ಬಗ್ಗೆ ಮಾತನಾಡುತ್ತಾರೆ. ಕಾಂಗ್ರೆಸ್‌ನ ಶಹಜಾದ ರಾಮ ಮಂದಿರದ ಬಗೆಗಿನ ಸುಪ್ರೀಂ ಕೋರ್ಟ್ ತೀರ್ಪನ್ನು ಬದಲಿಸಲು ಹೊರಟಿದ್ದಾರೆ. ರಾಮ ಮಂದಿರಕ್ಕೆ ಬಾಬ್ರಿ ಬೀಗ ಹಾಕಲು ಹಾಗೂ ರಾಮ ಲಲ್ಲಾನನ್ನು ಮತ್ತೆ ಟೆಂಟ್‌ಗೆ ಕಳಿಸುವ ಬಗ್ಗೆ ಅವರು ಕನಸು ಕಾಣುತ್ತಿದ್ದಾರೆ' ಎಂದು ಆರೋಪಿಸಿದರು.

'ಮುಸ್ಲಿಮರಿಗೆ ಮೀಸಲಾತಿ ನೀಡಲು ಕಾಂಗ್ರೆಸ್ ಸಂವಿಧಾನವನ್ನು ಬದಲಿಸಲು ಹೊರಟಿದೆ. ದಲಿತ ವಿರೋಧಿ, ಹಿಂದುಳಿದ ವಿರೋಧಿ ಪಿತೂರಿಯಲ್ಲಿ ಕಾಂಗ್ರೆಸ್ ಜತೆ ಸಮಾಜವಾದಿ ಪಕ್ಷ ಕೈ ಜೋಡಿಸಿದೆ' ಎಂದರು.


'ಹಣ ಪಡೆಯಲು ವೇದಿಕೆಯತ್ತ ನುಗ್ಗಿದ ಜನ'

ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ 'ಇಂಡಿಯಾ' ಕೂಟದ ರ‍್ಯಾಲಿಯ ವೇಳೆ ಅಪಾರ ಸಂಖ್ಯೆಯ ಜನ ಸೇರಿದ್ದರಿಂದ ರಾಹುಲ್ ಗಾಂಧಿ ಮತ್ತು ಅಖಿಲೇಶ್ ಯಾದವ್ ಅವರ ಕಾರ್ಯಕ್ರಮಕ್ಕೆ ಅಡಚಣೆ ಉಂಟಾಗಿತ್ತು. ಜನ ವೇದಿಕೆ ಸನಿಹಕ್ಕೆ ನುಗ್ಗಲು ಯತ್ನಿಸಿದ್ದರು. ಅದರ ಬಗ್ಗೆ ಪ್ರಧಾನಿ ಮೋದಿ ಲೇವಡಿ ಮಾಡಿದರು.

'ಎಸ್‌ಪಿ ಮತ್ತು ಕಾಂಗ್ರೆಸ್ ಮುಖಂಡರು ತಮ್ಮ ರ‍್ಯಾಲಿಗಳಿಗೆ ಜನರನ್ನು ಕರೆತರಲು ಗುತ್ತಿಗೆ ನೀಡುತ್ತಾರೆ. ಜನ ಅವರ ಹಣ ಪಡೆಯಲು ವೇದಿಕೆಯತ್ತ ನುಗ್ಗಲು ಯತ್ನಿಸಿದರು' ಎಂದು ಆರೋಪಿಸಿದರು.

ಮತದಾನ ಪ್ರಮಾಣ ವ್ಯತ್ಯಾಸ ಕಾಂಗ್ರೆಸ್ ಕಳವಳ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಮತದಾನ ಪ್ರಮಾಣದ ಬಗ್ಗೆ ಚುನಾವಣಾ ಆಯೋಗವು ಮೊದಲು ಬಿಡುಗಡೆ ಮಾಡಿದ ಅಂಕಿಅಂಶಗಳಿಗೂ ಅಂತಿಮವಾಗಿ ಬಿಡುಗಡೆ ಮಾಡಿದ ಅಂಕಿಅಂಶಗಳಿಗೂ ದೊಡ್ಡ ಮಟ್ಟದ ವ್ಯತ್ಯಾಸಗಳಿವೆ. ನಾಲ್ಕು ಹಂತದ ಮತದಾನದ ಸುತ್ತಲಿನ 'ವಿಚಿತ್ರ ಬೆಳವಣಿಗೆಗಳ' ಬಗ್ಗೆ ಮತದಾರರು ಕಳವಳಗೊಂಡಿದ್ದಾರೆ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.



ಪವನ್ ಖೇರಾ

'ಎರಡೂ ಅಂಕಿಅಂಶಗಳ ನಡುವಿನ ಮತ ವ್ಯತ್ಯಾಸವು 1.7 ಕೋಟಿ ಆಗಿದ್ದು, ಹಿಂದೆಂದೂ ಈ ರೀತಿ ಆಗಿರಲಿಲ್ಲ' ಎಂದು ಕಾಂಗ್ರೆಸ್ ಮುಖಂಡ ಹಾಗೂ ಪಕ್ಷದ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅಭಿಪ್ರಾಯಪಟ್ಟಿದ್ದಾರೆ.

'ಮತದಾನ ಪ್ರಮಾಣದ ಅಂತಿಮ ವಿವರ ಪ್ರಕಟಿಸಲು ಚುನಾವಣಾ ಆಯೋಗವು 10–11 ದಿನ ತೆಗೆದುಕೊಂಡಿತು' ಎಂದಿರುವ ಅವರು, 'ಇವಿಎಂಗಳು ಕಣ್ಮರೆಯಾಗಿರುವುದರ ಬಗೆಗಿನ ಉತ್ತರವಿಲ್ಲದ ಪ್ರಶ್ನೆಗಳು ಕೂಡ ಕಳವಳ ಉಂಟುಮಾಡಿವೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಕೂಡ ಈ ಬಗ್ಗೆ ಪ್ರತಿಕ್ರಿಯಿಸಿದ್ದು, 'ಮತದಾನ ಪ್ರಮಾಣದ ಒಟ್ಟಾರೆ ವ್ಯತ್ಯಾಸವಾದ 1.7 ಕೋಟಿಯನ್ನು ಲೋಕಸಭಾ ಕ್ಷೇತ್ರವಾರು ತೆಗೆದುಕೊಂಡರೆ, 28 ಸಾವಿರ ಹೆಚ್ಚಳ ಎಂದಾಗುತ್ತದೆ. ಇದು ಬೃಹತ್ ವ್ಯತ್ಯಾಸ' ಎಂದಿದ್ದಾರೆ.

'ಬಿಜೆಪಿಯು ಹೆಚ್ಚು ಸ್ಥಾನಗಳನ್ನು ಸೋಲುವ ಸಂಭವ ಇರುವ ರಾಜ್ಯಗಳಲ್ಲಿ ಅಂಕಿಅಂಶದ ವ್ಯತ್ಯಾಸ ಹೆಚ್ಚಾಗಿದೆ. ಏನು ನಡೆಯುತ್ತಿದೆ' ಎಂದು ಪ್ರಶ್ನಿಸಿದ್ದಾರೆ. ಮತದಾನದ ಅಂತಿಮ ವಿವರ ಬಿಡುಗಡೆಯಲ್ಲಿನ ವಿಳಂಬದ ಬಗ್ಗೆ ಇತರೆ ವಿರೋಧ ಪಕ್ಷಗಳೂ ಪ್ರಶ್ನೆಗಳನ್ನು ಎತ್ತಿವೆ.

'ಇಂಡಿಯಾ ಬಂದರೆ ಬಂಧಮುಕ್ತ'


ನವದೆಹಲಿ (ಪಿಟಿಐ): 'ಪ್ರಸ್ತುತ ನ್ಯಾಯಾಂಗದ ಮೇಲೆ 'ಅತ್ಯಧಿಕ ಒತ್ತಡ' ಇದೆ. ಆದರೆ, ಒಂದೊಮ್ಮೆ 'ಇಂಡಿಯಾ' ಮೈತ್ರಿಕೂಟದ ಸರ್ಕಾರವು ಕೇಂದ್ರದಲ್ಲಿ ರಚನೆಯಾದರೆ, ನ್ಯಾಯಾಂಗದ ಮೇಲಿನ ಒತ್ತಡವನ್ನು ನಿವಾರಿಸಿ ಸ್ವತಂತ್ರಗೊಳಿಸಲಾಗುವುದು. ಹೀಗಾದರೆ, ಜೂನ್ 5ರ ಬಳಿಕ ನಾನೂ ಜೈಲಿನಿಂದ ಬಿಡುಗಡೆಯಾಗುತ್ತೇನೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬುಧವಾರ ಹೇಳಿದರು.

ಪಿಟಿಐ ಸಂದರ್ಶನದಲ್ಲಿ ಕೇಜ್ರಿವಾಲ್ ಈ ಕುರಿತು ಮಾತನಾಡಿದರು. ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಆರೋಪಿಯಾಗಿರುವ ಅವರು, ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಬಿಡುಗಡೆ ಬಳಿಕ ಕೇಜ್ರಿವಾಲ್ ಅವರು ಪಾಲ್ಗೊಂಡ ಎಲ್ಲ ಚುನಾವಣಾ ರ‍್ಯಾಲಿಗಳಲ್ಲಿಯೂ 'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ತಾವು ಬಿಡುಗಡೆಗೊಳ್ಳುವ ಬಗ್ಗೆ ಹೇಳುತ್ತಲೇ ಬಂದಿದ್ದಾರೆ.

'ಇಂಡಿಯಾ ಮೈತ್ರಿಕೂಟವು ಅಧಿಕಾರಕ್ಕೇರಿದರೆ ನೀವು ಬಿಡುಗಡೆಯಾಗುವುದಾದರೆ, ಅದು ಕೂಡ ನ್ಯಾಯಾಂಗದ ಮೇಲೆ ಒತ್ತಡ ಹೇರಿದಂತೆಯೇ ಆಗುವುದಿಲ್ಲವೆ' ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಹೊತ್ತಿನಲ್ಲಿ ಎಷ್ಟೊಂದು ಒತ್ತಡದಲ್ಲಿ ನ್ಯಾಯಾಂಗವು ಕೆಲಸ ಮಾಡುತ್ತಿದೆ ಎಂದು ಎಲ್ಲರಿಗೂ ತಿಳಿದಿದೆ. ಮೈತ್ರಿಕೂಟವು ಅಧಿಕಾರಕ್ಕೆ ಬಂದರೆ, ಈ ಒತ್ತಡವನ್ನು ಇಲ್ಲವಾಗಿಸಲಿದೆ. ಆ ಮೂಲಕ ನ್ಯಾಯಾಂಗವು ಎಲ್ಲರನ್ನು ಸಮಾನವಾಗಿ ನೋಡುವ ರೀತಿ ಕೆಲಸ ನಿರ್ವಹಿಸಲಿದೆ' ಎಂದು ಉತ್ತರಿಸಿದರು.

'ನನ್ನ ಮೇಲಿರುವ ಎಲ್ಲವೂ ಸುಳ್ಳಿನ ಪ್ರಕರಣಗಳು. ಎಲ್ಲಿಯೂ ಹಣದ ಅಕ್ರಮ ನಡೆದಿಲ್ಲ. ಒಂದು ರೂಪಾಯಿ ಅಕ್ರಮ ನಡೆದದ್ದು ಪತ್ತೆಯಾಗಿಲ್ಲ. ಭ್ರಷ್ಟಾಚಾರ ನಡೆದಿದ್ದೇ ಹೌದಾದರೆ, ಆ ಹಣವು ಎಲ್ಲಿ ಹೋಯಿತು' ಎಂದು ಪ್ರಶ್ನಿಸಿದರು.

> **ನನ್ನ ಪತ್ನಿ ಸುನಿತಾಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲ. ಆಕೆ ಭವಿಷ್ಯದಲ್ಲಿ ಎಂದಿಗೂ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ರಾಜಕೀಯದಲ್ಲಿ ಆಸಕ್ತಿ ಇಲ್ಲದಿದ್ದರೂ ನನ್ನ ಬಂಧನವಾಗಿದ್ದರಿಂದ ಆಕೆ ಬಹಳ ತೀವ್ರವಾಗಿ ಸಾರ್ವಜನಿಕವಾಗಿ ತೊಡಗಿಕೊಳ್ಳಬೇಕಾಯಿತು**
>
> **ಅರವಿಂದ ಕೇಜ್ರಿವಾಲ್,** ದೆಹಲಿ ಮುಖ್ಯಮಂತ್ರಿ






ಪ್ರಿಯಾಂಕಾ ಹೆಜ್ಜೆ...

ಜಾರ್ಖಂಡ್‌ನ ರಾಂಚಿಯಲ್ಲಿ ಚುನಾವಣಾ ಪ್ರಚಾರದ ವೇಳೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಆದಿವಾಸಿ ಮಹಿಳೆಯರೊಂದಿಗೆ ನೃತ್ಯದಲ್ಲಿ ಭಾಗವಹಿಸಿದರು –ಪಿಟಿಐ ಚಿತ್ರ

ಬುಲ್ಡೋಜರ್ ಆರೋಪ ಸುಳ್ಳು: ಖರ್ಗೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ರಾಮ ಮಂದಿರದ ಮೇಲೆ ಬುಲ್ಡೋಜರ್ ಹತ್ತಿಸುತ್ತದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಆರೋಪವು ಸಂಪೂರ್ಣ ಸುಳ್ಳು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು.

'ಕಾಂಗ್ರೆಸ್ ಪಕ್ಷವು 55 ವರ್ಷಗಳ ಕಾಲ ಈ ದೇಶವನ್ನು ಆಳಿದೆ. ಆದರೆ, ಯಾರ ಧಾರ್ಮಿಕ ಆಚರಣೆಗಳನ್ನೂ ತಡೆದಿಲ್ಲ. ಅಥವಾ ಯಾರ ಮಂಗಳಸೂತ್ರಗಳನ್ನೂ ಕಿತ್ತುಕೊಂಡಿಲ್ಲ. ನಮ್ಮ ಪಕ್ಷವು ಎಲ್ಲ ಧರ್ಮ, ಎಲ್ಲ ಪಂಗಡಗಳನ್ನೂ, ಎಲ್ಲರ ನಂಬಿಕೆಯನ್ನೂ ಗೌರವಿಸುತ್ತದೆ' ಎಂದಿದ್ದಾರೆ.



ಪಿಟಿಐ ಸಂದರ್ಶನದಲ್ಲಿ ಮಾತನಾಡಿದ ಅವರು, 'ಬಿಜೆಪಿಯವರು ಯಾವಾಗಲೂ ಹೀಗೆಯೇ ಮಾತನಾಡುತ್ತಾರೆ' ಎಂದರು. ಧರ್ಮದ ಆಧಾರದಲ್ಲಿ ಕಾಂಗ್ರೆಸ್ ಪಕ್ಷವು ಮೀಸಲಾತಿ ನೀಡಲು ಬಯಸಿದೆ ಎಂಬ ಬಿಜೆಪಿ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಖರ್ಗೆ, 'ಈಗ ತಮಿಳುನಾಡಿನಲ್ಲಿ ಶೇ 69ರಷ್ಟು ಮೀಸಲಾತಿ ಮಿತಿ ಇದೆ. ಹಾಗಾದರೆ, ಅಲ್ಲಿ ಮೀಸಲಾತಿಯನ್ನು ಮುಸ್ಲಿಮರಿಗೆ ನೀಡಲಾಗಿದೆಯೇ? ತಮಿಳುನಾಡಿನಂತೆಯೇ ನಾವೂ ದೇಶದಾದ್ಯಂತ ಮೀಸಲಾತಿ ಮಿತಿಯನ್ನು ಏರಿಸುವುದಾಗಿ ಹೇಳುತ್ತಿದ್ದೇವೆ. ಇಲ್ಲಿ ಮುಸ್ಲಿಮರ ವಿಷಯ ಎಲ್ಲಿ ಬಂತು? ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡಬೇಕು ಎಂದು ಬಯಸಿದ್ದೇವೆ. ಹಾಗಾದರೆ, ಆರ್ಥಿಕವಾಗಿ ಹಿಂದುಳಿದ ವರ್ಗಗಳಲ್ಲಿ ಮುಸ್ಲಿಮರೂ ಬರುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಚುನಾವಣಾ ಸ್ಪರ್ಧೆಯ ತಂತ್ರ'

ಕಡಿಮೆ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಬಗ್ಗೆ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, 'ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಪ್ರಜ್ಞಾಪೂರ್ವಕವಾಗಿಯೇ ಕಡಿಮೆ ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. 'ಇಂಡಿಯಾ' ಮೈತ್ರಿಕೂಟವನ್ನು ಒಟ್ಟಿಗೆ ಇಟ್ಟುಕೊಳ್ಳುವ ಮೂಲಕ ಬಿಜೆಪಿಯನ್ನು ಮಣಿಸುವ ತಂತ್ರಗಾರಿಕೆಯ ಭಾಗವಾಗಿ ಕಡಿಮೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲಾಗುತ್ತಿದೆ. ಆತ್ಮವಿಶ್ವಾಸ ಇಲ್ಲದ ಕಾರಣಕ್ಕಾಗಿ ಹೀಗೆ ಮಾಡಿರುವುದಲ್ಲ. ದೇಶದ ವಿವಿಧ ಪ್ರದೇಶಗಳಲ್ಲಿ ಶಕ್ತಿಯುತವಾಗಿರುವ ಪಕ್ಷಗಳನ್ನು ಒಗ್ಗೂಡಿಸಿಕೊಂಡು ಗೆಲುವು ಸಾಧಿಸುವ ತಂತ್ರವಿದು' ಎಂದರು.

'ಮೋದಾನಿ' ಹಗರಣ • ಮೂರು ಪಟ್ಟು ಹೆಚ್ಚಿನ ಬೆಲೆಗೆ ಕಲ್ಲಿದ್ದಲು ಮಾರಾಟ ಆರೋಪ

ಅಧಿಕಾರಕ್ಕೇರಿದ ತಿಂಗಳೊಳಗೆ ಕ್ರಮ: ಕಾಂಗ್ರೆಸ್

ನವದೆಹಲಿ (ಪಿಟಿಐ): 'ಅದಾನಿ ಸಮೂಹವು ಸರ್ಕಾರಿ ಸ್ವಾಮ್ಯದ ತಮಿಳುನಾಡು ವಿದ್ಯುತ್ ಉತ್ಪಾದನಾ ಮತ್ತು ವಿತರಣಾ ನಿಗಮಕ್ಕೆ ಕಳಪೆ ಗುಣಮಟ್ಟದ ಕಲ್ಲಿದ್ದಲನ್ನು ಮೂರು ಪಟ್ಟು ಅಧಿಕ ಬೆಲೆಗೆ ಮಾರಾಟ ಮಾಡಿ, ಲಾಭ ಗಳಿಸಿಕೊಂಡಿದೆ' ಎಂದು ಆರ್ಗನೈಸ್ಡ್ ಕ್ರೈಂ ಆ್ಯಂಡ್ ಕರಪ್ಶನ್ ರಿಪೋರ್ಟ್ ಪ್ರಾಜೆಕ್ಟ್ (ಒಸಿಸಿಆರ್‌ಪಿ) ತನಿಖಾ ವರದಿ ನೀಡಿದೆ.

ಈ ವರದಿಯ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ಕೇಂದ್ರದಲ್ಲಿ 'ಇಂಡಿಯಾ' ಮೈತ್ರಿಕೂಟದ ಸರ್ಕಾರವು ರಚನೆಯಾದ ಒಂದು ತಿಂಗಳ ಒಳಗಾಗಿ ಈ ಹಗರಣದ ಕುರಿತು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ರಚಿಸಿ ತನಿಖೆ ನಡೆಸಲಾಗುವುದು' ಎಂದು ಬುಧವಾರ ಹೇಳಿದೆ. ಆದರೆ, ಒಸಿಸಿಆರ್‌ಪಿ ವರದಿ ಕುರಿತು ಅದಾನಿ ಸಮೂಹವು ಇಲ್ಲಿಯವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಹಿಂದೆಯೂ ಈ ಆರೋಪ ಕೇಳಿಬಂದಿತ್ತು. ಆಗ ಸಮೂಹವು ಈ ಎಲ್ಲ ಆರೋಪಗಳನ್ನು ನಿರಾಕರಿಸಿತ್ತು.

ಏನಿದು ಹಗರಣ?: 'ಕಳಪೆ ಗುಣಮಟ್ಟದ ಹಾಗೂ ಹೆಚ್ಚು ಬೂದಿ ಹೊರಹೊಮ್ಮುವ ಕಲ್ಲಿದ್ದಲನ್ನು ಅದಾನಿ ಸಮೂಹವು 2014ರಲ್ಲಿ ಇಂಡೊನೇಷ್ಯಾದಿಂದ ಖರೀದಿಸಿದೆ. ಉತ್ತಮ ಗುಣಮಟ್ಟದ ಹಾಗೂ ಕಡಿಮೆ ಹೊಗೆ ಹೊಮ್ಮುವ ಕಲ್ಲಿದ್ದಲನ್ನು ನೀಡಲಾಗುವುದು ಎಂದು ಹೇಳಿ, ಮೂರು ಪಟ್ಟು ಹೆಚ್ಚಿನ ಬೆಲೆಗೆ ತಮಿಳುನಾಡು ನಿಗಮಕ್ಕೆ ಅದಾನಿ ಸಮೂಹವು ಮಾರಾಟ ಮಾಡಿದೆ. ಈ ಮೂಲಕ ₹3,000 ಕೋಟಿ ಹೆಚ್ಚಿನ ಲಾಭವನ್ನು ಕಂಪನಿ ಮಾಡಿಕೊಂಡಿದೆ. ಈ ಕಾರಣದಿಂದ ಜನರು ತಮ್ಮ ಜೇಬಿನಿಂದ ದೊಡ್ಡ ಮೊತ್ತದ ಹಣವನ್ನು ವಿದ್ಯುತ್ ಬಿಲ್‌ಗೆ ಪಾವತಿಸಿದ್ದಾರೆ. ಜೊತೆಗೆ ಪರಿಸರಕ್ಕೂ ಹಾನಿಯಾಗಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ.

'ವಾಯು ಮಾಲಿನ್ಯದಿಂದ ಪ್ರತಿ ವರ್ಷ 20 ಲಕ್ಷ ಭಾರತೀಯರು ಮೃತಪಡುತ್ತಿದ್ದಾರೆ. ಪ್ರಧಾನಿ ಹಾಗೂ ಅವರ ಆಪ್ತರಿಗಷ್ಟೇ ಇದು 'ಅಮೃತ ಕಾಲ'. ಇತರರಿಗೆ ಇದು 'ವಿಷಕಾಲ' ಎಂದಿದ್ದಾರೆ.

'ವಿದೇಶಗಳಲ್ಲಿ ಹಗರಣದ ತನಿಖೆ'

ಹಗರಣದ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್, 'ಈ ಹಗರಣದ ಕುರಿತು ಭಾರತದಲ್ಲಿ ತನಿಖೆ ನಡೆಯದಂತೆ ಮೋದಿ ಅವರು ತಡೆದಿರಬಹುದು. ಆದರೆ, ಇಂಡೊನೇಷ್ಯಾ ಸೇರಿದಂತೆ ಇತರ ದೇಶಗಳಿಂದ ತನಿಖೆಯ ಮಾಹಿತಿಗಳು ಹೊರಬರುತ್ತಿವೆ. ಅಕ್ರಮವು ಭಾರತದ ಅತಿಚಟುವಟಿಕೆಯಿಂದ ಇರುವ ತನಿಖಾ ಸಂಸ್ಥೆಗಳ ಮೂಗಿನ ಕೆಳಗೇ ನಡೆದಿರುವುದನ್ನು ಒಸಿಸಿಆರ್‌ಪಿ ನೀಡಿರುವ ದಾಖಲಾತಿಗಳು ತೆರೆದಿಟ್ಟಿವೆ' ಎಂದರು.

'ತಮ್ಮ ಕಂಪನಿಯ ಶೇರು ಮೌಲ್ಯವನ್ನು ಏರಿಸಿಕೊಳ್ಳುವುದಕ್ಕೆ ಅದಾನಿ ಸಮೂಹವು ಇಂಥ ಅಪರಾಧ ನಡೆಸಿದೆ. ಈ ಹಿಂದೆ, ತಮ್ಮ ಶೇರುಮೌಲ್ಯಗಳನ್ನು ಏರಿಸಿಕೊಳ್ಳಲು ಅಕ್ರಮ ನಡೆಸಿದ್ದವರನ್ನು ಬಂಧಿಸಿ, ಅವರ ಆಸ್ತಿಗಳನ್ನು ಇ.ಡಿಯು ವಶಕ್ಕೆ ಪಡೆದುಕೊಂಡಿದೆ. ಆದರೆ, ಮೋದಾನಿ ಅವರ ಮೇಲೆ ಮಾತ್ರ ಈ ಯಾವ ಕ್ರಮವೂ ನಡೆಯುವುದಿಲ್ಲ' ಎಂದು ಹೇಳಿದರು.

> **ಕಲ್ಲಿದ್ದಲನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಿ ಅದರಿಂದ ಅಕ್ರಮವಾಗಿ ₹20,000 ಕೋಟಿ ಆದಾಯ ಗಳಿಸಿದ ಅದಾನಿ ಕಂಪನಿಯ ಕುರಿತು ತನಿಖೆ ನಡೆಸಲಾಗುವುದು**
>
> **ಜೈರಾಮ್ ರಮೇಶ್,** ಕಾಂಗ್ರೆಸ್ ಮುಖಂಡ


'ಎಷ್ಟು ಟೆಂಪೊ ಬಳಸಲಾಗಿದೆ?'

ಹಗರಣದ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಕ್ರಿಯಿಸಿದ್ದು, 'ಅತಿ ದೊಡ್ಡ ಕಲ್ಲಿದ್ದಲು ಹಗರಣ ಬೆಳಕಿಗೆ ಬಂದಿದೆ. ಪ್ರಧಾನಿ ಮೋದಿ ಅವರ ಆಪ್ತ ಸ್ನೇಹಿತ ಅದಾನಿ ಅವರು ಜನರ ಸಾವಿರಾರು ಕೋಟಿ ಹಣವನ್ನು ಕೊಳ್ಳೆ ಹೊಡೆದಿದ್ದಾರೆ. ಹಾಡಹಗಲೇ ನಡೆಯುತ್ತಿರುವ ಇಂಥ ಭ್ರಷ್ಟಾಚಾರದ ಕುರಿತು ಇ.ಡಿ., ಸಿಬಿಐ ಹಾಗೂ ಆದಾಯ ತೆರಿಗೆ ಇಲಾಖೆಯು ಸುಮ್ಮನಿರಲು ಹಣ ತುಂಬಿರುವ ಎಷ್ಟು ಟೆಂಪೊಗಳನ್ನು ಬಳಸಿಕೊಳ್ಳಲಾಗಿದೆ? ಜೂನ್ 4ರ ಬಳಿಕ, 'ಇಂಡಿಯಾ' ಮೈತ್ರಿಕೂಟದ ಸರ್ಕಾರವು ಈ ಹಗರಣ ತನಿಖೆ ನಡೆಸುತ್ತದೆ. ಸಾರ್ವಜನಿಕರಿಂದ ಲೂಟಿ ಹೊಡೆದ ಒಂದೊಂದು ರೂಪಾಯಿಯ ಲೆಕ್ಕವನ್ನೂ ಹಾಕಲಾಗುತ್ತದೆ' ಎಂದಿದ್ದಾರೆ.



ಕಪ್ಪುಹಣ: ಪ್ರಧಾನಿ ಹೇಳಿಕೆ ಕುರಿತು ತನಿಖೆಗೆ ಒತ್ತಾಯ

ಕೋಲ್ಕತ್ತ (ಪಿಟಿಐ): ಕಾರ್ಪೊರೇಟ್ ಕಂಪನಿಗಳು ಕಪ್ಪು ಹಣ ಹೊಂದಿರುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ನೀಡಿರುವ ಹೇಳಿಕೆಯ ಕುರಿತು ತನಿಖೆಗೆ ಆದೇಶಿಸುವಂತೆ ಟಿಎಂಸಿ ಪರ ಇರುವ ಶಿಕ್ಷಣ ತಜ್ಞರ ವೇದಿಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಒತ್ತಾಯಿಸಿದೆ.



ತೆಲಂಗಾಣದ ಕರೀಂ ನಗರದಲ್ಲಿ ಈಚೆಗೆ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ್ದ ಮೋದಿ ಅವರು, ದೇಶದ ಎರಡು ದೊಡ್ಡ ಕಾರ್ಪೊರೇಟ್ ಕಂಪನಿಗಳು ಕಪ್ಪು ಹಣದ ಸಂಗ್ರಹಣೆ, ಬಳಕೆ ಮತ್ತು ವಿತರಣೆಯಲ್ಲಿ ಶಾಮೀಲಾಗಿವೆ ಎಂದು ಆರೋಪಿಸಿದ್ದರು.

ಕಪ್ಪು ಹಣದ ಬಳಕೆಯು ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಬೆದರಿಕೆಯೊಡ್ಡುತ್ತಿದೆ ಎಂದು ವಿಶ್ವವಿದ್ಯಾಲಯಗಳ ಮಾಜಿ ಕುಲಪತಿಗಳು ಮತ್ತು ಪ್ರಾಧ್ಯಾಪಕರನ್ನೊಳಗೊಂಡಿರುವ ವೇದಿಕೆಯು ಹೇಳಿಕೆಯಲ್ಲಿ ತಿಳಿಸಿದೆ.

ಪ್ರೊ. ಓಂಪ್ರಕಾಶ್ ಮಿಶ್ರಾ, ರಾಜ್ಯದ ಮಾಜಿ ಸಚಿವ ಪೂರ್ಣೇಂದು ಬಸು ಮತ್ತು ಸಂಶೋಧಕ ಪ್ರೊ. ಅಖಿಲ್ ಸ್ವಾಮಿ ಮತ್ತಿತರರು ಹೇಳಿಕೆಗೆ ಸಹಿ ಹಾಕಿದ್ದಾರೆ.

ಸಂಕ್ಷಿಪ್ತ ಸುದ್ದಿ

ಲ್ಯಾಟರಲ್ ಎಂಟ್ರಿ: ಜೂನ್ 22ಕ್ಕೆ ಸಿಇಟಿ

ಬೆಂಗಳೂರು: ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ 3ನೇ ಸೆಮಿಸ್ಟರ್ ಪ್ರವೇಶಕ್ಕೆ ಜೂನ್ 22ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲಾಗುತ್ತಿದೆ.

ಮೊದಲು ಆನ್‌ಲೈನ್ ಮೂಲಕ ನಡೆಸಲು ನಿರ್ಧರಿಸಲಾಗಿತ್ತು. ವಿವಿಧ ಕಾರಣಗಳಿಂದ ಪರೀಕ್ಷೆಯನ್ನು ಆಫ್‌ಲೈನ್ ಸ್ವರೂಪದಲ್ಲಿ ಹಿಂದಿನ ವರ್ಷಗಳಲ್ಲಿ ನಡೆಸಿದಂತೆಯೇ ಒಎಂಆರ್ ಉತ್ತರ ಪತ್ರಿಕೆಯ ಮಾದರಿಯಲ್ಲಿ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಪರೀಕ್ಷೆಯನ್ನು ಬಾಗಲಕೋಟೆ, ಬಳ್ಳಾರಿ, ಬೆಂಗಳೂರು, ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರ್ಗಿ, ಉಡುಪಿ, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಮಾತ್ರ ನಡೆಸಲಾಗುವುದು. ಬೇರೆ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡವರು ಪ್ರಾಧಿಕಾರದ ವೆಬ್‌ಸೈಟಿನ ಲಿಂಕ್ ಮೂಲಕ ಮೇ 24ರ ಬೆಳಿಗ್ಗೆ 11ರಿಂದ 27ರ ರಾತ್ರಿ 11.59ರ ಒಳಗೆ ಬದಲಿ ಪರೀಕ್ಷಾ ಕೇಂದ್ರ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದೆ.

ಆನ್‌ಲೈನ್ ವಂಚನೆ: ₹75 ಲಕ್ಷ ವರ್ಗಾವಣೆ

ಹಾಸನ: ಹಣವನ್ನು ದುಪ್ಪಟ್ಟು ಮಾಡಿ ಕೊಡುವುದಾಗಿ ಟೆಲಿಗ್ರಾಂ ಆ್ಯಪ್‌ನಲ್ಲಿ ನಂಬಿಸಿ, ₹ 75,09,107 ಅನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿಕೊಂಡು ವಂಚನೆ ಮಾಡಲಾಗಿದ್ದು, ನಗರದ ಸೆನ್ ಠಾಣೆಯಲ್ಲಿ ದೂರು ದಾಖಲಾಗಿದೆ. ದೂರುದಾರರ ಹೆಸರನ್ನು ಗೌಪ್ಯವಾಗಿಡಲಾಗಿದೆ.

'ವಿದ್ಯಾನಗರದ ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆಯುಳ್ಳ ದೂರುದಾರರು ಆಮಿಷಕ್ಕೆ ಒಳಗಾಗಿ, ₹11 ಸಾವಿರವನ್ನು ಅಪರಿಚಿತರು ತಿಳಿಸಿದ ಖಾತೆಗೆ ವರ್ಗಾವಣೆ ಮಾಡಿದ್ದರು. ನಂತರ, ಅವರ ಖಾತೆಗೆ ₹16 ಸಾವಿರ ಜಮೆಯಾಗಿತ್ತು. ಆ ನಂತರ, 26 ಬಾರಿ ಒಟ್ಟು ₹ 75,09,107 ವನ್ನು ಅಪರಿಚಿತರು ತಿಳಿಸಿದ ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದರು. ಆದರೆ, ಹಣ ವಾಪಸಾಗದೆ, ಮೋಸ ಹೋಗಿರುವುದು ಗೊತ್ತಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ. ತನಿಖೆ ನಡೆದಿದೆ.

ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಪತ್ರಿಕಾ ವಿತರಕರ ಒಕ್ಕೂಟ 'ಪ್ರತಿಭಾ ಪುರಸ್ಕಾರ'ಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ 85ಕ್ಕಿಂತ ಅಧಿಕ ಅಂಕ ಪಡೆದಿರುವ ಪತ್ರಿಕಾ ವಿತರಕರು ಹಾಗೂ ಪತ್ರಿಕಾ ವಿತರಕರು, ಹಂಚಿಕೆದಾರರ ಮಕ್ಕಳು ಅರ್ಜಿ ಸಲ್ಲಿಸಬಹುದು.ಆಸಕ್ತ ವಿದ್ಯಾರ್ಥಿಗಳು ಅರ್ಜಿ ಜತೆಗೆ ಅಂಕಪಟ್ಟಿಯನ್ನೂ ಕಳುಹಿಸಬೇಕು. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನ.

ಅರ್ಜಿ ಸಲ್ಲಿಸಬೇಕಾದ ವಿಳಾಸ: ಕರ್ನಾಟಕ ಪತ್ರಿಕಾ ವಿತರಕರ ಒಕ್ಕೂಟ, 8 ಮತ್ತು 9, ಮಹಾಲಕ್ಷ್ಮಿ ಪ್ಲಾಝಾ, ಮುನೇಶ್ವರ ಬ್ಲಾಕ್ ಸರಸ್ವತಿಪುರಂ ಮುಖ್ಯರಸ್ತೆ , ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಎದುರು, ಬೆಂಗಳೂರು-560096. ಮಾಹಿತಿಗೆ ಮೊಬೈಲ್: 9972534666 ಸಂಪರ್ಕಿಸಬಹುದು.

'ನಕಲಿ ಅಂಕಪಟ್ಟಿ ಪ್ರಕರಣ: ಇಲಾಖೆ ಅನುಮತಿ ಪಡೆದಿಲ್ಲ'

ಬಾಗಲಕೋಟೆ: 'ಸೋಷಿಯಲ್ ಡೆವಲಪ್‌ಮೆಂಟ್ ಆ್ಯಂಡ್ ಎಜುಕೇಷನ್ ಸೊಸೈಟಿ ಶಿಕ್ಷಣ ಸಂಸ್ಥೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆದಿಲ್ಲ' ಎಂದು ಕೊಪ್ಪಳ ನಗರ ಪೊಲೀಸ್ ಠಾಣೆಗೆ ಜಿಲ್ಲೆಯ ಜಮಖಂಡಿ ಕ್ಷೇತ್ರ ಶಿಕ್ಷಣಾಧಿಕಾರಿ ಉತ್ತರಿಸಿದ್ದಾರೆ.

ನ್ಯಾಯಾಲಯದಲ್ಲಿ ಜವಾನ ಹುದ್ದೆಗೆ ಆಯ್ಕೆಯಾಗಿರುವ ಪ್ರಭು ಲೋಕರೆ ಪಡೆದಿರುವ ಅಂಕಗಳ ಬಗ್ಗೆ ಅನುಮಾನಗೊಂಡು ಕೊಪ್ಪಳದ ಜೆಎಂಎಫ್‌ಸಿ ನ್ಯಾಯಾಲಯದ ಆದೇಶದ ಮೇರೆಗೆ ಸತ್ಯಾಸತ್ಯತೆ ತಿಳಿಯಲು ಅಲ್ಲಿನ ಠಾಣೆಯ ಪೊಲೀಸರು ಕೇಳಿದ್ದ ಮಾಹಿತಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ಉತ್ತರ ಕಳುಹಿಸಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಾಂಕನ ನಿರ್ಣಯ ಮಂಡಳಿಯಲ್ಲಿ ಶಾಲೆ ನೋಂದಣಿಯಾಗಿಲ್ಲ. ಪ್ರಭುವಿನ ಅಂಕಪಟ್ಟಿ ವಿವರಗಳೂ ಕಚೇರಿಯಲ್ಲಿ ಲಭ್ಯವಿಲ್ಲ. ಆದ್ದರಿಂದ ಸಂಸ್ಥೆಯವರನ್ನೇ ತನಿಖೆಗೆ ಒಳಪಡಿಸಬಹುದು ಎಂದು ತಿಳಿಸಲಾಗಿದೆ.

ದೆಹಲಿ ಸಂಸ್ಥೆ ಹೆಸರಿನಲ್ಲಿ ಅಂಕಪಟ್ಟಿ ಜಾಲ: 'ದೆಹಲಿಯ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ ಸಿಲೆಬಸ್ ಸೆಕೆಂಡರಿ ಸಂಸ್ಥೆಯ ಹೆಸರಿನಲ್ಲಿ ಅಂಕಪಟ್ಟಿ ಹಲವಾರು ವರ್ಷಗಳಿಂದ ನೀಡಲಾಗುತ್ತದೆ' ಎಂದು ಅಭ್ಯರ್ಥಿಯೊಬ್ಬರು ತಿಳಿಸಿದರು.

'ಈ ಕುರಿತು ಬೆಂಗಳೂರಿನ ಬನಶಂಕರಿ, ತೇರದಾಳ ಸೇರಿ ಹಲವು ಠಾಣೆಗಳಲ್ಲಿ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲಾಗಿದೆ. ಮೇಲಿನ ಸಂಸ್ಥೆಯ ಬೋರ್ಡ್ ಎಲ್ಲಿಯೂ ಹಾಕಿಲ್ಲ ' ಎಂದು ದೂರಿದರು.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಉತ್ತಮ ಮಳೆ ● ನೇತ್ರಾವತಿ ನದಿಯಲ್ಲಿ ನೀರಿನ ಹರಿವು ಹೆಚ್ಚಳ

ಕಬಿನಿ ಜಲಾಶಯಕ್ಕೆ ಒಳಹರಿವು ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಗಳೂರು: ಮೈಸೂರು ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆಯಿಂದ ರಾತ್ರಿವರೆಗೆ ಸುರಿದ ಜಿಟಿಜಿಟಿ ಮಳೆ ತಂಪಿನ ಅನುಭವ ನೀಡಿತು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ, ಹಂಪಾಪುರ, ಹುಣಸೂರು ತಾಲ್ಲೂಕಿನ ಧರ್ಮಪುರದಲ್ಲೂ ಮಳೆ ಸುರಿಯಿತು. ಕೇರಳದ ವಯನಾಡಿನಲ್ಲಿ ಮಳೆಯಾಗುತ್ತಿರುವುದರಿಂದ ಎಚ್.ಡಿ. ಕೋಟೆ ತಾಲ್ಲೂಕು ಕಬಿನಿ ಜಲಾಶಯಕ್ಕೆ ಒಳಹರಿವು ಆರಂಭವಾಗಿದ್ದು, ನೀರಿನ ಪ್ರಮಾಣ ಒಂದು ದಿನದಲ್ಲಿ ಒಂದು ಅಡಿ ಏರಿಕೆಯಾಗಿದೆ.

2,284 ಅಡಿ ಗರಿಷ್ಠ ಸಂಗ್ರಹ ಸಾಮರ್ಥ್ಯದ ಜಲಾಶಯ ಮಟ್ಟ ಮಂಗಳವಾರ 2,256.96 ಅಡಿ ಇತ್ತು. ಅದು ಬುಧವಾರ 2,257.32 ಅಡಿಗೆ ಏರಿಕೆಯಾಗಿತ್ತು. 1,861 ಕ್ಯುಸೆಕ್ ಒಳಹರಿವು ಇತ್ತು.

ಮಂಡ್ಯ ನಗರದಲ್ಲಿ ಬುಧವಾರ ಧಾರಾಕಾರ ಮಳೆ ಸುರಿದು, ಮಹಾವೀರ ವೃತ್ತದಲ್ಲಿರುವ ಅಂಚೆ ಕಚೇರಿ ಸೇರಿದಂತೆ ಹಲವು ಕಟ್ಟಡಗಳಿಗೆ ನೀರು ನುಗ್ಗಿತು. ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ, ವಿವಿ ರಸ್ತೆ, ಮಾರುಕಟ್ಟೆ ಕಡೆಯಿಂದ ನೀರು ಹರಿದು ಮಹಾವೀರ ವೃತ್ತ ಕೆರೆಯಂತಾಯಿತು. ಆ ಭಾಗದಲ್ಲಿ ಚರಂಡಿಗಳು ಹಾಳಾಗಿದ್ದು, ನೀರು ರಸ್ತೆ ಮೇಲೆ ಉಕ್ಕಿ ಅಂಚೆ ಕಚೇರಿಯೊಳಗೆ ನುಗ್ಗಿತು. ಅಕ್ಕಪಕ್ಕದ ಕಟ್ಟಡಗಳಿಗೂ ನೀರು ನುಗ್ಗಿದ್ದರಿಂದ ಜನ ಪರದಾಡಿದರು.



ಮೈಸೂರಿನಲ್ಲಿ ಬುಧವಾರ ಸುರಿದ ಮಳೆಯಿಂದಾಗಿ ಕೆ.ಆರ್. ವೃತ್ತದ ಒಂದು ಭಾಗ ಜಲಾವೃತಗೊಂಡಿತ್ತು. ಈ ಮಾರ್ಗದಲ್ಲೇ ವಾಹನ ಸವಾರರು ಸಾಗಿದರು

ಪ್ರಜಾವಾಣಿ ಚಿತ್ರ/ಅನೂಪ್ ರಾಘ. ಟಿ.

ಮಂಗಳೂರು ನಗರ, ಪುತ್ತಿಗೆ, ಮರೋಡಿ, ಉಡುಪಿ ಜಿಲ್ಲೆಯ ಕಾಂತಾವರದಲ್ಲಿ ಮಳೆ ಸುರಿಯಿತು.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮೂರು ದಿನ ಉತ್ತಮ ಮಳೆಯಾಗಿದ್ದರಿಂದ ನೇತ್ರಾವತಿ ನದಿಯಲ್ಲಿ ನೀರಿನ ಹರಿವು ಹೆಚ್ಚಿದೆ. ಮಂಗಳೂರು ನಗರಕ್ಕೆ ನೀರು ಪೂರೈಕೆ ಮೂಲವಾಗಿರುವ ತುಂಬೆ ಅಣೆಕಟ್ಟೆ ಬಹುತೇಕ ಭರ್ತಿಯಾಗಿದೆ. ನೀರಿನ ಕೊರತೆ ಕಾರಣ ಮಂಗಳೂರು ನಗರದಲ್ಲಿ ದಿನಬಿಟ್ಟು ದಿನ ನೀರು ಪೂರೈಸುವ ರೇಷನಿಂಗ್ ಪದ್ಧತಿಯನ್ನು ಬುಧವಾರದಿಂದ ಕೈಬಿಟ್ಟಿರುವ ಮಹಾನಗರ ಪಾಲಿಕೆ, ನಿತ್ಯವೂ ನೀರು ಪೂರೈಸಲು ನಿರ್ಧರಿಸಿದೆ.

ಒಟ್ಟಾರೆ 6 ಮೀಟರ್ ಸಂಗ್ರಹ ಸಾಮರ್ಥ್ಯದ ತುಂಬೆ ಅಣೆಕಟ್ಟೆಯಲ್ಲಿ ಬುಧವಾರ 5.91 ಮೀಟರ್ ವರೆಗೆ ನೀರಿನ ಸಂಗ್ರಹ ಇದ್ದು, ಗೇಟ್‌ಗಳನ್ನು ತೆರೆದು ನೀರು ಬಿಡಲಾಗುತ್ತಿದೆ.

ಯಾದಗಿರಿ ವರದಿ: ಜಿಲ್ಲೆಯ ಯರಗೋಳ ಸಮೀಪದ ಕಂಚಗಾರಹಳ್ಳಿ ತಾಂಡಾದಲ್ಲಿ ಬುಧವಾರ ಮಧ್ಯಾಹ್ನ ಗುಡುಗು, ಸಿಡಿಲು, ಬಿರುಗಾಳಿ ಸಹಿತ ಮಳೆ ಸುರಿದಿದೆ.

ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಬಿರುಗಾಳಿ ಸಹಿತ ಮಳೆಯಾಗಿದ್ದು, ರಸ್ತೆ ಬದಿಯ ಹಾಗೂ ಹೊಲಗಳಲ್ಲಿನ ಹಲವು ಮರಗಳು ನೆಲಕ್ಕುರುಳಿವೆ. ಮನೆಯ ಪತ್ರಾಸ್ ಬಿದ್ದು ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ. ವಿದ್ಯುತ್ ಕಂಬಗಳು ನೆಲಕ್ಕೆ ಬಿದ್ದಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

ಕಾರ್ಗಲ್ ವರದಿ (ಶಿವಮೊಗ್ಗ ಜಿಲ್ಲೆ): ಶರಾವತಿ ಕೊಳ್ಳದ ವ್ಯಾಪ್ತಿಯಲ್ಲಿ ಮುಂಗಾರು ಪೂರ್ವ ಮಳೆ ಸುರಿಯುತ್ತಿರುವುದರಿಂದ, ಲಿಂಗನಮಕ್ಕಿ ಜಲಾನಯನ ಪ್ರದೇಶದ ಕೆಳದಂಡೆ ಭಾಗದಲ್ಲಿ ಮಳೆ ನೀರು ಹರಿಯುತ್ತಿದೆ. ಇದರಿಂದ ವಿಶ್ವ ವಿಖ್ಯಾತ ಜೋಗ ಜಲಪಾತಕ್ಕೆ ನೀರು ಹರಿದು ಬಂದಿದೆ. ಬತ್ತಿ ಹೋಗಿದ್ದ ರಾಜ, ರಾಣಿ, ರೋರರ್, ರಾಕೆಟ್ ಜಲಪಾತಗಳಲ್ಲಿ ಈಗ ನೀರು ಧುಮುಕಲು ಆರಂಭಿಸಿದೆ.

ರಾಜ್ಯದ ಹಲವೆಡೆ ಗುಡುಗು ಸಹಿತ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಬಹುತೇಕ ಕಡೆ ಗುರುವಾರವೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಆರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮಂಡ್ಯ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಮೈಸೂರು, ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಉಡುಪಿ, ಉತ್ತರ ಕನ್ನಡ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ರಾಮನಗರ ಹಾಗೂ ಶಿವಮೊಗ್ಗ ಜಿಲ್ಲೆಯ ಹಲವೆಡೆ ಗುಡುಗು ಹಾಗೂ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಕರಾವಳಿಯಲ್ಲಿ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯುವ ಮುನ್ನ ಎಚ್ಚರ ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮುಂದಿನ ಎರಡು ದಿನಗಳು ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಇದೇ 29ರವರೆಗೂ ರಾಜ್ಯದ ಕೆಲವೆಡೆ ಮಳೆ ಮುಂದುವರಿಯುವ ಸಂಭವವಿದೆ ಎಂದು ಹೇಳಿದೆ.

ಧರ್ಮಸ್ಥಳ, ಸುಳ್ಯ, ಶಿರಾಲಿಯಲ್ಲಿ ಅಧಿಕ ಮಳೆ

ಬುಧವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳಲ್ಲಿ ಕರಾವಳಿ, ದಕ್ಷಿಣ ಒಳನಾಡಿನ ಹಲವು ಕಡೆ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆ ಮಳೆಯಾಗಿದೆ. ದಕ್ಷಿಣ ಕನ್ನಡದ ಧರ್ಮಸ್ಥಳ, ಸುಳ್ಯ ಹಾಗೂ ಉತ್ತರ ಕನ್ನಡದ ಶಿರಾಲಿಯಲ್ಲಿ ತಲಾ 6 ಸೆಂ.ಮೀ. ಮಳೆಯಾಗಿದೆ. ಚಿಕ್ಕಮಗಳೂರಿನ ಕೊಟ್ಟಿಗೆಹಾರ, ಚಾಮರಾಜನಗರದ ಬಂಡೀಪುರ, ಶಿವಮೊಗ್ಗದ ಹುಂಚದಕಟ್ಟೆಯಲ್ಲಿ ತಲಾ 5 ಸೆಂ. ಮೀ. ಮಳೆಯಾಗಿದೆ. ಉಳಿದೆಡೆ ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆ ಸುರಿದಿದೆ.

ದಬ್ಬಾಳಿಕೆ ನಡೆಸಿದರೆ ಕೈಕಟ್ಟಿ ಕೂರಲ್ಲ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆಸಿದರೆ ನಾವು ಕೈಕಟ್ಟಿ ಕೂರುವುದಿಲ್ಲ. ಮುಂದೆ ನಡೆಯಬಹುದಾದ ಘಟನೆಗಳಿಗೆ ಪೊಲೀಸ್ ಅಧಿಕಾರಿಗಳು ಮತ್ತು ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದರು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರ ಬಂಧನ ಯತ್ನದ ಘಟನೆಯನ್ನು ಪ್ರಸ್ತಾಪಿಸಿ ಮಾತನಾಡಿದ ಅವರು, ಕೇವಲ ಬೆಳ್ತಂಗಡಿ ಮಾತ್ರವಲ್ಲ, ರಾಜ್ಯದ ಹಲವು ಕಡೆಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಪೊಲೀಸರಿಂದ ದಬ್ಬಾಳಿಕೆ ನಡೆದಿದೆ. ಕಲಬುರಗಿಯಲ್ಲಿ ಬಿಜೆಪಿ ಕಾರ್ಯಕರ್ತನೊಬ್ಬನನ್ನು ಹತ್ಯೆ ಮಾಡಲಾಗಿದೆ. ಕೊಡಗಿನಲ್ಲಿ ಕಾರು ಹತ್ತಿಸಿ ಕಾರ್ಯಕರ್ತನನ್ನು ಹತ್ಯೆ ಮಾಡಲಾಗಿದೆ. ದಬ್ಬಾಳಿಕೆಗೆ ಕಡಿವಾಣ ಹಾಕಲು ಪೊಲೀಸರಿಗೆ ಗೃಹ ಸಚಿವರು ಸೂಚಿಸಬೇಕು ಎಂದೂ ಒತ್ತಾಯಿಸಿದರು.

ಹರೀಶ್ ಅವರ ಬಂಧನ ಯತ್ನ ಖಂಡನೀಯ. ಯಾರಾದರೂ ಅಕ್ರಮ ಗಣಿಗಾರಿಕೆ ಮಾಡಿದ್ದರೆ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಿ. ವಿನಾ ಕಾರಣ ನಮ್ಮ ಪಕ್ಷದ ಯುವಮೋರ್ಚಾ ಕಾರ್ಯಕರ್ತ ಶಶಿಧರ್ ಅವರನ್ನು ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ಶಾಸಕರು ಪೊಲೀಸ್ ಠಾಣೆಗೆ ಹೋಗಿ ಅದನ್ನು ಪ್ರಶ್ನಿಸಿದ್ದಾರೆ. ಕಾರ್ಯಕರ್ತನನ್ನು ಸೇಡಿನ ಕಾರಣಕ್ಕೆ ಬಂಧಿಸಿರುವುದನ್ನು ಅವರು ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ವಿಜಯೇಂದ್ರ ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆ

ಪ್ರಜಾವಾಣಿ ವಾರ್ತೆ

> **ಅಧ್ಯಕ್ಷರ ಬದಲಾವಣೆಯ ಬಗ್ಗೆ ಯಾವುದೇ ಸುದ್ದಿ ಇಲ್ಲ. ಹಾಗೇನಾದರೂ ಇದ್ದರೆ ಅದು ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟಗೊಂಡ ನಂತರ ನಡೆಯಬಹುದು**
> **ಜಿ. ಪರಮೇಶ್ವರ,** ಗೃಹ ಸಚಿವ

> **ಕೆಪಿಸಿಸಿ ಅಧ್ಯಕ್ಷ ಹುದ್ದೆಯ ರೇಸ್‌ನಲ್ಲಿ ನಾನಿಲ್ಲ. ಬದಲಾವಣೆ ಮಾಡುವುದೇ ಆದರೆ ಉತ್ತರ ಕರ್ನಾಟಕದವರಿಗೆ ನೀಡಲಿ**
> **ಸತೀಶ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರ ಬದಲಾವಣೆ ವಿಚಾರ ಮುನ್ನೆಲೆಗೆ ಬಂದಿದೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಜಿ.ಪರಮೇಶ್ವರ ಮತ್ತು ಸತೀಶ ಜಾರಕಿಹೊಳಿ ಅವರು ಈ ಕುರಿತು ತಮ್ಮ ಅಭಿಪ್ರಾಯಗಳನ್ನು ಹೊರಹಾಕುವ ಮೂಲಕ ಚರ್ಚೆಗೆ ಚಾಲನೆ ನೀಡಿದ್ದಾರೆ.

ಇತ್ತೀಚೆಗೆ ನಡೆದ ಪಕ್ಷದ ಸಭೆಗಳಲ್ಲಿ ಕೆಪಿಸಿಸಿ ಜವಾಬ್ದಾರಿಯಿಂದ ಹೊರಬರುವ ಇಂಗಿತವನ್ನು ಡಿ.ಕೆ. ಶಿವಕುಮಾರ್ ಪರೋಕ್ಷವಾಗಿ ವ್ಯಕ್ತಪಡಿಸಿದಬೆನ್ನಲ್ಲೇಚರ್ಚೆಆರಂಭವಾಗಿದೆ.

ಕಳೆದ ವರ್ಷ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಹುದ್ದೆಯ ಜೊತೆಗೆ ಕೆಪಿಸಿಸಿ ಅಧ್ಯಕ್ಷ ಹುದ್ದೆಯನ್ನು ಲೋಕಸಭಾ ಚುನಾವಣೆವರೆಗೆ ನಿಭಾಯಿಸುವಂತೆ ಪಕ್ಷದ ಹೈಕಮಾಂಡ್ ಶಿವಕುಮಾರ್ ಅವರಿಗೆ ಸೂಚಿಸಿತ್ತು. ಲೋಕಸಭಾ ಚುನಾವಣೆ ಸದ್ಯವೇ ಮುಗಿಯಲಿದೆ. ಈ ಹಿನ್ನೆಲೆಯಲ್ಲಿ ಮಾತನಾಡಿರುವ ಶಿವಕುಮಾರ್ ಅವರು 'ಅಧ್ಯಕ್ಷ ಹುದ್ದೆಯಲ್ಲಿ ಎಷ್ಟು ದಿನ ಮುಂದುವರಿಯುತ್ತೇನೊ ಎಂಬುದು ಗೊತ್ತಿಲ್ಲ, ಬದಲಾವಣೆ ಆಗಲೂಬಹುದು' ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ.

ಮುಂಬರುವ ದಿನಗಳಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಚುನಾವಣೆಗಳಿಗೆ ತಯಾರಿ ನಡೆಸಬೇಕಾಗಿರುವುದರಿಂದ ಜವಾಬ್ದಾರಿ ಬೇರೊಬ್ಬರಿಗೆ ವಹಿಸುವುದು ಸೂಕ್ತ ಎಂಬ ಸಂದೇಶವನ್ನು ಶಿವಕುಮಾರ್ ನೀಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಸುದ್ದಿಗಾರರ ಪ್ರಶ್ನೆಗೆ ಬುಧವಾರ ಪ್ರತಿಕ್ರಿಯಿಸಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಉತ್ತರ ಕರ್ನಾಟಕ ಭಾಗದವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವುದು ಸೂಕ್ತ ಎಂದಿದ್ದಾರೆ.

'ಮೊದಲಿಗೆ ಅಧ್ಯಕ ಸ್ಥಾನ ಖಾಲಿ ಆಗಲಿ. ಅಧಿಕಾರ ಅವಧಿ ವಿಸ್ತರಣೆ ಆದರೂ ಅಚ್ಚರಿ ಇಲ್ಲ. ಒಂದು ವೇಳೆ ಬದಲಿಸುವುದಾದರೆ ಸಮರ್ಥರಿಗೆ, ಸಾಮರ್ಥ್ಯ ಇದ್ದವರಿಗೆ ಕೊಡಿ ಎಂದು ಕೇಳುತ್ತೇನೆ. ರಾಜ್ಯದ ಬಗ್ಗೆ ಗೊತ್ತಿರುವವರು ಮತ್ತು ರಾಜ್ಯ ಸುತ್ತಿದವರಿಗೆ ಕೊಡಿ ಎಂದು ಹೇಳುತ್ತೇನೆ' ಎಂದರು.

ಹರೀಶ್ ಪೂಂಜ ಮನೆಯಲ್ಲಿ ಹೈಡ್ರಾಮಾ

ಒಂದನೇ ಪುಟದಿಂದ...

ಬೆಳ್ತಂಗಡಿ ಸಮೀಪದ ಗರ್ಡಾಡಿಯಲ್ಲಿರುವ ಹರೀಶ್ ಅವರ ಮನೆ 'ಮಿತ್ತಿಲ ನಿವಾಸ'ಕ್ಕೆ ಡಿವೈಎಸ್‌ಪಿ ಎಸ್. ವಿಜಯಪ್ರಸಾದ್, ಬೆಳ್ತಂಗಡಿ ಠಾಣೆಯ ಇನ್‌ಸ್ಪೆಕ್ಟರ್ ಸುಬ್ಬಾಪುರಮಠ ಹಾಗೂ ಸಬ್ ಇನ್‌ಸ್ಪೆಕ್ಟರ್ ಚಂದ್ರಶೇಖರ್ ನೇತೃತ್ವದಲ್ಲಿ ಪೊಲೀಸರು ಬಂದಿದ್ದರು. ಈ ಸಂದರ್ಭದಲ್ಲಿ ಶಾಸಕರ ವಕೀಲರು ಮತ್ತು ಪೊಲೀಸ್ ಅಧಿಕಾರಿಗಳ ನಡುವೆ ವಾದ–ಪ್ರತಿವಾದ, ಮಾತಿನ ಚಕಮಕಿ ನಡೆಯಿತು. ವಿಷಯ ತಿಳಿದು ಶಾಸಕರ ಮನೆಯ ಬಳಿ ಕಾರ್ಯಕರ್ತರು ಜಮಾಯಿಸುತ್ತಿದ್ದಂತೆ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಈ ಹಿನ್ನೆಲೆಯಲ್ಲಿ ಸುತ್ತುಮುತ್ತಲ ಐದು ಠಾಣೆಗಳ ಸಿಬ್ಬಂದಿಯನ್ನು ಕರೆದು ಬಂದೋಬಸ್ತ್ ಏರ್ಪಡಿಸಲಾಯಿತು.

ಪೊಲೀಸರು ಬಂದ ವಿಷಯ ತಿಳಿದು ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಹಾಗೂ ಪುತ್ತೂರು ಮಾಜಿ ಶಾಸಕ ಸಂಜೀವ ಮಠಂದೂರು ಕೂಡ ಬಂದರು. ಕಾರ್ಯಕರ್ತರು, ವಶಪಡೆಯುವ ಪ್ರಯತ್ನವನ್ನು ವಿರೋಧಿಸಿ ಪ್ರತಿಭಟನೆಗೆ ಮುಂದಾದರು. ಕೆಲವರು ಪೊಲೀಸರ ಜತೆ ವಾಗ್ವಾದಕ್ಕೆ ಇಳಿದರು. ಕಾರ್ಯಕರ್ತರು 'ಭಾರತ್ ಮಾತಾಕಿ ಜೈ', 'ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ', 'ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ', 'ಹರೀಶ್ ಪೂಂಜರಿಗೆ ಜೈ' ಮುಂತಾದ ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಅಲ್ಲಿಗೆ ಬಂದ ವಕೀಲರಾದ ಶಂಭು ಶರ್ಮಾ ಮತ್ತು ಸುಬ್ರಹ್ಮಣ್ಯ ಕುಮಾರ್ ಅಗರ್ತ ಪೊಲೀಸ್ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ 'ಶಾಸಕರನ್ನು ಬಂಧಿಸಬೇಕಾದರೆ ನಿಯಮಗಳನ್ನು ಪಾಲಿಸಬೇಕು, ಏಕಾಏಕಿ ಬಂದು ಕರೆದುಕೊಂಡು ಹೋಗುವಂತಿಲ್ಲ. ಆರೋಪಗಳು ಇದ್ದರೆ ಕಾನೂನು ರೀತಿಯಲ್ಲಿ ಬಂಧಿಸುವುದಕ್ಕೆ ಅಭ್ಯಂತರವಿಲ್ಲ' ಎಂದು ವಾದಿಸಿದರು.

ಸಂಜೆಯಾಗುತ್ತಿದ್ದಂತೆ ಸಂಸದ ನಳಿನ್‌ಕುಮಾರ್ ಕಟೀಲ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ, ಶಾಸಕರಾದ ವೇದವ್ಯಾಸ ಕಾಮತ್, ರಾಜೇಶ್ ನಾಯ್ಕ, ಉಮಾನಾಥ ಕೋಟ್ಯಾನ್, ಲೋಕಸಭೆಯ ಬಿಜೆಪಿ ಅಭ್ಯರ್ಥಿ ಬ್ರಿಜೇಶ್ ಚೌಟ, ಮುಖಂಡರಾದ ಗಣೇಶ್ ಕಾರ್ಣಿಕ್, ಶ್ರೀನಿವಾಸ ರಾವ್, ಪ್ರಸಾದ್ ಕುಮಾರ್, ಕುಶಾಲಪ್ಪ ಗೌಡ ಮತ್ತಿತರರು ಸ್ಥಳಕ್ಕೆ ಬಂದರು.

ಏನೇನು ಪ್ರಕರಣಗಳು?: ಕಲ್ಲಿನ ಅಕ್ರಮ ಗಣಿಗಾರಿಕೆ ಹಾಗೂ ಸ್ಫೋಟಕಗಳ ಅಕ್ರಮ ದಾಸ್ತಾನು ಪ್ರಕರಣದಲ್ಲಿ ಮೇ 18ರಂದು ಬಂಧನಕ್ಕೆ ಒಳಗಾಗಿದ್ದ ಶಶಿರಾಜ್ ಶೆಟ್ಟಿ ಬಿಡುಗಡೆಗೆ ಆಗ್ರಹಿಸಿ ಪೊಲೀಸರಿಗೆ ಬೆದರಿಕೆ ಒಡ್ಡಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ 19ರಂದು ಹರೀಶ್ ಪೂಂಜ ಮೇಲೆ ಪ್ರಕರಣ ದಾಖಲಾಗಿತ್ತು.

ಮೇ 20ರಂದು ಅನುಮತಿ ಪಡೆಯದೆ ಬೆಳ್ತಂಗಡಿ ಬಿಜೆಪಿ ಮಂಡಲದ ನೇತೃತ್ವದಲ್ಲಿ ಪ್ರತಿಭಟನೆ ಆಯೋಜಿಸಿ ಪೊಲೀಸರಿಗೆ ಬೆದರಿಕೆ ಯೊಡ್ಡಿದ್ದಾರೆ ಎಂಬ ಆರೋಪದಡಿ ಶಾಸಕರ ಮೇಲೆ ಪ್ರಕರಣ ದಾಖಲಾಗಿತ್ತು.

'ಕಾಲರ್ ಪಟ್ಟಿ ಹಿಡಿದದ್ದು ಕಾರ್ಯಕರ್ತರಿಗಾಗಿ'

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ: 'ಕಾರಣವಿಲ್ಲದೆ ಪ್ರಕರಣ ದಾಖಲಿಸಿ ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿದ್ದಾರೆ. ನನ್ನ ಮೇಲೆಯೂ ಇಲ್ಲಸಲ್ಲದ ಪ್ರಕರಣಗಳನ್ನು ದಾಖಲಿಸಿದ್ದಾರೆ' ಎಂದು ಶಾಸಕ ಹರೀಶ್ ಪೂಂಜ ಹೇಳಿದರು.


'ನಾನು ಕಾರ್ಯಕರ್ತರಿಗಾಗಿ ಪೊಲೀಸ್ ಅಧಿಕಾರಿಯ ಕಾಲರ್ ಪಟ್ಟಿ ಹಿಡಿದಿದ್ದೇನೆಯೇ ಹೊರತು ಅಧಿಕಾರಕ್ಕಾಗಿ ಅಲ್ಲ. ಸಿದ್ದರಾಮಯ್ಯ ಅವರು ಹಿಂದೊಮ್ಮೆ ಅಧಿಕಾರಕ್ಕಾಗಿ ಅಧಿಕಾರಿಯ ಕಾಲರ್ ಹಿಡಿದಿದ್ದರು' ಎಂದು ದೂರಿದರು.

'ತುರ್ತು ಪರಿಸ್ಥಿತಿಯಿಂದ ಇಲ್ಲಿಯ ವರೆಗೂ ಕಾಂಗ್ರೆಸ್ ಪೊಲೀಸರ ಮೂಲಕ ದೌರ್ಜನ್ಯ ಎಸಗುತ್ತ ಬಂದಿದೆ. ಇಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ ಎಂದು ಬೆಳಿಗ್ಗೆ ಧ್ವನಿವರ್ಧಕದ ಮೂಲಕ ಘೋಷಣೆ ಮಾಡಿದ ಪೊಲೀಸರು ನಂತರ ಸಾಮಾಜಿಕ ತಾಣಗಳ ಮೂಲಕ ಕಾರ್ಯಕರ್ತರನ್ನು ಹೆದರಿಸಲು ಪ್ರಯತ್ನಿಸಿದ್ದಾರೆ. ಆದರೆ ಬಿಜೆಪಿ ಕಾರ್ಯಕರ್ತರು ಇದಕ್ಕೆ ಜಗ್ಗಲಿಲ್ಲ' ಎಂದು ಅವರು ಹೇಳಿದರು.

ಭೇಟಿಗೆ ಹೋದರೆ ಹೊಡೆಯುತ್ತಾರೆ: ಸಾಮಾಜಿಕ ಜಾಲತಾಣದಲ್ಲಿ ಅಳಲು

ಯೋಗೇಶ್ವರ್ ವಿರುದ್ಧ ಪುತ್ರಿ ನಿಶಾ ಕಿಡಿ

ಪ್ರಜಾವಾಣಿ ವಾರ್ತೆ



ನಿಶಾ ಯೋಗೇಶ್ವರ್

ರಾಮನಗರ: ವಿಧಾನ ಪರಿಷತ್ ಸದಸ್ಯ ಬಿಜೆಪಿಯ ಸಿ.ಪಿ. ಯೋಗೇಶ್ವರ್ ಮತ್ತು ಅವರ ಎರಡನೇ ಪತ್ನಿ ವಿರುದ್ಧ ಮೊದಲನೇ ಪತ್ನಿಯ ಪುತ್ರಿ ನಿಶಾ ಯೋಗೇಶ್ವರ್ ಬುಧವಾರ ಸಾಮಾಜಿಕ ಜಾಲತಾಣದಲ್ಲಿ ಹರಿಹಾಯ್ದಿದ್ದಾರೆ.

ಕೌಟುಂಬಿಕ ಸಮಸ್ಯೆಗಳ ಕುರಿತು ಅಳಲು ತೋಡಿಕೊಂಡಿರುವ ವಿಡಿಯೊವೊಂದನ್ನು ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಜಿಲ್ಲೆಯ ರಾಜಕೀಯ ವಲಯದಲ್ಲಿ ಇದು ಭಾರಿ ಚರ್ಚೆ ಹುಟ್ಟು ಹಾಕಿದೆ. ನಿಶಾ ಅಸಮಾಧಾನದ ವಿಡಿಯೊ ಕುರಿತು ಪ್ರತಿಕ್ರಿಯೆ ಪಡೆಯಲು ಯೋಗೇಶ್ವರ್ ಅವರಿಗೆ ಕರೆ ಮಾಡಿದಾಗ ಸ್ವೀಕರಿಸಲಿಲ್ಲ.

'ನನ್ನ ತಂದೆ ಮತ್ತು ಚಿಕ್ಕಮ್ಮ (ಮಲತಾಯಿ) ಇಬ್ಬರೂ ಮೊದಲನೇ ಪತ್ನಿಯ ಮಗಳಾದ ನನ್ನನ್ನು ಬೆಳೆಸಿ ಆದರ್ಶವಾಗಲಿಲ್ಲ. ತಂದೆಯ ಭೇಟಿಗೆ ಹೋದರೆ ಪೊಲೀಸರನ್ನು ಕರೆಯಿಸುತ್ತಾರೆ. ಮಾತನಾಡಿಸಲು ಮುಂದಾದರೆ ಕಪಾಳಕ್ಕೆ ಹೊಡೆಯುತ್ತಾರೆ. ನಿನಗೆ ಒಂದು ರೂಪಾಯಿ ಕೂಡ ಕೊಡುವುದಿಲ್ಲ. ಭಿಕ್ಷೆ ಬೇಡಿ ಬದುಕು ಎನ್ನುತ್ತಾರೆ. ನನ್ನ ಬದುಕಿನಿಂದ ತಂದೆ ಹೊರ ಹೋದಾಗಿನಿಂದಲೂ ವನವಾಸ ಅನುಭವಿಸುತ್ತಲೇ ಇದ್ದೇನೆ' ಎಂದು ಹೇಳಿದ್ದಾರೆ.

'ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ನಾನು ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದೆ. ನನ್ನ ಹೆಸರಿನ ಮುಂದೆ ತಮ್ಮ ಹೆಸರನ್ನು ಬಳಸದಂತೆ ತಾಕೀತು ಮಾಡಿದರು. ಅವರ ಹೆಸರು ಇಲ್ಲದೆ ನನಗೆ ಅಸ್ತಿತ್ವವೇ ಇಲ್ಲ ಎಂದು ಹೀಯಾಳಿಸಿದ್ದಾರೆ. ಈ ಬಗ್ಗೆ ಮಾತನಾಡಲು ಇಷ್ಟಪವಿಲ್ಲವಾದರೂ ಮಾತನಾಡಲೇಬೇಕಾದ ಪರಿಸ್ಥಿತಿ ಬಂದಿದೆ' ಎಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.

'ನಾನು ಹತ್ತು ವರ್ಷವಿದ್ದಾಗಲೇ ನನ್ನ ತಂದೆ ನಮ್ಮ ಬದುಕಿನಿಂದ ಹೊರ ಹೋದರು. ಆದರೂ, ಚುನಾವಣೆ ಸಂದರ್ಭದಲ್ಲಿ ಕರೆದಾಗ ಅವರ ಪರ ಪ್ರಚಾರ ಮಾಡಿದ್ದೆ. ಅವರಿಷ್ಟಕ್ಕೆ ಅನುಗುಣವಾಗಿ ಕೆಲಸ ಮಾಡಿದಾಗ ಎಲ್ಲವೂ ಚೆನ್ನಾಗಿತ್ತು. ಈಗ 24 ವರ್ಷದ ನಂತರ ನನ್ನ ಬಗ್ಗೆ ಯೋಚಿಸಿದ್ದಕ್ಕೆ ಆದರ್ಶ ಮಗಳಾಗದೆ ಯಾರಿಗೂ ಬೇಡವಾಗಿದ್ದೇನೆ. ತಂದೆ ಹೆಸರನ್ನು ಬಳಸಬಾರದೆಂಬ ಮಾತು ಬರುತ್ತಿವೆ' ಎಂದಿದ್ದಾರೆ.

'ಈ ರೀತಿ ಕಾಮೆಂಟ್ ಮಾಡುತ್ತಿರುವವರು ಯಾರೆಂದು ಗೊತ್ತು. ಅವರೆಲ್ಲರೂ ಒಂದು ಕಡೆ ಸೇರಿ ನನ್ನ ಆಧಾರ್, ಪಾಸ್‌ಪೋರ್ಟ್, ಜನನ ಪ್ರಮಾಣಪತ್ರ ಸೇರಿದಂತೆ ಹಲವು ಕಡೆ ತಂದೆ ಹೆಸರನ್ನು ಹೇಗೆ ತೆಗೆಯಬೇಕೆಂದು ಹೇಳಲಿ. ಹೆಸರು ತೆಗೆದರೆ ಅವರು ನನ್ನ ತಂದೆ ಎಂಬ ಸತ್ಯ ಇಲ್ಲವಾಗುತ್ತದೆಯೇ. 24 ವರ್ಷದ ಹಿಂದೆ ಅವರ ಜೀವನದಿಂದ ನನ್ನನ್ನು ತೆಗೆದುಬಿಟ್ಟಿರಿ. ಈಗ ಹೆಸರಿನ ಮುಂದೆಯೇ ಅವರನ್ನು ತೆಗೆಯಲು ಮುಂದಾಗಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

ಕೈ ಸೇರಲು ಯತ್ನ: ರಾಜ್ಯದಲ್ಲಿ ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ಸಕ್ರಿಯವಾಗಿದ್ದ ನಿಶಾ, ಕಾಂಗ್ರೆಸ್ ಸೇರಲು ಪ್ರಯತ್ನಿಸಿದ್ದರು. ಕಾಂಗ್ರೆಸ್ ನಾಯಕರ ಜೊತೆಯೂ ಕಾಣಿಸಿಕೊಂಡಿದ್ದರು. ಪಕ್ಷ ಸೇರ್ಪಡೆ ಕುರಿತು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದರು.

ಈ ಕುರಿತು ಆಗ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದ ಶಿವಕುಮಾರ್, 'ತಂದೆ–ಮಗಳನ್ನು ದೂರ ಮಾಡಿದ ಅಪಕೀರ್ತಿ ನನಗೆ ಬೇಡ ಎಂದು ಸುಮ್ಮನಿದ್ದೇನೆ' ಎಂದಿದ್ದರು.


'ಮೋದಿ ಭೇಟಿ ಮಾಡಿಸಲಿಲ್ಲ'

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಚಾರ ಮಾಡಿದ ನನ್ನ ತಾಯಿಯ ಕಪಾಳಕ್ಕೆ ತಂದೆ ಹೊಡೆದರು. ಚಿಕ್ಕಮ್ಮನ ಮಗ ನನ್ನ ತಮ್ಮನಿಗೆ ಹೊಡೆದ. ಮನೆಯಿಂದ ಸಾಮಗ್ರಿ ಹೊರ ಹಾಕಿದ್ದರು. ಚುನಾವಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಬಂದಾಗ ಅವರನ್ನು ಭೇಟಿ ಮಾಡಿಸಿ ಎಂದು ಕೇಳಿಕೊಂಡೆ. ಆದರೆ, ಬೇಕೆಂದೇ ಭೇಟಿ ಮಾಡಿಸಲಿಲ್ಲ. ಇದೆಂಥಾ ನ್ಯಾಯ' ಎಂದು ನಿಶಾ ಪ್ರಶ್ನಿಸಿದ್ದಾರೆ.


'ಮಗಳಿಗೆ ಯಾಕೆ ಒಂದು ದಾರಿ ತೋರಿಸಲಿಲ್ಲ ಎಂದು ನನ್ನ ತಂದೆ ಯನ್ನು ಪ್ರಶ್ನಿಸಿ. ನನ್ನಿಂದ ಮಾತ್ರ ಸರಿಯಾದುದನ್ನು ಬಯಸಿದರೆ ಸಾಕೇ? ಅವರು ಸರಿಯಾಗಿರಬೇಕಲ್ಲವೇ? ಮಾತನಾಡಲು ನನ್ನ ಬಳಿ ಸಾಕಷ್ಟಿದೆ. ನನ್ನನ್ನು ಶಾಂತವಾಗಿರಲು ಬಿಡಿ. ಇಲ್ಲದಿದ್ದರೆ, ನೀವು ಎಲ್ಲಿ ತಲೆ ಎತ್ತಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲವೊ ಅಲ್ಲಿಗೆ ವಿಡಿಯೊ ಕಳಿಸುತ್ತೇನೆ' ಎಂದು ತಂದೆಗೆ ಎಚ್ಚರಿಸಿದ್ದಾರೆ.

ಅನಿಲ ಸೋರಿಕೆ: ನಾಲ್ವರು ಸಾವು


ಪ್ರಜಾವಾಣಿ ವಾರ್ತೆ




ಕುಮಾರಸ್ವಾಮಿ



ಸ್ವಾತಿ



ಮಂಜುಳಾ



ಅರ್ಚನಾ

ಮೈಸೂರು: ನಗರದ ಯರಗನಹಳ್ಳಿಯ ಮನೆಯಲ್ಲಿ ಮಲಗಿದ್ದ ಒಂದೇ ಕುಟುಂಬದ ನಾಲ್ವರು ಉಸಿರುಗಟ್ಟಿ ಮೃತಪಟ್ಟಿದ್ದು, ಅಡುಗೆ ಅನಿಲ ಸೋರಿಕೆಯೇ ಕಾರಣ ಎನ್ನಲಾಗಿದೆ.

ಕುಮಾರಸ್ವಾಮಿ (45), ಪತ್ನಿ ಮಂಜುಳಾ (39) ಮಕ್ಕಳಾದ ಅರ್ಚನಾ (19), ಸ್ವಾತಿ (17) ಮೃತರು. ಚಿಕ್ಕಮಗಳೂರು ಜಿಲ್ಲೆಯ ಸಖರಾಯಪಟ್ಟಣ ಮೂಲದ ಕುಟುಂಬವು ಮೂವತ್ತು ವರ್ಷಗಳಿಂದ ಮೈಸೂರಿನಲ್ಲಿ ನೆಲೆಸಿತ್ತು.

'ಕುಮಾರಸ್ವಾಮಿ ಬಟ್ಟೆ ಇಸ್ತ್ರಿ ಕೆಲಸ ಮಾಡುತ್ತಿದ್ದರು. ಚಿಕ್ಕಮಗಳೂರಿಗೆ ಸಂಬಂಧಿಕರ ಮದುವೆಗೆ ಹೋಗಿದ್ದ ಅವರು ಸೋಮವಾರ ಸಂಜೆ ವಾಪಸ್ಸಾಗಿದ್ದರು. ನಂತರ ಸಂಬಂಧಿಕರ ಕರೆಯನ್ನೂ ಸ್ವೀಕರಿಸಿರಲಿಲ್ಲ. ಮಾಹಿತಿ ದೊರಕಿದ ನೆರೆ ಮನೆಯವರು ಬಾಗಿಲು ಬಡಿದಾಗ ಘಟನೆ ಬಗ್ಗೆ ತಿಳಿಯಿತು' ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದರು.

'ಅದು ಚಿಕ್ಕ ಮನೆ. ಮನೆಯ ಹಿಂಭಾಗ ಹಾಗೂ ಮುಂಭಾಗದಲ್ಲಷ್ಟೇ ಇದ್ದ ಕಿಟಕಿಗಳನ್ನು ಮುಚ್ಚಿ, ದಂಪತಿಯು ರೂಂನಲ್ಲಿ, ಮಕ್ಕಳಿಬ್ಬರು ಹಾಲ್‌ನಲ್ಲಿ ಮಲಗಿದ್ದರು. ಕಿವಿ, ಮೂಗು ಮತ್ತು ಬಾಯಲ್ಲಿ ರಕ್ತ ಸೋರಿ ಎಲ್ಲರೂ ಮೃತಪಟ್ಟಿದ್ದಾರೆ. ಮೃತದೇಹಗಳಲ್ಲಿ ಅನಿಲದ ವಾಸನೆ ಬರುತ್ತಿತ್ತು' ಎಂದರು.

'ಅಗ್ನಿಶಾಮಕದಳ ಬಂದು ಪರಿಶೀಲಿಸಿದಾಗ, ಮನೆಯಲ್ಲಿ ಮೂರು ಸಿಲಿಂಡರ್‌ಗಳಿದ್ದವು. ಒಂದರಲ್ಲಿ ಮಾತ್ರ ಸೋರಿಕೆಯಾಗಿತ್ತು. ಇಸ್ತ್ರಿ ಪೆಟ್ಟಿಗೆಗೂ ಅನಿಲವನ್ನೇ ಬಳಸುತ್ತಿದ್ದರು' ಎಂದರು. ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



❦ ಸುಭಾಷಿತ ❦

ನಿಮ್ಮ ಯೋಜನೆಯು ಒಂದು ವರ್ಷದ್ದಾಗಿದ್ದರೆ ಭತ್ತ ಬೆಳೆಯಿರಿ, 10 ವರ್ಷದ್ದಾಗಿದ್ದರೆ ಮರಗಳನ್ನು ಬೆಳೆಸಿ, 100 ವರ್ಷದ್ದಾಗಿದ್ದರೆ ಮಕ್ಕಳಿಗೆ ಶಿಕ್ಷಣ ಕೊಡಿ.

–ಕನ್‌ಫ್ಯೂಷಿಯಸ್

ಭ್ರೂಣಹತ್ಯೆ: ದೂರು ವಿಳಂಬ ಅಕ್ಷಮ್ಯ ವಿಚಾರಣೆ ದಿಕ್ಕುತಪ್ಪದೆ ನಡೆಯಲಿ

ಹೆಣ್ಣು ಭ್ರೂಣಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳ ವಿರುದ್ಧ ಮಂಡ್ಯದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ದೂರು ನೋಂದಣಿ (ಪಿಸಿಆರ್) ವಿಳಂಬವಾಗಿಯಾದರೂ ದಾಖಲಾಗಿದೆ. ದೂರು ಸಲ್ಲಿಕೆಯಲ್ಲಿ ಆಗಿರುವ ವಿಳಂಬವು ವ್ಯವಸ್ಥೆಯ ಸಂವೇದನಾಶೂನ್ಯ ಹಾಗೂ ಕ್ರಿಯಾಶೂನ್ಯ ಸ್ಥಿತಿಯನ್ನು ಸೂಚಿಸುವಂತಿದೆ. ಚುನಾವಣಾ ನೀತಿಸಂಹಿತೆ ನೆಪದಲ್ಲಿ ಹೆಣ್ಣು ಭ್ರೂಣಹತ್ಯೆ ಪ್ರಕರಣಗಳನ್ನು ದಾಖಲಿಸಲು ಮಂಡ್ಯದ ಉಪವಿಭಾಗಾಧಿಕಾರಿ ನಿರ್ಲಕ್ಷ್ಯ ವಹಿಸಿರುವುದು ಸ್ಪಷ್ಟವಾಗಿದೆ. ಗಂಭೀರ ಪ್ರಕರಣವನ್ನು ನಿಭಾಯಿಸುವಲ್ಲಿ ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ವಿಫಲವಾಗಿವೆ. ಲಿಂಗಪತ್ತೆ ಪರೀಕ್ಷೆ ನಡೆಸಿ ಹೆಣ್ಣು ಭ್ರೂಣಹತ್ಯೆ ನಡೆಸಿದ ಪ್ರಕರಣಗಳ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ, ಆರೋಗ್ಯ ಇಲಾಖೆಗೆ ವರದಿ ಸಲ್ಲಿಸಿ ಒಂದೂವರೆ ತಿಂಗಳಾದರೂ ನ್ಯಾಯಾಲಯದಲ್ಲಿ ದೂರು ದಾಖಲಾಗದೇ ಇದ್ದುದು ದುರದೃಷ್ಟಕರ. ಸಿಐಡಿ ವರದಿಯ ಆಧಾರದಲ್ಲಿ ಸ್ಥಳೀಯ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸುವುದು ಸಕ್ಷಮ ಪ್ರಾಧಿಕಾರದ ಹೊಣೆಗಾರಿಕೆ. ಆದರೆ, ಸಕ್ಷಮ ಪ್ರಾಧಿಕಾರ ತನ್ನ ಕರ್ತವ್ಯವನ್ನು ನಿಭಾಯಿಸಲು ನಿರ್ಲಕ್ಷ್ಯ ತೋರಿದ ಪರಿಣಾಮ, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಕೆಲವು ಆರೋಪಿಗಳು ಪಾಂಡವಪುರದಲ್ಲಿರುವ ಆರೋಗ್ಯ ಇಲಾಖೆಯ ವಸತಿ ಗೃಹವೊಂದರಲ್ಲಿ ತಮ್ಮ ಕೃತ್ಯ ಮುಂದುವರಿಸಿದ್ದರು ಎಂದು ಹೇಳಲಾಗಿದೆ. ಜಾಮೀನು ಪಡೆದವರು ಭ್ರೂಣಹತ್ಯೆ ಮುಂದುವರಿಸಿರುವ ಬಗ್ಗೆ ಪತ್ರಿಕೆಯಲ್ಲಿ ವರದಿ ಪ್ರಕಟಗೊಳ್ಳುವವರೆಗೂ ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ. ದೂರು ಸಲ್ಲಿಕೆ ವಿಳಂಬಕ್ಕೆ ನೀಡಿರುವ ಕಾರಣ ಕ್ಷುಲ್ಲಕವಾದುದು. ನ್ಯಾಯಾಲಯಕ್ಕೆ ದೂರು ಸಲ್ಲಿಸಬೇಕಾಗಿದ್ದ ಮಂಡ್ಯದ ಉಪವಿಭಾಗಾಧಿಕಾರಿಯನ್ನು ಚುನಾವಣೆ ಕಾರಣಕ್ಕೆ ಬೇರೆಡೆಗೆ ನಿಯೋಜಿಸಲಾಗಿತ್ತು. ಅವರ ಸ್ಥಾನಕ್ಕೆ ತಾತ್ಕಾಲಿಕವಾಗಿ ಬಂದಿರುವ ಅಧಿಕಾರಿ, ‘ಅಧಿಕಾರ ಪತ್ರ’ (ಪವರ್ ಆಫ್ ಅಟಾರ್ನಿ) ದೊರೆಯದ ಕಾರಣ ದೂರು ದಾಖಲಿಸಲು ಸಾಧ್ಯವಾಗಿಲ್ಲ ಎಂದು ಹೇಳಿದ್ದರು. ಸಕ್ಷಮ ಪ್ರಾಧಿಕಾರದಿಂದ ದೂರು ದಾಖಲಿಸುವ ಅಧಿಕಾರ ಹಸ್ತಾಂತರ ಆಗದಿರುವುದನ್ನು ವಿಳಂಬಕ್ಕೆ ಕಾರಣವನ್ನಾಗಿ ಜಿಲ್ಲಾ ಆರೋಗ್ಯಾಧಿಕಾರಿಯೂ ನೀಡಿದ್ದರು. ಭ್ರೂಣಹತ್ಯೆ ಪ್ರಕರಣದ ದಾಖಲಾತಿ ವಿಳಂಬದ ಲೋಪಕ್ಕೆ ತಾಂತ್ರಿಕ ಕಾರಣ ನೀಡುವುದನ್ನು ಒಪ್ಪುವುದು ಸಾಧ್ಯವಿಲ್ಲ. ಹೆಣ್ಣು ಭ್ರೂಣಹತ್ಯೆ ಆರೋಪದಂಥ ಗಂಭೀರ ಪ್ರಕರಣಗಳಲ್ಲಿ ದೂರು ದಾಖಲಿಸಲು ಮಾಡುವ ಅನಗತ್ಯ ವಿಳಂಬ ಕರ್ತವ್ಯಲೋಪವೇ ಸರಿ.



ಈ ಪ್ರಕರಣದ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗಿ ತಾರ್ಕಿಕ ಅಂತ್ಯ ಕಂಡರೆ, ಹೆಣ್ಣು ಭ್ರೂಣಹತ್ಯೆ ತಡೆಗಟ್ಟುವ ಹೋರಾಟ ಬಲಗೊಳ್ಳಲು ಸಾಧ್ಯ

ಆರು ತಿಂಗಳ ಹಿಂದೆ ಮಂಡ್ಯ ಜಿಲ್ಲೆಯ ಆಲೆಮನೆಯೊಂದರಲ್ಲಿ ಹೆಣ್ಣು ಭ್ರೂಣಲಿಂಗ ಪತ್ತೆ ಚಟುವಟಿಕೆ ಬೆಳಕಿಗೆ ಬಂದಿತ್ತು. ಪ್ರಕರಣವೊಂದರ ಜಾಡು ಹಿಡಿದು ಬೆಂಗಳೂರು ಪೊಲೀಸರು ನಡೆಸಿದ ದಾಳಿಯಲ್ಲಿ ಈ ಪ್ರಕರಣ ಹೊರಬಂದಿತ್ತು. ಅಲ್ಲಿಯವರೆಗೂ ಸ್ಥಳೀಯ ಪೊಲೀಸರಿಗೆ ಹಾಗೂ ಆರೋಗ್ಯ ಇಲಾಖೆಗೆ ಕುಕೃತ್ಯಗಳ ಸುಳಿವು ದೊರೆಯದಿರುವುದು ಆಶ್ಚರ್ಯಕರ. ಕೃತ್ಯಕ್ಕೆ ಸಂಬಂಧಿಸಿದಂತೆ 17 ಆರೋಪಿಗಳನ್ನು ಬಂಧಿಸಲಾಗಿತ್ತು. ಲಿಂಗಪತ್ತೆ ಹಾಗೂ ಹೆಣ್ಣು ಭ್ರೂಣಹತ್ಯೆಯ ಜಾಲ ಮಂಡ್ಯ ಜಿಲ್ಲೆಗೆ ಸೀಮಿತವಾಗಿರದೆ, ಬೆಂಗಳೂರು, ಮೈಸೂರು, ರಾಮನಗರ ಜಿಲ್ಲೆಗಳಲ್ಲೂ ಸಕ್ರಿಯವಾಗಿರುವುದು ಪೊಲೀಸ್ ತನಿಖೆಯಲ್ಲಿ ತಿಳಿದುಬಂದಿತ್ತು. ಮಂಡ್ಯ ಜಿಲ್ಲೆಯ 32ಕ್ಕೂ ಹೆಚ್ಚು ಸಗಟು ಔಷಧಿ ಮಳಿಗೆಗಳಲ್ಲಿ, ಗರ್ಭಪಾತಕ್ಕೆ ಬಳಸುವ ಸಾವಿರಾರು ‘ಎಂಟಿಪಿ ಕಿಟ್’ಗಳನ್ನು ಕೇವಲ ಒಂದು ವರ್ಷದ ಅವಧಿಯಲ್ಲಿ ಮಾರಾಟ ಮಾಡಲಾಗಿತ್ತು. ಪ್ರಕರಣ ಬೆಳಕಿಗೆ ಬಂದ ಮೇಲೆ ಈ ಕಿಟ್‌ಗಳ ಮಾರಾಟಕ್ಕೆ ಜಿಲ್ಲೆಯಲ್ಲಿ ನಿರ್ಬಂಧ ವಿಧಿಸಲಾಯಿತಾದರೂ, ಹೊರ ಜಿಲ್ಲೆಗಳ ಔಷಧಿ ಅಂಗಡಿಗಳಿಂದ ಕಿಟ್ ಖರೀದಿಸಿ ತಂದು ಭ್ರೂಣಹತ್ಯೆ ನಡೆಸಲಾಗುತ್ತಿತ್ತು ಎನ್ನಲಾಗಿದೆ. ಕಿಟ್‌ಗಳ ಮಾರಾಟಕ್ಕೆ ಸಂಬಂಧಿಸಿದಂತೆ ಏಕರೂಪ ಸಂಹಿತೆ ಇಲ್ಲದಿರುವುದರ ಲಾಭವನ್ನು ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾದವರು ಬಳಸಿಕೊಳ್ಳುತ್ತಿದ್ದರು. ರಾಜ್ಯದ ಗಮನಸೆಳೆದ ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. ಆದರೆ, ಸಿಐಡಿ ವರದಿಯ ನಂತರದಲ್ಲಿ ಸಕ್ಷಮ ಪ್ರಾಧಿಕಾರ ದೂರು ದಾಖಲಿಸುವಲ್ಲಿ ವಿಳಂಬ ಮಾಡಿದೆ. ಆರೋಗ್ಯ ಇಲಾಖೆಯ ಅಧಿಕಾರಿಗಳೂ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಸಂವಹನದ ಕೊರತೆಯಿಂದಾಗಿ ಗಂಭೀರ ಪ್ರಕರಣದ ದೂರು ದಾಖಲಾತಿ ಪ್ರಕ್ರಿಯೆ ದೀರ್ಘಕಾಲ ನನೆಗುದಿಗೆ ಬೀಳುವಂತಾಯಿತು. ದೂರು ದಾಖಲಿಸುವಲ್ಲಿ ಆದ ನಿರ್ಲಕ್ಷ್ಯವು ಪ್ರಕರಣದ ವಿಚಾರಣೆ ಸಂದರ್ಭದಲ್ಲೂ ಮುಂದುವರಿಯಬಾರದು. ವಿಚಾರಣೆ ಸರಿಯಾದ ದಿಕ್ಕಿನಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು ಹಾಗೂ ಕೃತ್ಯದಲ್ಲಿ ಭಾಗಿಯಾದ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ಈ ಪ್ರಕರಣದ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗಿ ತಾರ್ಕಿಕ ಅಂತ್ಯ ಕಂಡರೆ, ಹೆಣ್ಣು ಭ್ರೂಣಹತ್ಯೆ ತಡೆಗಟ್ಟುವ ಹೋರಾಟ ಬಲಗೊಳ್ಳುವುದು ಸಾಧ್ಯವಾಗುತ್ತದೆ.

ವಿದೇಶಗಳಿಂದ ಪ್ರತಿರೋಧ ಇಲ್ಲದೆ ಚೀನಾ ತನ್ನ ಉತ್ಪನ್ನ ಮಾರಾಟ ಮಾಡುವ ಕಾಲ ಮುಗಿದುಹೋಗಿದೆ

ಚೀನಾ: ಆರ್ಥಿಕ ಪವಾಡದ ಏಳು–ಬೀಳು



ವಿಶ್ಲೇಷಣೆ

ಆ್ಯನ್ ಸ್ಟೀವನ್ಸನ್–ಯಾಂಗ್

ಚೀನಾಕ್ಕೆ ಈಚೆಗೆ ಪ್ರತ್ಯೇಕವಾಗಿ ಭೇಟಿ ನೀಡಿದ್ದ ಅಮೆರಿಕ ವಿದೇಶಾಂಗ ಸಚಿವ ಆ್ಯಂಟನಿ ಬ್ಲಿಂಕನ್ ಮತ್ತು ಹಣಕಾಸು ಸಚಿವೆ ಜಾನೆಟ್ ಯೆಲನ್ ಅವರು ಒಂದೇ ಸಂದೇಶ ರವಾನಿಸಿದರು. ತಯಾರಿಕಾ ವಲಯದಲ್ಲಿ ಚೀನಾ ಹೊಂದಿರುವ ಅತಿಯಾದ ಸಾಮರ್ಥ್ಯದ ಕಾರಣದಿಂದಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಚೀನಾದ ಕಡಿಮೆ ವೆಚ್ಚದ ಉತ್ಪನ್ನಗಳು ವಿಪರೀತವಾಗುತ್ತಿವೆ, ಜಾಗತಿಕ ವ್ಯಾಪಾರ ವಹಿವಾಟಿಗೆ ಸಮಸ್ಯೆಯಾಗುತ್ತಿದೆ, ಅಮೆರಿಕದ ಉದ್ದಿಮೆಗಳು ಹಾಗೂ ಕಾರ್ಮಿಕರು ಸ್ಪರ್ಧೆ ಒಡ್ಡಲು ಹೆಣಗುತ್ತಿದ್ದಾರೆ ಎಂಬುದು ಆ ಸಂದೇಶ.


ಆದರೆ ಅವರು ಹೇಳಿದ ಮಾತು ಚೀನಾದ ನಾಯಕರಿಗೆ ಇಷ್ಟವಾಗಲಿಲ್ಲ. ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಬೇಜವಾಬ್ದಾರಿಯ ನೀತಿಗಳು, ಕಮ್ಯುನಿಸ್ಟ್ ಪಕ್ಷ ಹೊಂದಿರುವ ಅತಿಯಾದ ನಿಯಂತ್ರಣ ಮತ್ತು ಸುಧಾರಣೆಯ ಭರವಸೆಗಳನ್ನು ಈಡೇರಿಸದೇ ಇರುವುದು ಚೀನಾದ ಅರ್ಥವ್ಯವಸ್ಥೆಯನ್ನು ಮುಂದೆ ಸಾಗಲಾಗದ ಸ್ಥಿತಿಗೆ ತಂದಿರಿಸಿವೆ. ಅಲ್ಲಿನ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದಿದೆ, ಆರ್ಥಿಕ ಬೆಳವಣಿಗೆ ನಿಧಾನವಾಗುತ್ತಿದೆ. ಇದರಿಂದ ಹೊರಬರಲು ಚೀನಾದ ನಾಯಕರಿಗೆ ಇರುವ ಒಂದೇ ದಾರಿ ಕಡಿಮೆ ಬೆಲೆಗೆ ರಫ್ತು ಉತ್ತೇಜಿಸುವುದು.

ಅಂದರೆ, ಚೀನಾದಿಂದ ರಫ್ತಾಗುವ ಸರಕುಗಳ ಪ್ರವಾಹ ಮುಂದುವರಿಯುತ್ತದೆ, ಅಮೆರಿಕ ಹಾಗೂ ಇತರ ವಾಣಿಜ್ಯ ಪಾಲುದಾರರ ಜೊತೆ ಬಿಕ್ಕಟ್ಟು ಹೆಚ್ಚಲಿದೆ, ನಿರಾಶಾದಾಯಕ ಆರ್ಥಿಕ ಚಿತ್ರಣ ಕಂಡು ಚೀನಾದ ಜನ ಇನ್ನಷ್ಟು ಅಸಂತುಷ್ಟರಾಗುತ್ತಾರೆ, ಕಮ್ಯುನಿಸ್ಟ್ ಪಕ್ಷದ ನಾಯಕರು ಇನ್ನಷ್ಟು ದಮನಕಾರಿ ಕ್ರಮಗಳಿಗೆ ಮುಂದಾಗುತ್ತಾರೆ. ಸಮಸ್ಯೆಯ ಬೇರು ಇರುವುದು ಕಮ್ಯುನಿಸ್ಟ್ ಪಕ್ಷವು ಚೀನಾದ ಅರ್ಥವ್ಯವಸ್ಥೆಯ ಮೇಲೆ ಅತಿಯಾದ ಹಿಡಿತ ಹೊಂದಿರುವಲ್ಲಿ. ಆದರೆ ಅದು ಬದಲಾಗುವುದಿಲ್ಲ. ಆ ಹಿಡಿತವು ಚೀನಾದ ರಾಜಕೀಯ ವ್ಯವಸ್ಥೆಯ ಅವಿಭಾಜ್ಯ ಅಂಗ; ಹಿಡಿತವು ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಅಧಿಕಾರಾವಧಿಯಲ್ಲಿ ಹೆಚ್ಚಾಗಿದೆ. ಬೆಳವಣಿಗೆ ಸಾಧಿಸುವುದಕ್ಕೆ ಬಹುತೇಕ ಅರ್ಥಶಾಸ್ತ್ರಜ್ಞರು ಸೂಚಿಸುವುದು ಖಾಸಗಿ ವಲಯವನ್ನು ಮುಕ್ತವಾಗಿಸುವ ಹಾಗೂ ಚೀನಾದ ಗ್ರಾಹಕರಿಗೆ ಹೆಚ್ಚು ಖರ್ಚು ಮಾಡಲು ಶಕ್ತಿ ತುಂಬುವ ಕ್ರಮಗಳನ್ನು. ಆದರೆ ಇದು ಅಲ್ಲಿ ಒಪ್ಪಿತವಾಗುವುದಿಲ್ಲ.

1989ರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಬದಲಾಗಲು ಸುವರ್ಣಾವಕಾಶ ಇತ್ತು. ಅದಕ್ಕಿಂತ ದಶಕದ ಹಿಂದೆ ಆರಂಭವಾದ ಸುಧಾರಣೆಗಳು ಖಾಸಗಿ ವಲಯದ ಬೆಳವಣಿಗೆಗೆ, ಹೊಸ ಸ್ವಾತಂತ್ರ್ಯದ ಬಯಕೆಗೆ ಇಂಬು ಕೊಟ್ಟಿದ್ದವು ಎಂಬುದನ್ನು ತಿಯಾನನ್‌ಮೆನ್ ಸ್ಕ್ವೇರ್ ಪ್ರತಿಭಟನೆಗಳು ತೋರಿಸಿದ್ದವು. ಇದಕ್ಕೆ ಪ್ರತಿಕ್ರಿಯೆಯಾಗಿ ಸರ್ಕಾರಿ ಸಂಸ್ಥೆಗಳನ್ನು ಉದಾರೀಕರಣಕ್ಕೆ ತೆರೆದಿದ್ದರೆ ಪಕ್ಷದ ನಿಯಂತ್ರಣ ಕುಗ್ಗುತ್ತಿತ್ತು. ಪಕ್ಷಕ್ಕೆ ಅದು ಬೇಕಾಗಿರಲಿಲ್ಲ. ಚೀನಾದ ನಾಯಕರು ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಲು, ಪಕ್ಷದ ನಿಯಂತ್ರಣವನ್ನು ಇನ್ನಷ್ಟು ಬಲಪಡಿಸಲು, ಅರ್ಥವ್ಯವಸ್ಥೆಗೆ ಬಲ ತುಂಬಲು ಸರ್ಕಾರದ ಹೂಡಿಕೆಯನ್ನೇ ನೆಚ್ಚಿಕೊಳ್ಳಲು ತೀರ್ಮಾನಿಸಿದರು.

ಇದರ ಬಗ್ಗೆ ಬಹುಕಾಲ ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ಆದರೆ, ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳು ತಲೆ ಎತ್ತಿದಾಗ ಜನರನ್ನು ಸಮಾಧಾನಪಡಿಸಲು ಚೀನಾದ ಅಧಿಕಾರಿಗಳು ಉದ್ಯಮ ಹಾಗೂ ರಿಯಲ್ ಎಸ್ಟೇಟ್ ವಲಯದ ಮೇಲೆ ಹಣ ಸುರಿದರು. ಹೂಡಿಕೆಯ ಕಾರಣದ ಬೆಳವಣಿಗೆಯು ಚೆನ್ನಾಗಿ ಕಂಡಿತು. ಆದರೆ ಅದು ಚೀನಾಕ್ಕೆ ಜೀರ್ಣಿಸಿಕೊಳ್ಳಲು ಸಾಧ್ಯವಾಗುವುದಕ್ಕಿಂತ ಹೆಚ್ಚಾಗಿತ್ತು. ಇದರ ಪರಿಣಾಮವಾಗಿ ಚೀನಾದ ಚಹರೆ ಗಾಸಿಗೊಳಗಾಯಿತು. ಖಾಲಿ ನಗರಗಳು, ಜನರಿಲ್ಲದ ಹೆದ್ದಾರಿಗಳು, ಕೆಲವೇ ವಿಮಾನಗಳಿರುವ ನಿಲ್ದಾಣಗಳು ಕಂಡುಬಂದವು. ಉದ್ಯಮದ ಮೇಲಿನ ಹೂಡಿಕೆಯ ಪರಿಣಾಮವಾಗಿ ರಫ್ತು ಬೃಹದಾಕಾರವಾಗಿ ಬೆಳೆಯಿತು. ವಿದೇಶಿ ತಯಾರಕರ ಪ್ರಾಬಲ್ಯವಿದ್ದ ಉದ್ದಿಮೆಗಳಲ್ಲಿ ಚೀನಾ ಬೆಳವಣಿಗೆ ಕಂಡಿತು. ಅಮೆರಿಕ, ಯುರೋಪ್ ಮತ್ತು ಜಪಾನಿನ ಕಂಪನಿಗಳು ತಮ್ಮ ತಾಂತ್ರಿಕ ಪರಿಣತಿಯನ್ನು ಪ್ರಜ್ಞಾಪೂರ್ವಕವಾಗಿ ಚೀನಾಕ್ಕೆ ನೀಡಿದವು. ಇದಕ್ಕೆ ಪ್ರತಿಯಾಗಿ ತಮಗೆ ಬೆಳೆಯುತ್ತಲೇ ಇರುವ ಚೀನಾದ ಮಾರುಕಟ್ಟೆ ಲಭ್ಯವಾಗುತ್ತದೆ ಎಂದು ಅವು ಭಾವಿಸಿದ್ದವು. ಇದರಿಂದಾಗಿ ಪಾಶ್ಚಿಮಾತ್ಯರಲ್ಲಿ ತಯಾರಿಕೆ ಕುಸಿಯಿತು, ಇತ್ತ ಚೀನಾ ತನ್ನ ಮಾರುಕಟ್ಟೆಯನ್ನು ರಕ್ಷಿಸಿಕೊಂಡಿತು. ಚೀನಾದಿಂದ ಬರುತ್ತಿದ್ದ ಅಗ್ಗದ ಉತ್ಪನ್ನಗಳು ಅಮೆರಿಕದ ಹಣದುಬ್ಬರವನ್ನು ಒಂದು ತಲೆಮಾರಿನ ಕಾಲ ಕಡಿಮೆ ಮಟ್ಟದಲ್ಲಿ ಇರಿಸಿದವು. ಚೀನಾದ ಆರ್ಥಿಕ ಬೆಳವಣಿಗೆಯು ಕಾಲಕ್ರಮೇಣ ರಾಜಕೀಯ ಉದಾರೀಕರಣಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಪಶ್ಚಿಮದ ಜಗತ್ತು ಭಾವಿಸಿತು. ಆದರೆ ಅದು ಸಾಕಾರಗೊಳ್ಳಲೇ ಇಲ್ಲ.

ಸರ್ಕಾರದ ಹೂಡಿಕೆ ಯಜ್ಞಕ್ಕೆ ಹಣ ಹೊಂದಿಸಲು ಚೀನಾ, ಸ್ಥಳೀಯ ಮಟ್ಟದಲ್ಲಿ ಜಮೀನು ಅಡ ಇರಿಸುವುದಕ್ಕೆ ಅವಕಾಶ ನೀಡಿತು. ಸ್ಥಳೀಯ ಸರ್ಕಾರಗಳು ಹುಚ್ಚು ಹತ್ತಿಸಿಕೊಂಡಂತೆ ಸಾಲ ಪಡೆದವು, ಸಾಲ ಮರುಪಾವತಿಗೆ ನಿರ್ದಿಷ್ಟ ಯೋಜನೆಗಳೇ ಇರಲಿಲ್ಲ. ಈಗ ಅವುಗಳಲ್ಲಿ ಹಲವು ಸರ್ಕಾರಗಳು ಸಾಲದಲ್ಲಿ ಮುಳುಗಿವೆ. ಅವು ಹಿರಿಯ ನಾಗರಿಕರ ಆರೋಗ್ಯಸೇವಾ ವೆಚ್ಚ ತಗ್ಗಿಸುತ್ತಿವೆ, ಬಸ್ ಸಂಚಾರ ತಗ್ಗಿಸುತ್ತಿವೆ, ಶಿಕ್ಷಕರಿಗೆ ಸರಿಯಾಗಿ ಸಂಬಳ ಆಗುತ್ತಿಲ್ಲ, ನಾಗರಿಕ ಸೇವೆಗಳಲ್ಲಿ ಇರುವವರ ಸಂಬಳವನ್ನು ಕಡಿಮೆ ಮಾಡಲಾಗಿದೆ.



ಉದ್ಯೋಗಾವಕಾಶ ಹೆಚ್ಚಿಸಲು ಪಕ್ಷವು ಸ್ಥಳೀಯ ಸರ್ಕಾರಗಳಿಗೆ ಖಾಸಗಿ ಉದ್ಯಮ ಸ್ಥಾಪನೆಗೆ ಪ್ರೋತ್ಸಾಹಿಸುವಂತೆ ಕಳೆದ ಎರಡು ವರ್ಷಗಳಿಂದ ಹೇಳುತ್ತಿದೆ. ಇದರ ಪರಿಣಾಮಗಳು ನಿರೀಕ್ಷಿತವಾಗಿಯೇ ಇವೆ. ಉತ್ತರ ಚೀನಾದ ಪ್ರಾಂತ್ಯವೊಂದರಲ್ಲಿ ಗ್ರಾಮ ಕಾರ್ಯದರ್ಶಿಯೊಬ್ಬರು ರಾಜಧಾನಿಯಿಂದ ಬಂದ ಆದೇಶವನ್ನು ಪಾಲಿಸುವ ಹುಮ್ಮಸ್ಸಿನಲ್ಲಿ ತಮ್ಮ ಸ್ನೇಹಿತರು ಮತ್ತು ಸಂಬಂಧಿಕರಿಗೆ ನಕಲಿ ಕಂಪನಿಗಳನ್ನು ಆರಂಭಿಸಲು ಹೇಳಿದ್ದರು ಎನ್ನಲಾಗಿದೆ. ಹಳ್ಳಿಯ ಒಬ್ಬರು ಮೂರು ಅಂಗಡಿಗಳನ್ನು ಒಂದೇ ವಾರದಲ್ಲಿ ಆರಂಭಿಸಿದರು, ಇನ್ನೊಬ್ಬ ವ್ಯಕ್ತಿ 20 ವಾಣಿಜ್ಯ ಘಟಕಗಳಿಗೆ ಪರವಾನಗಿ ಕೋರಿ ಅರ್ಜಿ ಸಲ್ಲಿಸಿದರು.

ಚೀನಾದ ನಗರ ಪ್ರದೇಶಗಳ ಶೇಕಡ 21ರಷ್ಟು ಯುವಕರಿಗೆ ಉದ್ಯೋಗವಿಲ್ಲ ಎಂಬುದನ್ನು ಸರ್ಕಾರದ ತಿಂಗಳ ಅಂಕಿ–ಅಂಶಗಳು ಬಹಿರಂಗಪಡಿಸಿದ ನಂತರ, ಆ ಅಂಕಿ–ಅಂಶ ಪ್ರಕಟಿಸುವುದನ್ನೇ ಅಧಿಕಾರಿಗಳು ನಿಲ್ಲಿಸಿಬಿಟ್ಟರು. ಈ ವರ್ಷದ ಆರಂಭದಲ್ಲಿ ಈ ಪದ್ಧತಿಯನ್ನು ಹೊಸ ಕ್ರಮದಲ್ಲಿ ಮತ್ತೆ ಆರಂಭಿಸಲಾಯಿತು. ಜಾದೂ ನಡೆಯಿತು! ನಿರುದ್ಯೋಗದ ಪ್ರಮಾಣ ಶೇ 15ಕ್ಕೆ ತಗ್ಗಿತ್ತು.


ರಿಯಲ್ ಎಸ್ಟೇಟ್ ಮಾರುಕಟ್ಟೆ ಕುಸಿಯುತ್ತಿರುವ ಕಾರಣ ಸರ್ಕಾರವು ಈ ವಲಯಕ್ಕೆ ಉತ್ತೇಜನ ನೀಡುತ್ತಲೇ ಇರಲು ಸಾಧ್ಯವಿಲ್ಲ. ಸರ್ಕಾರವು ಗ್ರಾಹಕರ ಬೇಡಿಕೆ ಹೆಚ್ಚಿಸುವ ಕ್ರಮದ ಬಗ್ಗೆ ಆಲೋಚಿಸುತ್ತಿದೆಯಾದರೂ ಜನರು ವೆಚ್ಚಕ್ಕೆ ಮುಂದಾಗುತ್ತಿಲ್ಲ. ಹೀಗಾಗಿ ಸರ್ಕಾರವು ಮತ್ತೆ ತಯಾರಿಕಾ ವಲಯವನ್ನು ನೆಚ್ಚಿಕೊಳ್ಳುತ್ತಿದೆ. ಕೈಗಾರಿಕಾ ಸಾಮರ್ಥ್ಯವೃದ್ಧಿಗೆ ಹಣ ಸುರಿಯುತ್ತಿದೆ. ಆಂತರಿಕ ಬೇಡಿಕೆ ತಗ್ಗಿರುವ ಕಾರಣ ಈ ಉತ್ಪನ್ನಗಳಲ್ಲಿ ಹೆಚ್ಚಿನವನ್ನು ರಫ್ತು ಮಾಡಬೇಕಿದೆ. ಆದರೆ, ಚೀನಾ ತನ್ನ ಉತ್ಪನ್ನಗಳನ್ನು ವಿದೇಶಗಳಿಂದ ಪ್ರತಿರೋಧ ಎದುರಿಸದೆ ಮಾರಾಟ ಮಾಡುವ ಕಾಲ ಮುಗಿದುಹೋಗಿದೆ. ಮೇಡ್ ಇನ್ ಚೀನಾ ಉತ್ಪನ್ನಗಳಿಂದ ತಮ್ಮ ಮಾರುಕಟ್ಟೆಗಳನ್ನು ರಕ್ಷಿಸಿಕೊಳ್ಳಲು ಹಲವು ದೇಶಗಳು ಕ್ರಮ ಕೈಗೊಳ್ಳುತ್ತಿವೆ.

ಚೀನಾದ ಆರ್ಥಿಕ ಮಾದರಿಯು ಈಗಲೂ ಬಹುವಾಗಿ ನೆಚ್ಚಿಕೊಂಡಿರುವುದು ಚಾಲ್ತಿಯಲ್ಲಿ ಇರುವ ತಂತ್ರಜ್ಞಾನ ನಕಲು ಮಾಡುವುದನ್ನು. ದೀರ್ಘಾವಧಿ ಸಂಶೋಧನೆ, ಅದರಿಂದಾಗಿ ಸಿಗುವ ವಾಣಿಜ್ಯ ಪ್ರಯೋಜನಗಳನ್ನು ಅದು ನೆಚ್ಚಿಕೊಂಡಿಲ್ಲ. ಹೀಗಾಗಿ ಚೀನಾದ ಪಾಲಿಗೆ ಉಳಿದುಕೊಳ್ಳುವ ಮಾರ್ಗ ಬೃಹತ್ ಪ್ರಮಾಣದಲ್ಲಿ ತಯಾರಿಕೆಗೆ ಮುಂದಾಗುವುದು ಮಾತ್ರ.

ಚೀನಾದ ನಾಯಕರು ದೇಶದ ಕರೆನ್ಸಿಯ ಮೌಲ್ಯವನ್ನು ತಗ್ಗಿಸುವ ಆರ್ಥಿಕ ಒತ್ತಡವನ್ನು ಎದುರಿಸಲಿದ್ದಾರೆ. ಇದರ ಪರಿಣಾಮವಾಗಿ, ಚೀನಾದಲ್ಲಿ ತಯಾರಾಗುವ ಉತ್ಪನ್ನಗಳು ಅಮೆರಿಕದ ಡಾಲರ್ ಲೆಕ್ಕದಲ್ಲಿ ಇನ್ನಷ್ಟು ಅಗ್ಗವಾಗಲಿವೆ. ಆಗ ಚೀನಾದ ರಫ್ತು ಪ್ರಮಾಣವು ಜಾಸ್ತಿ ಆಗುತ್ತದೆ, ಚೀನಾದ ವಾಣಿಜ್ಯ ಪಾಲುದಾರ ದೇಶಗಳ ಅಸಮಾಧಾನ ಹೆಚ್ಚಾಗುತ್ತದೆ. ಇದರ ಜೊತೆಯಲ್ಲೇ, ಕರೆನ್ಸಿಯ ಮೌಲ್ಯವನ್ನು ತಗ್ಗಿಸುವುದರ ಪರಿಣಾಮವಾಗಿ ವಿದೇಶಿ ಉತ್ಪನ್ನಗಳು ಹಾಗೂ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳುವ ವೆಚ್ಚ ಜಾಸ್ತಿ ಆಗುತ್ತದೆ. ಆಗ ಚೀನಾದ ಗ್ರಾಹಕರ ಹಾಗೂ ಅಲ್ಲಿನ ಉದ್ದಿಮೆಗಳ ಶಕ್ತಿ ಉಡುಗುತ್ತದೆ. ಅಲ್ಲಿನ ಶ್ರೀಮಂತರಿಗೆ ತಮ್ಮ ಹಣವನ್ನು ಚೀನಾದಿಂದ ಹೊರಗೆ ಸಾಗಿಸುವುದಕ್ಕೆ ಉತ್ತೇಜನ ಸಿಕ್ಕಂತೆ ಆಗುತ್ತದೆ.

ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ



ಸೊಳ್ಳೆ ಕಾಟ

• ಸಿ.ಎನ್.ರಾಜು

ಮನೆಗೆ ಬಂದ ಆರೋಗ್ಯ ಕಾರ್ಯಕರ್ತೆ, ‘ಊರಲ್ಲಿ ಡೆಂಗಿ, ಮಲೇರಿಯಾ ಹರಡ್ತಿವೆ, ಸೊಳ್ಳೆ ಉತ್ಪಾದನೆಯಾಗದಂತೆ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಿ, ಸೊಳ್ಳೆ ಸಂತತಿ ನಾಶ ಮಾಡಿ...’ ಎಂದು ಕರಪತ್ರ ಕೊಟ್ಟರು.

‘ಇತರೆ ಜೀವಸಂಕುಲ ಅವಸಾನದ ಅಂಚಿನಲ್ಲಿದ್ದರೆ ಸೊಳ್ಳೆ ಸಂತತಿ ಬೆಳೆಯುತ್ತಲೇ ಇದೆ’ ಅಂದ ಗಿರಿ.

‘ಮನೆಗೆ ಕಳ್ಳ ನುಗ್ಗಿದರೆ ಪೊಲೀಸರಿಗೆ ದೂರು ಕೊಡಬಹುದು, ಸೊಳ್ಳೆ ನುಗ್ಗಿದರೆ ನೀವೇ ಕಾಪಾಡಿಕೊಳ್ಳಬೇಕು, ಜಾಗೃತರಾಗಿರಿ’.

‘ಸೊಳ್ಳೆ ಕಚ್ಚಿದರೂ ಪರಿವೆಯೇ ಇಲ್ಲದೆ ಮೈಮರೆತು ಟಿ.ವಿ.ಯಲ್ಲಿ ಐಪಿಎಲ್ ಮ್ಯಾಚ್ ನೋಡುವ ನೀವು ಮೊದಲು ಜಾಗೃತರಾಗಬೇಕು’ ಗಂಡನಿಗೆ ಎಚ್ಚರಿಸಿದಳು ಅನು.

‘ಕ್ರಿಕೆಟ್ ಮ್ಯಾಚ್ ನೋಡಿ ಏನು ಪ್ರಯೋಜನ? ಒಂದು ಸೊಳ್ಳೆಯನ್ನೂ ಕ್ಯಾಚ್ ಹಿಡಿದು ಔಟ್ ಮಾಡಲಿಲ್ಲ, ಪ್ರತಿ ಸಲ ಕ್ಯಾಚ್ ಡ್ರಾಪ್ ಮಾಡ್ತೀರಿ’ ಮಗಳು ನಿಮ್ಮಿ ನಕ್ಕಳು.

‘ಬಾಲ್ ಹಿಡಿಯುವಷ್ಟು ಸುಲಭವಲ್ಲ, ಸೊಳ್ಳೆ ಹಿಡಿಯುವುದು’.

‘ಬೌಂಡರಿ, ಸಿಕ್ಸರ್ ಬಾರಿಸುವುದಿರಲಿ, ಸೊಳ್ಳೆ ಬ್ಯಾಟ್ ಹಿಡಿದು ನಾಲ್ಕೈದು ಸೊಳ್ಳೆಗಳನ್ನೂ ಬಾರಿಸಲಿಲ್ಲ ನೀವು’ ಅನು ರೇಗಿದಳು.

‘ಆರೋಗ್ಯ ಆಂಟಿ, ಕೊರೊನಾ ಕಾಲದಲ್ಲಿ ಪಿಪಿಇ ಕಿಟ್ ಇತ್ತಲ್ಲ ಹಾಗೇ ನಿಮ್ಮಲ್ಲಿ ಸೊಳ್ಳೆ ಕಿಟ್ ಇಲ್ವಾ?’ ಪಮ್ಮಿ ಕೇಳಿದಳು.

‘ಇಲ್ಲ, ಸೊಳ್ಳೆ ತಡೆ ಕ್ರಮಗಳನ್ನು ನೀವೇ ಅನುಸರಿಸಿ ಆರೋಗ್ಯ ಕಾಪಾಡಿಕೊಳ್ಳಿ’.

‘ನಮ್ಮ ರಕ್ತಸಂಬಂಧಿಯೇನೋ ಎನ್ನುವಂತೆ ಸೊಳ್ಳೆಗಳು ಮುಲಾಜಿಲ್ಲದೆ ನಮ್ಮ ರಕ್ತ ಹೀರಿಬಿಡುತ್ತವೆ’ ಅನುಗೆ ಸಿಟ್ಟು.

‘ಆಂಟಿ, ಸೊಳ್ಳೆಗಳಿಗೆ ಯಾವ ಬ್ಲಡ್ ಗ್ರೂಪ್ ಇಷ್ಟ?’

‘ಸೊಳ್ಳೆಗಳು ಗ್ರೂಪಿಸಂ ಮಾಡಲ್ಲ, ಎಲ್ಲಾ ಗ್ರೂಪಿನ ಬ್ಲಡ್ ಹೀರಿಬಿಡುತ್ತವೆ’.

‘ಸಾಧಾರಣ ಸೊಳ್ಳೆ ಅಸಾಧಾರಣ ಕಾಟ ಕೊಡುತ್ತದೆ...’ ಗಿರಿಗೆ ಆತಂಕ.

‘ಹೌದು ಸಾರ್, ಸೊಳ್ಳೆಯ ಮೂತಿ ಚಿಕ್ಕದಾದರೂ ಫಜೀತಿ ದೊಡ್ಡದು, ಹುಷಾರಾಗಿರಿ...’ ಎಂದು ಹೇಳಿ ಆರೋಗ್ಯ ಕಾರ್ಯಕರ್ತೆ ಹೊರಟರು.

ದಿನದ ಟ್ವೀಟ್

ಗಡ್ಡಕ್ಕೆ ಬೆಂಕಿ ಬಿದ್ದಾಗ...

ಪುಣೆಯ ಪೋಶೆ ಕಾರು ಅಪಘಾತ ಪ್ರಕರಣದ ಬಳಿಕ, ಪ್ರತಿಷ್ಠಿತ ಕೋರೆಗಾಂವ್ ಪಾರ್ಕ್ ಪ್ರದೇಶದಲ್ಲಿರುವ ಅನಧಿಕೃತ ಪಬ್‌ಗಳು ಮತ್ತು ಬಾರ್‌ಗಳ ವಿರುದ್ಧ ಪುಣೆ ಮಹಾನಗರ ಪಾಲಿಕೆಯು ‘ಬುಲ್ಡೋಜರ್ ಕಾರ್ಯಾಚರಣೆ’ ಆರಂಭಿಸಿದೆ. ಈ ಪ್ರದೇಶದಲ್ಲಿ ಅನೇಕ ಪಬ್‌ಗಳು ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಲಾಗಿದೆ.

ಲಕ್ಷ್ಯ್ ಮೆಹ್ತಾ

ಕಿಡಿನುಡಿ

ಸಾರ್ವಜನಿಕರ ಹಿತದೃಷ್ಟಿಯಿಂದ ಹೊರಡಿಸಿರುವ ಪ್ರಕಟಣೆ: ಜನರು ರಾಜಕೀಯ ಮತ್ತು ಧಾರ್ಮಿಕ ಭಿನ್ನಾಭಿಪ್ರಾಯಗಳಿಂದಾಗಿ ಸ್ನೇಹಿತರನ್ನು ಕಳೆದುಕೊಳ್ಳುತ್ತಿದ್ದಾರೆ. ಕಷ್ಟಕಾಲದಲ್ಲಿ ನಿಮಗೆ ಬೆಂಬಲದ ಅಗತ್ಯ ಬಂದಾಗ ಸ್ನೇಹಿತರು ಬೇಕಾಗುತ್ತಾರೆಯೇ ವಿನಾ ರಾಜಕೀಯ ಪಕ್ಷಗಳಲ್ಲ. ಯಾವ ಪಕ್ಷವೇ ಗೆಲ್ಲಲಿ ಅದು ನಿಮಗೆ ಮನ್ನಣೆಯನ್ನೇನೂ ನೀಡುವುದಿಲ್ಲ. ಸರ್ಕಾರಗಳು ಬರುತ್ತವೆ ಮತ್ತು ಹೋಗುತ್ತವೆ, ಸ್ನೇಹಿತರು ಕಡೆಯವರೆಗೂ ಇರುತ್ತಾರೆ!



ಹರ್ಷ್ ಗೋಯಂಕಾ, ಉದ್ಯಮಿ

25 ವರ್ಷಗಳ ಹಿಂದೆ

ಭಾನುವಾರ, 23-5-1999

• **ಜಾತ್ಯತೀತ ತತ್ವಕ್ಕೆ ಬದ್ಧ ವಾಜಪೇಯಿ ಭರವಸೆ**

ಐಜ್ವಾಲ್, ಮೇ 22 (ಪಿಟಿಐ)– ಕೇಂದ್ರ ಸರ್ಕಾರವು ಜಾತ್ಯತೀತ ತತ್ವಗಳಿಗೆ ಬದ್ಧವಾಗಿದ್ದು, ವಿವಿಧ ಜನಾಂಗ ಮತ್ತು ಧಾರ್ಮಿಕ ಗುಂಪುಗಳ ಮಧ್ಯೆ ಒಡಕು ಉಂಟುಮಾಡಲು ಯತ್ನಿಸುವವರ ವಿರುದ್ಧ ಕಠಿಣವಾಗಿ ವರ್ತಿಸಲಾಗುವುದು ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಹೇಳಿದ್ದಾರೆ.

ಎಲ್ಲ ಜನಾಂಗ ಮತ್ತು ಧರ್ಮದವರನ್ನು ಸಮಾನ ದೃಷ್ಟಿಯಲ್ಲಿ ನೋಡಲಾಗುವುದು ಎಂದಿದ್ದಾರೆ.

ದೇಶದ ಈಶಾನ್ಯ ಭಾಗಗಳಲ್ಲಿ ವಿದೇಶಿ ಉಗ್ರಗಾಮಿಗಳು ನುಸುಳದಂತೆ ತಡೆಯಲು ಕೇಂದ್ರ ಗೃಹ ಸಚಿವಾಲಯ ಹೊಸ ಯೋಜನೆಯನ್ನು ಶೀಘ್ರವೇ ರೂಪಿಸುವುದು. ಮಿಜೋರಾಂಗೆ ಹೊಂದಿಕೊಂಡಿರುವ ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶದ ಗಡಿ ಪ್ರದೇಶದಲ್ಲಿ ಹೆಚ್ಚು ಭದ್ರತಾ ಚೌಕಿಗಳನ್ನು ಸ್ಥಾಪಿಸುವ ವಿಷಯ ಗೃಹ ಸಚಿವಾಲಯದ ತೀವ್ರ ಗಣನೆಯಲ್ಲಿದೆ ಎಂದರು.

• **ಸಮಾನಮನಸ್ಕರ ಸಭೆಗೆ ಪಟೇಲ್ ಆಕ್ರೋಶ**

ಬೆಂಗಳೂರು, ಮೇ 22– ಕೆಲವು ‘ಸಮಾನಮನಸ್ಕ’ ಸಚಿವರು ನಿನ್ನೆ ಕೃಷಿ ಸಚಿವ ಸಿ.ಬೈರೇಗೌಡ ಅವರ ನಿವಾಸದಲ್ಲಿ ಸಭೆ ಸೇರಿ ರಾಜ್ಯ ಜನತಾದಳದ ಇತ್ತೀಚಿನ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದ್ದರ ಬಗ್ಗೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆಂದು ಹೇಳಲಾಗಿದೆ.

‘ಮಾನಸಿಕವಾಗಿ ಅಸ್ವಸ್ಥರಾಗಿರುವ ಕೆಲವರು ರಾಜಕೀಯವಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದಾರೆ. ಇದಕ್ಕೆ ಮುನ್ನ ಪಕ್ಷದೊಳಗೆ ಗೊಂದಲ ಉಂಟುಮಾಡುವ ಯತ್ನ ನಡೆಸಿದ್ದಾರೆ. ಇದೇ ರೀತಿ ಗುಂಪು ಸಭೆಗಳು ಮುಂದುವರಿದರೆ ಅದನ್ನು ಸಹಿಸಲು ಸಾಧ್ಯವಿಲ್ಲ’ ಎಂದು ‘ಜಿಂದಾಲ್’ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ ಎಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ

ಗುರುವಾರ, 23-5-1974

• **ಕಪಿಲಾ ಯೋಜನೆ ಜಮೀನು ಅಭಿವೃದ್ಧಿಗೆ ರೈತರಿಗೆ ಸಾಲ**

ಬೆಂಗಳೂರು, ಮೇ 22– ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ 2,000 ಎಕರೆಗಳಷ್ಟು ಜಮೀನನ್ನು ಸಾಗುವಳಿಗೆ ಯೋಗ್ಯವಾಗುವಂತೆ ಅಭಿವೃದ್ಧಿಪಡಿಸಲು ಕರ್ನಾಟಕ ರಾಜ್ಯ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್ ಒಂದು ಯೋಜನೆಯನ್ನು ರೂಪಿಸಿದೆ.

ಮುಖ್ಯವಾಗಿ ಆ ತಾಲ್ಲೂಕಿನಲ್ಲಿ ಕಪಿಲಾ ಯೋಜನೆ ವ್ಯಾಪ್ತಿಯಲ್ಲಿ ಬರುವ ರೈತರಿಗೆ ತಮ್ಮ ಜಮೀನುಗಳನ್ನು ಅಭಿವೃದ್ಧಿಪಡಿಸಲು ಸಾಲ ನೀಡುವುದಕ್ಕಾಗಿ ಈ ಯೋಜನೆ ರೂಪಿತವಾಗಿದೆ.

ಇದಕ್ಕಾಗಿ ಕೃಷಿಕರಿಗೆ ಸಾಲ ನೀಡಲು ಪ್ರಥಮವಾಗಿ ಒಂದು ಲಕ್ಷ ರೂಪಾಯಿಗಳನ್ನು ಹೆಗ್ಗಡದೇವನಕೋಟೆ ತಾಲ್ಲೂಕಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿಗೆ ಒದಗಿಸಲಾಗಿದೆ. ಎರಡು ವರ್ಷಗಳ ಅವಧಿಯಲ್ಲಿ 2,000 ಎಕರೆ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಈ ಯೋಜನೆಯಲ್ಲಿ ಉದ್ದೇಶಿಸಲಾಗಿದೆ.

ಸಂಗತ

ಬೇಕು ಬದುಕು ಅರಳಿಸುವ ತರಬೇತಿ

ಸುತ್ತಲಿನ ಹೆಣ್ಣುಮಕ್ಕಳಿಗೆ ಬದುಕು ಕಟ್ಟಿಕೊಳ್ಳುವ ರೀತಿಯಲ್ಲಿ, ದೌರ್ಜನ್ಯವನ್ನು ಪ್ರಶ್ನಿಸುವ ದಿಸೆಯಲ್ಲಿ ಧೈರ್ಯ ತುಂಬುವ ಕೆಲಸವನ್ನು ನಾವು ಮಾಡಬೇಕಾಗಿದೆ

• ಭಾರತಿ ದೇವಿ ಪಿ.

ಪದವಿ ಕಾಲೇಜುಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವಂತೆ ಮಾಡಲು ಸರ್ಕಾರಿ ಕಾಲೇಜಿನ ‘ಪ್ರವೇಶಾತಿ ಆಂದೋಲನ’ದ ಭಾಗವಾಗಿ ನಾವು ಉಪನ್ಯಾಸಕರು, ಸಮೀಪದ ವಿವಿಧ ಹಳ್ಳಿಗಳಿಗೆ ಭೇಟಿ ನೀಡಿ ಪೋಷಕರ ಮನವೊಲಿಸಲು ಯತ್ನಿಸುತ್ತಿದ್ದೆವು. ಬಹುತೇಕ ಮನೆಗಳಲ್ಲಿನ ಹೆಣ್ಣುಮಕ್ಕಳ ಪೋಷಕರು ಹುಡುಗಿಯರನ್ನು ಪಿಯುಸಿ ಬಳಿಕ ಕಾಲೇಜಿಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದರು. ಆ ವಿದ್ಯಾರ್ಥಿನಿಯರಲ್ಲಿ ಹೆಚ್ಚಿನವರು ಶೇಕಡ 70, 80ರಷ್ಟು ಅಂಕಗಳನ್ನು ಗಳಿಸಿದ್ದವರು.

‘ನಿಮ್ಮ ಮಗಳ ಭವಿಷ್ಯ ಕಂಡವರ್‍ಯಾರು? ಅವಳನ್ನು ಓದಲು ಕಳಿಸಿ, ಸ್ವಾವಲಂಬಿಯಾಗಿ ಬದುಕಲು ಉತ್ತೇಜನ ನೀಡಿ’ ಎಂದು ನಾವು ಅಂದ ಕೂಡಲೇ ‘ಮೇಡಮ್ನೋರೇ, ಈಗಿನ ನ್ಯೂಸ್‌ಗಳನ್ನು ಕೇಳಿದರೆ ಮಕ್ಕಳನ್ನು ಹೊರಗೆ ಕಳಿಸೋಕೇ ಭಯವಾಗುತ್ತೆ. ಹೊರಗೆ ಹೋದ ಮಕ್ಕಳಿಗೆ ಏನಾದರೂ ಆದರೆ ಏನು ಮಾಡುವುದು? ನಾವು ಬಡವರು, ಕಷ್ಟಪಟ್ಟು ಮಕ್ಕಳನ್ನು ಬೆಳೆಸಿದ್ದೇವೆ. ಹೇಗಾದರೂ ಸರಿ ಅವರು ಸೇಫಾಗಿ ಇದ್ದರೆ ಸಾಕು’ ಎಂಬ ಕುಗ್ಗಿದ ದನಿಯ ಅವರ ಮಾತುಗಳಿಗೆ ನಾವು ಉತ್ತರಿಸಲಾಗದೇ ತತ್ತರಿಸುತ್ತಿದ್ದೆವು.

ಹೌದು, ನಾವು ತುಂಬಾ ಒತ್ತಾಯ ಮಾಡಿ ಹೆಣ್ಣು-ಮಕ್ಕಳನ್ನು ಕಾಲೇಜಿಗೆ ಕಳಿಸಿ ಎಂದೇನೋ ಹೇಳಿ ಒಪ್ಪಿಸಬಹುದು. ಆದರೆ ನಾಳೆ ಮನೆ ಬಿಟ್ಟ ಅವರು ಸುರಕ್ಷಿತವಾಗಿ ವಾಪಸಾಗುತ್ತಾರೆ ಎಂಬ ಭರವಸೆ ನೀಡುವುದಾದರೂ ಹೇಗೆ? ಇಂದು ಸುತ್ತಮುತ್ತ ಎಗ್ಗಿಲ್ಲದೆ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಕಗ್ಗೊಲೆ, ಲೈಂಗಿಕ ಹಿಂಸೆಯಂತಹವನ್ನು ನೋಡುವಾಗ, ಸಮಾಜ ಈ ಮಟ್ಟಿಗೆ ಹದಗೆಟ್ಟಿರುವ ಸ್ಥಿತಿಗೆ ನಾವೆಲ್ಲರೂ ಕಾರಣರಲ್ಲವೇ ಎಂದು ವಿಷಾದ ಕವಿಯುತ್ತದೆ.

ಮೊಬೈಲ್ ಫೋನ್‌ಗಳ ಈ ಯುಗದಲ್ಲಿ ದಿಢೀರನೆ ಅರಳುವ ಪ್ರೇಮ, ಅದನ್ನು ನಿರ್ವಹಿಸಲು ಬೇಕಾದ ಪ್ರಬುದ್ಧತೆ ಇಲ್ಲದಿರುವುದು, ಮಕ್ಕಳ ವಯೋಸಹಜ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲಾಗದ ಪೋಷಕರು ಮತ್ತು ಸಮಾಜ, ಮಕ್ಕಳ ದುಡುಕು ಪ್ರವೃತ್ತಿ, ಹೆಣ್ಣುಮಕ್ಕಳ ಜೊತೆ ಹೇಗೆ ಬೇಕಾದರೂ ನಡೆದುಕೊಳ್ಳಬಹುದು ಎಂಬ ಉಡಾಫೆ, ಸಾಮಾಜಿಕ ಜಾಲತಾಣಗಳು ಎಲ್ಲವೂ ಈ ಬಗೆಯ ದುಷ್ಕೃತ್ಯಗಳಿಗೆ ದಾರಿ ಮಾಡಿಕೊಟ್ಟಿವೆ.

ಭಾಷಣ ಮಾಡಬಹುದು, ಹೋರಾಟ ಮಾಡಬಹುದು, ಹೊಸ ಕಾನೂನುಗಳನ್ನು ತರಬಹುದು. ಆದರೆ ಇಂದಿಗೂ ತಾವು ತಿಳಿದವರು ಅಂದುಕೊಂಡಿರುವವರೂ ಸೇರಿದಂತೆ ಬಹುತೇಕರು ಅರ್ಥ ಮಾಡಿಕೊಳ್ಳದೇ ಇರುವ ಮಹತ್ವದ ಪ್ರಶ್ನೆ ‘ಸಮ್ಮತಿ’ಯದು. ಒಬ್ಬ ಯುವಕ ಒಂದು ಹುಡುಗಿಯನ್ನು ಪ್ರೀತಿಸಿದ ಕೂಡಲೆ ಅವಳು ಅದನ್ನು ಒಪ್ಪಲೇಬೇಕೆ? ಒಂದು ವೇಳೆ ಒಪ್ಪಿಕೊಂಡ ನಂತರದಲ್ಲಿ ಹೊಂದಾಣಿಕೆ ಆಗುತ್ತಿಲ್ಲ ಎನಿಸಿದರೆ ಹೊರಬರುವ ದಾರಿಯೇ ಇಲ್ಲವೆ? ಮದುವೆ ನಿಶ್ಚಯವಾಗಿದ್ದು, ಯಾವುದೋ ಹಂತದಲ್ಲಿ ಆಗದು ಎನಿಸಿದರೆ ಆ ಅಭಿಪ್ರಾಯಕ್ಕೆ ಬೆಲೆಯೇ ಇಲ್ಲವೆ? ದೈಹಿಕ ಸಂಬಂಧಕ್ಕೆ ನಿರಾಕರಿಸಿದರೆ ಆಕೆಯ ಮಾತಿಗೆ ಮನ್ನಣೆಯೇ ಇಲ್ಲವೆ?

‘ಪೆನ್‌ಡ್ರೈವ್’ ಪ್ರಕರಣದಲ್ಲಿ ಪ್ರಭಾವಿ ರಾಜಕಾರಣಿಗೆ ಬುದ್ಧಿ ಕಲಿಸುವ ಸಲುವಾಗಿ, ಆತ ಎಸಗಿದ ಕೃತ್ಯಗಳನ್ನು ಜಾಹೀರು ಮಾಡಿದವರಿಗೆ, ಆ ವಿಡಿಯೊ ದೃಶ್ಯಗಳಲ್ಲಿರುವ ಹೆಣ್ಣುಮಕ್ಕಳ ಬದುಕು ಕೇವಲವಾಯಿತಲ್ಲವೇ? ಇಂತಹ ಎಷ್ಟೋ ಪ್ರಕರಣಗಳು, ತನಗೆ ದಕ್ಕದ್ದು ಬೇರೆ ಯಾರಿಗೂ ದಕ್ಕಬಾರದು ಎಂಬ ದುಷ್ಟ ಮನಃಸ್ಥಿತಿ, ಬೆದರಿಕೆ, ದೌರ್ಜನ್ಯ, ಕಗ್ಗೊಲೆ, ಮಾನಹಾನಿ, ತೇಜೋವಧೆ, ಆ್ಯಸಿಡ್ ದಾಳಿಯಂತಹ ಬೇರೆ ಬೇರೆ ರೂಪಗಳಲ್ಲಿ ಹೆಣ್ಣುಮಕ್ಕಳ ಅಸ್ತಿತ್ವವನ್ನೇ ಚಿವುಟಿ ಹಾಕುತ್ತಿವೆ. ಅತ್ಯಂತ ಉನ್ನತ ಹುದ್ದೆಯಲ್ಲಿ ಇರುವ ಹೆಣ್ಣುಮಕ್ಕಳಿಂದ ಹಿಡಿದು ಕೊಟ್ಟಕೊನೆಯ ಮಹಿಳೆಯವರೆಗೆ ಹಲವಾರು ಮಂದಿ ಇದನ್ನು ಬೇರೆ ಬೇರೆ ಹಂತದಲ್ಲಿ ಅನುಭವಿಸುತ್ತಿದ್ದಾರೆ. ಮಾತಿಗೆ ಒಪ್ಪದ ಹೆಣ್ಣುಗಳು ಇವರಿಗೆ ಸೊಕ್ಕಿನ ಹೆಣ್ಣುಗಳಂತೆ ಕಾಣುತ್ತಾರೆ. ಅವರ ದಮನ ಹೀಗೆ ಬೇರೆ ಬೇರೆ ನೆಲೆಗಳಲ್ಲಿ ನಡೆಯುತ್ತಿದೆ. ಹೀಗಾಗಿ, ಎಷ್ಟೆಲ್ಲ ಅಭಿವೃದ್ಧಿ ಸಾಧಿಸಿದ್ದೇವೆ ಅಂದುಕೊಳ್ಳುವಾಗಲೂ ನಾವು ಇನ್ನಷ್ಟು ಮುಂದುವರಿಯುವ ಬದಲು ಹಿಮ್ಮುಖವಾಗಿ ಚಲಿಸುತ್ತಿದ್ದೇವೆ ಎನಿಸುತ್ತದೆ.



ಅತ್ಯಾಚಾರ, ದೌರ್ಜನ್ಯ ನಡೆದಾಗ ಬೊಬ್ಬೆ ಹೊಡೆದು, ಉಳಿದಂತೆ ಸಂಸ್ಕೃತಿಯ ಮಂತ್ರ ಪಠಿಸುವ ಆಷಾಢಭೂತಿತನ ಎಷ್ಟೆಲ್ಲ ಪ್ರಕರಣಗಳ ನಂತರವೂ ಮತ್ತೆ ಮತ್ತೆ ಅನುರಣಿಸುತ್ತಲೇ ಇರುತ್ತದೆ. ಈ ಹೊತ್ತಿನಲ್ಲೂ ಮತ್ತೆ ಹೆಣ್ಣುಮಕ್ಕಳನ್ನೇ ಕೂರಿಸಿಕೊಂಡು, ಒಬ್ಬರೇ ಓಡಾಡಬಾರದು, ಫೇಸ್‌ಬುಕ್ ಅಕೌಂಟ್ ಇಟ್ಟುಕೊಳ್ಳಬಾರದು, ಗೆಳೆತನ ಮಾಡಿಕೊಳ್ಳಬಾರದು ಎಂಬಂತಹ ಒತ್ತಡಗಳನ್ನು ಹೇರುತ್ತೇವೆಯೇ ವಿನಾ ಹೆಣ್ಣುಮಕ್ಕಳನ್ನು ವಸ್ತುವನ್ನಾಗಿ ನೋಡುವ, ದೇಹವಾಗಿ ನೋಡುವ ಚಿಂತನಾ ಕ್ರಮವನ್ನು ಒಟ್ಟಾಗಿ ಪ್ರಶ್ನಿಸುವುದಿಲ್ಲ.

ಹೋರಾಟ ನಡೆಯಲಿ, ಆರೋಪಿಗಳಿಗೆ ಕಾನೂನು ಪ್ರಕಾರ ಶಿಕ್ಷೆಯಾಗಲಿ. ಆದರೆ ನಮ್ಮ ಗಮನ ಇಂತಹ ಪ್ರಕರಣಗಳು ನಡೆದಾಗೆಲ್ಲ ಮುದುಡುವ ಹೆಣ್ಣುಮಕ್ಕಳ ಬದುಕನ್ನು ಅರಳಿಸುವ ಕಡೆಗೆ, ಭೀತರಾದ ಅವರಲ್ಲಿ ಧೈರ್ಯ ತುಂಬುವ ಕಡೆಗೆ ಇರಬೇಕು. ಅವರ ಬದುಕನ್ನು ಮತ್ತಷ್ಟು ಮುದುಡಿಸುವ ಕ್ರಮಗಳು ದೌರ್ಜನ್ಯ ಮಾಡುವ ಮನಸ್ಥಿತಿಗೇ ಬಲ ತುಂಬಿ ದಬ್ಬಾಳಿಕೆ ಇನ್ನಷ್ಟು ಹೆಚ್ಚುವಂತೆ ಮಾಡುತ್ತವೆ. ನಾವು ಸುತ್ತಲಿನ ಹೆಣ್ಣುಮಕ್ಕಳಿಗೆ ಬದುಕು ಕಟ್ಟಿಕೊಳ್ಳುವ ರೀತಿಯಲ್ಲಿ, ದೌರ್ಜನ್ಯವನ್ನು ಪ್ರಶ್ನಿಸುವ ದಿಸೆಯಲ್ಲಿ ಧೈರ್ಯ ತುಂಬುವ ಕೆಲಸ ಮಾಡಬೇಕಾಗಿದೆ.

ವಾಚಕರ ವಾಣಿ

ಶಾಲಾ ಸೇರ್ಪಡೆ: ಅವೈಜ್ಞಾನಿಕ ನಿಯಮ

ಒಂದನೇ ತರಗತಿ ಸೇರ್ಪಡೆಗೆ ಆಯಾ ಶೈಕ್ಷಣಿಕ ವರ್ಷದ ಜೂನ್ 1ಕ್ಕೆ ಮಗುವಿನ ವಯಸ್ಸು ಕಡ್ಡಾಯವಾಗಿ 6 ವರ್ಷ ಪೂರೈಸಿರಬೇಕು ಎಂಬ ಅವೈಜ್ಞಾನಿಕ ನಿಯಮವನ್ನು ಯಾರೂ ಪ್ರಶ್ನಿಸದಿರುವುದು ಸರಿಯಲ್ಲ. ಈ ನಿಯಮದ ಅನುಸಾರ, ಮಗುವೇನಾದರೂ ಜೂನ್ 2ರಂದು ಜನಿಸಿದ್ದರೂ ಅದು ಒಂದನೇ ತರಗತಿಗೆ ಬರುವ ವೇಳೆಗೆ 7 ವರ್ಷ ವಯಸ್ಸಾಗುತ್ತದೆ. ಪದವಿ ಮುಗಿಸಿ ಜೀವನ ರೂಪಿಸಿಕೊಳ್ಳುವಷ್ಟರಲ್ಲಿ ಬಹಳಷ್ಟು ವಯಸ್ಸಾಗಿಬಿಟ್ಟಿರುತ್ತದೆ. ಇಂತಹ ಸಮಸ್ಯೆಯನ್ನು ಅರಿತಿದ್ದ ತಜ್ಞರು ಒಂದನೇ ತರಗತಿ ಪ್ರವೇಶಕ್ಕೆ ಕನಿಷ್ಠ ವಯೋಮಿತಿಯನ್ನು 5 ವರ್ಷ 5 ತಿಂಗಳಿಗೆ ನಿಗದಿಪಡಿಸಿದ್ದರು. ಆ ವಯೋಮಾನಕ್ಕೆ ಬಾರದ ಮಗು ನಂತರ ಪ್ರವೇಶ ಪಡೆದರೆ ಸುಮಾರು 6 ತಿಂಗಳಷ್ಟೇ ನಿಧಾನವಾಗುತ್ತಿತ್ತು.

ಹಾಗಿದ್ದರೆ, ಈಗಿನ ಮಕ್ಕಳು ಹೆಚ್ಚು ಚೂಟಿಯಿಂದ ಇರುತ್ತಾರೆ ಎಂದು ಹೇಳುವ ಮನೋವಿಜ್ಞಾನದ ವ್ಯಾಖ್ಯಾನ ಹುಸಿಯೇ? ಕಲಿಕೆಯಲ್ಲಿ ಮುಂದಿರುವ ಈ ಕಾಲದ ಮಕ್ಕಳ ಮನಃಸ್ಥಿತಿ ಇಂತಹ ನಿಧಾನಗತಿಯ ಕಲಿಕೆಯಿಂದ ಏನಾಗಬಹುದು?! ಇದನ್ನು ಮನಗಂಡು, ಮಕ್ಕಳ ಬದುಕಿನ ಅಮೂಲ್ಯ ಕ್ಷಣಗಳು ಅನಗತ್ಯವಾಗಿ ವ್ಯರ್ಥವಾಗದ ರೀತಿಯಲ್ಲಿ, ಮೊದಲಿದ್ದ ವಯಸ್ಸನ್ನೇ ಒಂದನೇ ತರಗತಿ ಪ್ರವೇಶಕ್ಕೆ ಕನಿಷ್ಠ ವಯೋಮಿತಿಯಾಗಿ ನಿಗದಿಪಡಿಸಬೇಕು.

ಹೇಮಚಂದ್ರ ದಾಳಗೌಡನಹಳ್ಳಿ, ಮೈಸೂರು

ಹೊರಗುತ್ತಿಗೆ ಮೀಸಲಾತಿಯಲ್ಲಿ ಸಾಮಾಜಿಕ ನ್ಯಾಯ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆಸುವ ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮಹಿಳೆಯರಿಗೂ ಸೇರಿದಂತೆ ಮೀಸಲಾತಿ ನೀಡಿಕೆಯನ್ನು ಕಡ್ಡಾಯವಾಗಿ ಪಾಲಿಸಲು ಸರ್ಕಾರ ಆದೇಶಿಸಿರುವುದು ಉತ್ತಮ ಕ್ರಮವಾಗಿದೆ. ಏಜೆನ್ಸಿಗಳ ಮೂಲಕ ನಡೆಯುತ್ತಿದ್ದ ನೇಮಕಾತಿಯಲ್ಲಿ ತಮಗೆ ಬೇಕಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಇದರಿಂದಾಗಿ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದವರಿಗೆ ಅನ್ಯಾಯವಾಗುತ್ತಿತ್ತು. ಆದರೆ ಈಗ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸಬೇಕಾಗಿರುವುದರಿಂದ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿದಂತಾಗಿದೆ.

ಈ ನಿಯಮವು ಸರ್ಕಾರದ ಎಲ್ಲಾ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮ, ಮಂಡಳಿಗಳು, ವಿಶ್ವವಿದ್ಯಾಲಯಗಳಿಗೆ ಅನ್ವಯ ಆಗಲಿರುವುದರಿಂದ, ಇದುವರೆಗೂ ಅವಕಾಶ ಪಡೆಯದ ಹಲವರಿಗೆ ಉದ್ಯೋಗ ದೊರಕುವ ಸಾಧ್ಯತೆ ಇದೆ.

ರಾಸುಮ ಭಟ್, ಚಿಕ್ಕಮಗಳೂರು

ಅನಾರೋಗ್ಯಕರ ಆಹಾರ: ಇರಲಿ ಎಚ್ಚರ

ಬೆಂಗಳೂರಿನಲ್ಲಿ ಇತ್ತೀಚೆಗೆ ಮದುವೆಯೊಂದರ ಆರತಕ್ಷತೆಯಲ್ಲಿ ನೀಡಿದ್ದ ಲಿಕ್ವಿಡ್ ನೈಟ್ರೋಜನ್ ಪಾನ್ ತಿಂದು ಬಾಲಕಿಯೊಬ್ಬಳ ಹೊಟ್ಟೆಯಲ್ಲಿ ರಂಧ್ರವಾಗಿರುವುದು ಮತ್ತು ಅದಕ್ಕಾಗಿ ಆಕೆ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಿ ಬಂದದ್ದು ದುರದೃಷ್ಟಕರ. ಬಾಯಿಯಲ್ಲಿ ಹಾಕಿದ ಕೂಡಲೇ ಹೊಗೆ ತರಿಸುವ ಲಿಕ್ವಿಡ್ ನೈಟ್ರೋಜನ್ ತುಂಬಿದ ಪಾನ್ ಸೇವಿಸುವುದು ಇತ್ತೀಚಿನ ದಿನಗಳಲ್ಲಂತೂ ಟ್ರೆಂಡ್ ಆಗಿದೆ. ಆದರೆ ಈ ರೀತಿ ಟ್ರೆಂಡಿ ಫುಡ್‌ಗಳು ಹಾಗೂ ಬಾಯಿಗೆ ರುಚಿ ಕೊಡುವ ಅನಾರೋಗ್ಯಕರ ಪದಾರ್ಥಗಳ ಸೇವನೆಯಿಂದ ತಮ್ಮ ದೇಹದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಪ್ರತಿಯೊಬ್ಬರೂ ಎಚ್ಚರ ವಹಿಸಬೇಕು.

ಅಂಬಿಕಾ ಬಿ.ಟಿ., ಹಾಸನ

ಜೆಡಿಎಸ್ ಅಧ್ಯಕ್ಷರ ಕೂಗು ಕೇಳುತ್ತಿಲ್ಲವೇ?

ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಯಾಗಿ, ಈ ಸಂಬಂಧ ತಲೆಮರೆಸಿಕೊಂಡು ಸದ್ಯ ವಿದೇಶದಲ್ಲಿರುವ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ‘ನಿಮ್ಮ ತಾತ (ಎಚ್.ಡಿ.ದೇವೇಗೌಡ) ಮತ್ತು ಪಕ್ಷದ ಕಾರ್ಯಕರ್ತರಿಗೆ ನೀನು ಗೌರವ ಕೊಟ್ಟು, ಎಲ್ಲೇ ಇದ್ದರೂ 48 ಗಂಟೆಯ ಒಳಗೆ ಬಂದು, ಈ ನೆಲದ ಕಾನೂನಿಗೆ ಗೌರವ ಕೊಟ್ಟು ತನಿಖೆಗೆ ಸಹಕರಿಸು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಮನವಿ ಮಾಡಿರುವುದು ಸರಿಯಷ್ಟೆ. ಆದರೆ ಈ ಕೂಗು ಇನ್ನೂ ಪ್ರಜ್ವಲ್ ಕಿವಿಗೆ ಬಿದ್ದಿಲ್ಲವೇನೋ ಎನಿಸುತ್ತದೆ ಅಥವಾ ಕೇಳಿಸಿದ್ದರೂ ತಮಗೂ ಕುಮಾರಸ್ವಾಮಿ ಅವರ ಮನವಿಗೂ ಸಂಬಂಧ ಇಲ್ಲ ಎಂಬ ಧೋರಣೆಯಿಂದ ಅವರು ಸುಮ್ಮನೆ ಇರಬಹುದು. ರಾಜ್ಯದ ಅನೇಕ ರಾಜಕೀಯ ಪಂಡಿತರು ಹೇಳುವಂತೆ, ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗುವ ಜೂನ್ 4ರ ತನಕವೂ ಪ್ರಜ್ವಲ್ ಭಾರತಕ್ಕೆ ಬರುವ ಸಾಧ್ಯತೆ ಕಡಿಮೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಉದ್ಯಾನ ಪ್ರವೇಶಾತಿ: ನಿರ್ಬಂಧ ಸಲ್ಲ

ಬೆಂಗಳೂರಿನ ಉದ್ಯಾನಗಳು ಮತ್ತು ಕೆರೆಗಳ ಪ್ರವೇಶಕ್ಕೆ ಸಮಯದ ನಿರ್ಬಂಧ ವಿಧಿಸಿರುವ ಬಗ್ಗೆ ರಾಜನ್ ನಾಯರ್ ಎಂಬುವರು ಆಕ್ಷೇಪಿಸಿದ್ದಾರೆ (ಕಿಡಿನುಡಿ, ಪ್ರ.ವಾ., ಮೇ 22). ಬೆಂಗಳೂರಿನಲ್ಲಿರುವ ಬಹುತೇಕ ಉದ್ಯಾನಗಳು ಹಾಗೂ ದೇವಸ್ಥಾನಗಳು ಬೆಳಿಗ್ಗೆ 11 ಗಂಟೆಯವರೆಗೆ ಮಾತ್ರ ಸಾರ್ವಜನಿಕರಿಗಾಗಿ ತೆರೆದಿರುತ್ತವೆ ಮತ್ತೆ ಸಂಜೆ 4–5 ಗಂಟೆಗೆ ತೆರೆಯುತ್ತವೆ.

ನಿವೃತ್ತರಾಗಿ ಮನೆಯಲ್ಲೇ ಇರುವ, ಸಣ್ಣ ಮಕ್ಕಳನ್ನು ನೋಡಿಕೊಳ್ಳುವ ಹಿರಿಯ ನಾಗರಿಕರು ಈ ನಡುವಿನ ಅವಧಿಯಲ್ಲಿ ಇಂತಹ ಸ್ಥಳಗಳಿಗೆ ಭೇಟಿ ಕೊಡಲು ಸಾಧ್ಯವಿಲ್ಲ. ಏನಿದ್ದರೂ ಜನದಟ್ಟಣೆ ಇರುವ ಬೆಳಿಗ್ಗೆ ಮತ್ತು ಸಂಜೆಯ ಸಮಯದಲ್ಲಷ್ಟೇ ಅವರು ಇಲ್ಲಿಗೆ ಭೇಟಿ ಕೊಡಬೇಕಾಗುತ್ತದೆ. ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಮುಂಜಾನೆಯಿಂದ ಸಂಜೆಯವರೆಗೆ ಈ ಸ್ಥಳಗಳು ನಿರಂತರವಾಗಿ ತೆರೆದಿರುವಂತೆ ಮಾಡಬೇಕು. ಆಗ ಜನದಟ್ಟಣೆ ನಿವಾರಣೆಯಾಗುವುದಲ್ಲದೆ, ಹಿರಿಯ ನಾಗರಿಕರು ಮತ್ತು ಮಕ್ಕಳು ತಮ್ಮ ಬಿಡುವಿನ ವೇಳೆಯನ್ನು ಇಲ್ಲಿ ಕಳೆಯಲು ಸಾಧ್ಯವಾಗುತ್ತದೆ.

ಟಿ.ವಿ.ಬಿ.ರಾಜನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.




ವಿಭಾಗ ಐದು: ನಾಮನಿರ್ದೇಶಿತರು ಇವರು

'ಪ್ರಜಾವಾಣಿ'ಗೆ 75 ತುಂಬಿದ ಸಂದರ್ಭದಲ್ಲಿ ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ಭಾರತೀಯ ಸಿನಿಮಾರಂಗದಲ್ಲಿ ಕನ್ನಡ ಚಿತ್ರರಂಗದ ಅಭೂತಪೂರ್ವ ಪರಂಪರೆಯನ್ನು ಎತ್ತಿಹಿಡಿಯುವ ಉದ್ದೇಶದೊಂದಿಗೆ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಪ್ರಶಸ್ತಿಯು ಆರಂಭಗೊಂಡಿತು. 2023ರ ಜೂನ್‌ನಲ್ಲಿ ನಡೆದ ಮೊದಲ ಆವೃತ್ತಿಯಲ್ಲಿ 2022ರಲ್ಲಿ ಬಿಡುಗಡೆಗೊಂಡ ಸಿನಿಮಾಗಳನ್ನು ಪರಿಗಣಿಸಿ ಪ್ರತಿಭಾನ್ವಿತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು. ಇದೀಗ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಗೆ ದಿನಗಣನೆ ಶುರುವಾಗಿದೆ. 2023ನೇ ಸಾಲಿನ ಸಿನಿಮಾಗಳ ಪೈಕಿ ಪ್ರಶಸ್ತಿಗೆ ನಾಮನಿರ್ದೇಶಿತರಾದವರನ್ನು ತಿಳಿಸುವ ಸಮಯ ಇದಾಗಿದೆ. 15 ವಿಭಾಗಗಳಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಲು ಪರಿಣತರ ತಂಡವು ನಾಮನಿರ್ದೇಶನಗಳನ್ನು ಮಾಡಿದೆ. ಚಲನಚಿತ್ರಗಳನ್ನು ವೀಕ್ಷಿಸಿದ 20 ಪರಿಣತರು ಪ್ರತಿ ವಿಭಾಗದಲ್ಲಿ ಐದು ಪ್ರತಿಭಾವಂತರ ಹೆಸರುಗಳನ್ನು ಪಟ್ಟಿ ಮಾಡಿದ್ದಾರೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ಮತ ಹಾಕುವ ಮುಖಾಂತರ ವಿಜೇತರಾಗಿ ಆಯ್ಕೆ ಮಾಡಲಿದ್ದಾರೆ. ಯಾವ ವಿಭಾಗದಲ್ಲಿ ಪ್ರಶಸ್ತಿ ಯಾರ ಮುಡಿಗೇರಲಿದೆ ಎನ್ನುವುದು 'ಸಿನಿ ಸಮ್ಮಾನ' ಕಾರ್ಯಕ್ರಮದಲ್ಲೇ ಘೋಷಣೆಯಾಗಲಿದೆ. ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಪರಿಣತರು ನಾಮನಿರ್ದೇಶನಕ್ಕೆ ಆಯ್ಕೆ ಮಾಡಿದವರ ಹೆಸರುಗಳನ್ನು ಮುಖ್ಯತೀರ್ಪುಗಾರರು ಅನುಮೋದಿಸಿದ್ದಾರೆ. ಮೊದಲ ಹಂತವಾಗಿ ಐದು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರು, ಸಿನಿಮಾಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಅತ್ಯುತ್ತಮ ನಟ



ಶಿವರಾಜ್‌ಕುಮಾರ್ — ಚಿತ್ರ: ಘೋಸ್ಟ್

ದರ್ಶನ್ ತೂಗುದೀಪ — ಚಿತ್ರ: ಕಾಟೇರ

ರಾಜ್ ಬಿ.ಶೆಟ್ಟಿ — ಚಿತ್ರ: ಟೋಬಿ

ಶಿಶಿರ ಬೈಕಾಡಿ — ಚಿತ್ರ: ಡೇರ್‌ಡೆವಿಲ್ ಮುಸ್ತಾಫಾ

ರಾಜ್ ಬಿ.ಶೆಟ್ಟಿ — ಚಿತ್ರ: ಸ್ವಾತಿ ಮುತ್ತಿನ ಮಳೆ ಹನಿಯೇ

ಅತ್ಯುತ್ತಮ ನಟಿ



ಸಿರಿ ರವಿಕುಮಾರ್ — ಚಿತ್ರ: ಸ್ವಾತಿ ಮುತ್ತಿನ ಮಳೆ ಹನಿಯೇ

ರುಕ್ಮಿಣಿ ವಸಂತ್ — ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side A

ಅಕ್ಷತಾ ಪಾಂಡವಪುರ — ಚಿತ್ರ: ಪಿಂಕಿ ಎಲ್ಲಿ?

ಸಿಂಧು ಶ್ರೀನಿವಾಸಮೂರ್ತಿ — ಚಿತ್ರ: ಆಚಾರ್ ಆ್ಯಂಡ್ ಕೋ.

ಮಿಲನ ನಾಗರಾಜ್ — ಚಿತ್ರ: ಕೌಸಲ್ಯಾ ಸುಪ್ರಜಾ ರಾಮ

ಅತ್ಯುತ್ತಮ ನಿರ್ದೇಶನ



ಸಿಂಧು ಶ್ರೀನಿವಾಸಮೂರ್ತಿ — ಚಿತ್ರ: ಆಚಾರ್ ಆ್ಯಂಡ್ ಕೋ.

ಬಿ.ಎಸ್.ಲಿಂಗದೇವರು — ಚಿತ್ರ: ವಿರಾಟಪುರ ವಿರಾಗಿ

ಪೃಥ್ವಿ ಕೊಣನೂರು — ಚಿತ್ರ: ಪಿಂಕಿ ಎಲ್ಲಿ?

ಶಶಾಂಕ್ ಸೋಗಾಲ್ — ಚಿತ್ರ: ಡೇರ್‌ಡೆವಿಲ್ ಮುಸ್ತಾಫಾ

ಹೇಮಂತ್ ಎಂ. ರಾವ್ — ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side A

ಅತ್ಯುತ್ತಮ ಚೊಚ್ಚಲ ನಿರ್ದೇಶನ



ವಿಶಾಲ್ ಆತ್ರೇಯ — ಚಿತ್ರ: ತತ್ಸಮ ತದ್ಭವ

ಉಮೇಶ್ ಕೆ.ಕೃಪ — ಚಿತ್ರ: ಟಗರುಪಲ್ಯ

ಶಶಾಂಕ್ ಸೋಗಾಲ್ — ಚಿತ್ರ: ಡೇರ್‌ಡೆವಿಲ್ ಮುಸ್ತಾಫಾ

ಸಿಂಧು ಶ್ರೀನಿವಾಸಮೂರ್ತಿ — ಚಿತ್ರ: ಆಚಾರ್ ಆ್ಯಂಡ್ ಕೋ.


ನಿತಿನ್ ಕೃಷ್ಣಮೂರ್ತಿ — ಚಿತ್ರ: ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ

ವರ್ಷದ ಅತ್ಯುತ್ತಮ ಚಿತ್ರ (2023)


ಪಿಂಕಿ ಎಲ್ಲಿ?



ಸ್ವಾತಿ ಮುತ್ತಿನ ಮಳೆ ಹನಿಯೇ



ವಿರಾಟಪುರ ವಿರಾಗಿ



ಕಾಟೇರ




ಡೇರ್‌ಡೆವಿಲ್ ಮುಸ್ತಾಫಾ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಶಿವಸೇನಾದ (ಉದ್ಧವ್ ಬಣ) ಚುನಾವಣಾ ರ‍್ಯಾಲಿಯಲ್ಲಿ ಪಾಕಿಸ್ತಾನದ ಧ್ವಜ! ಪಿಎಫ್‌ಐ, ಸೆಮಿ, ಅಲ್‌ಕೈದಾ ಅವರೆಲ್ಲಾ ಈಗ ಮಾತೋಶ್ರೀ ಬಿರಿಯಾನಿ ತಿನ್ನುವರೇ... ಮುಂಬೈನಲ್ಲಿ ದಾವೂದ್ ಕೂಡ ಸ್ಮಾರಕ ಕಟ್ಟಿಸುತ್ತಾನೆ. ಇವನನ್ನು ಬಾಳಾ ಸಾಬೇಬ್ ಅವರ 'ನಿಜವಾದ ಪುತ್ರ' ಎಂದು ಕರೆಯಬೇಕಂತೆ' ಎಂದು ಬಿಜೆಪಿ ನಾಯಕ ನಿಲೇಶ್ ರಾಣೆ ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ಲೋಕಸಭಾ ಚುನಾವಣೆ ಪ್ರಚಾರದ ಶಿವಸೇನಾ (ಉದ್ಧವ್ ಬಣ) ರ‍್ಯಾಲಿಯಲ್ಲಿ ಪಾಕಿಸ್ತಾನದ ಧ್ವಜ ಕಂಡುಬಂದಿದೆ ಎಂದು ಆರೋಪಿಸಿರುವ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ, ಇದು ಸುಳ್ಳು ಸುದ್ದಿ.



ಇಸ್ಲಾಂನ ಧಾರ್ಮಿಕ ಧ್ವಜ



ಪಾಕಿಸ್ತಾನದ ಧ್ವಜ


ಶಿವಸೇನಾದ (ಉದ್ಧವ್ ಬಣ) ಅಭ್ಯರ್ಥಿ ಅನಿಲ್ ದೇಸಾಯಿ ಅವರ ಚುನಾವಣಾ ರ‍್ಯಾಲಿಯಲ್ಲಿ ಕಂಡಿರುವುದು ಪಾಕಿಸ್ತಾನದ ಧ್ವಜವಲ್ಲ. ಬದಲಿಗೆ, ಇಸ್ಲಾಂನ ಧಾರ್ಮಿಕ ಧ್ವಜವಾಗಿದೆ. ಇಸ್ಲಾಂನ ಧಾರ್ಮಿಕ ಧ್ವಜದಲ್ಲಿ ಅರ್ಧ ಚಂದ್ರಾಕೃತಿಯ ಮಧ್ಯದಲ್ಲಿ ದೊಡ್ಡದಾದ ನಕ್ಷತ್ರವಿದೆ. ಜೊತೆಗೆ ಬಿಳಿ ಬಿಳಿ ಚುಕ್ಕಿಗಳೂ ಇವೆ. ಆದರೆ, ಪಾಕಿಸ್ತಾನದ ಧ್ವಜದಲ್ಲಿ, ಅರ್ಧ ಚಂದ್ರಾಕೃತಿಯ ಜೊತೆಗೆ ದೊಡ್ಡ ನಕ್ಷವೂ ಇರುತ್ತದೆ ಜೊತೆಗೆ ಧ್ವಜದ ಎಡಬದಿಯಲ್ಲಿ ಬಿಳಿಯ ಅಗಲವಾದ ಪಟ್ಟಿ ಇದೆ. ಆದ್ದರಿಂದ ಶಿವಸೇನಾದ (ಉದ್ಧವ್ ಬಣ) ರ‍್ಯಾಲಿಯಲ್ಲಿ ಕಂಡಿರುವುದು ಪಾಕಿಸ್ತಾನದ ಧ್ವಜವಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು





ಅಪ್ಪಟ ಮನುಷ್ಯರು ಬೇಕಾಗಿದ್ದಾರೆ

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಹಣ ಅಧಿಕಾರ ಮನುಷ್ಯನನ್ನು ಬದಲಾಯಿಸಿಬಿಡುತ್ತದೆ ಎನ್ನುತ್ತಾರೆ. ಆದರೆ ಇದ್ದಕ್ಕಿದ್ದಂತೆ ಒಬ್ಬ ವ್ಯಕ್ತಿ ಪೂರ್ತಿಯಾಗಿ ಬದಲಾಗಿಬಿಡುವುದು ಅಸಾಧ್ಯ. ನಿಜ ಹೇಳಬೇಕೆಂದರೆ ಅವನೊಳಗೆ ಸುಪ್ತವಾಗಿ ಅಡಗಿದ್ದ ಸ್ವಭಾವವೇ ಒಂದು ಹಂತದಲ್ಲಿನಿರ್ಭಿಡೆಯಿಂದ ಗೋಚರಿಸಲು ಶುರುವಾಗುವುದು. ಅದು ಒಳ್ಳೆಯತನ ಇರಬಹುದು ಕೆಟ್ಟತನವೂ ಆಗಬಹುದು. ಮಾರ್ವೆಲ್‌ನವರ ಮೊದಲ ಸಿನಿಮಾ ಕ್ಯಾಪ್ಟನ್ ಅಮೆರಿಕ: ದ ಫಸ್ಟ್ ಅವೆಂಜರ್ ಈ ವಿಚಾರವನ್ನೇ ಪ್ರತಿಪಾದಿಸುತ್ತದೆ. ಅದರಲ್ಲಿ ಸ್ಟೀವ್ ಎನ್ನುವ ಯುವಕನಿಗೆ ಸೇನೆಗೆ ಸೇರುವ ಅದಮ್ಯ ಹಂಬಲ. ಅದಕ್ಕೆ ಬೇಕಾದ ದೈಹಿಕ ಅರ್ಹತೆ ಇಲ್ಲದಿದ್ದರೂ ಐದು ನಗರಗಳಲ್ಲಿ ಪರೀಕ್ಷೆಗೆ ಹಾಜರಾಗಿರುತ್ತಾನೆ. ಅವನ ಆಸಕ್ತಿಯನ್ನು ನೋಡಿ ಆಯ್ಕೆ ಸಮಿತಿಯಲ್ಲಿದ್ದ ವೈದ್ಯ ಡಾ. ಅಬ್ರಹಾಂ ಎರ್ಸ್ಕಿನ್ ಆತನನ್ನು ಸೇನೆಗೆ ಸೇರಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಆತನನ್ನು ಅಪ್ರತಿಮ ಸೈನಿಕನನ್ನಾಗಿಸುವ (ಸುಪರ್ ಸೋಲ್ಜರ್) ಔಷಧಿಯನ್ನು ಕೊಡಲು ಆಯ್ಕೆ ಮಾಡಿಕೊಳ್ಳುತ್ತಾರೆ.

ಆದರೆ ಸೇನೆಯ ಕರ್ನಲ್‌ಗೆ ಪುರುಷತ್ವದ ಪ್ರತೀಕವಾಗಿರುವ ಬಲಿಷ್ಠ ಸೈನಿಕನೊಬ್ಬನನ್ನು ಆಯ್ಕೆ ಮಾಡಬೇಕೆಂದಿರುತ್ತದೆ. ಅಂಥವರಲ್ಲಿ ಮಾತ್ರ ಧೈರ್ಯ ಇರುತ್ತದೆಂಬುದು ಅವರ ನಂಬಿಕೆ. ಅದನ್ನು ಸಾಧಿಸಿ ತೋರಿಸಲು ಹಗುರಕ್ಕೆ ಒಂದು ನಕಲಿ ಗ್ರೆನೇಡನ್ನು ಸ್ಟೀವ್ ಇರುವಲ್ಲಿ ಉರುಳಿಸುತ್ತಾರೆ. ಉಳಿದವರೆಲ್ಲರೂ ತಮ್ಮ ಜೀವ ಉಳಿಸಿಕೊಳ್ಳಲು ಓಡಿದರೆ ಸ್ಟೀವ್ ಮಾತ್ರ ಗ್ರೆನೇಡ್ ಮೇಲೆ ಉರುಳಿ ಬಿದ್ದು ಬೇರೆಯವರಿಗೆ ತಪ್ಪಿಸಿಕೊಳ್ಳುವಂತೆ ಕೂಗುತ್ತಾನೆ. ಈ ಅಸಾಮಾನ್ಯ ಕೆಲಸ ಮಾಡುವುದರ ಮೂಲಕ ಸ್ಟೀವ್ ಪೌರುಷದ ಪರಿಭಾಷೆಯನ್ನೇ ಬದಲಾಯಿಸಿಬಿಡುತ್ತಾನೆ... ಮನುಷ್ಯ ರೂಪುಗೊಳ್ಳುವುದು ಅವನ ಎದೆಯಲ್ಲಿರುವ ಕರುಣೆ ಪ್ರೀತಿಯಂತಹ ಭಾವನೆಗಳಿಂದ ಎಂದು ನಂಬಿದ ಡಾಕ್ಟರ್ ಎರ್ಸ್ಕಿನ್, ಸ್ಟೀವ್ ಮೇಲಿಟ್ಟಿದ್ದ ನಂಬಿಕೆ ಹುಸಿಯಾಗುವುದಿಲ್ಲ.

ಸ್ಟೀವ್ ತನ್ನನ್ನೇ ಏಕೆ ಆಯ್ಕೆ ಮಾಡಿದ್ದೆಂದು ಕೇಳಿದಾಗ 'ನಾನು ಕೊಡುವ ಔಷಧಿ ಮನುಷ್ಯನೊಳಗೆ ಏನಿದೆಯೋ ಅದನ್ನು ಹೆಚ್ಚಿಸುತ್ತದೆ. ಒಳ್ಳೆಯದು ಶ್ರೇಷ್ಠವಾಗುತ್ತದೆ ಕೆಟ್ಟದ್ದು ಪರಮ ನೀಚವಾಗುತ್ತದೆ. ಬಲಶಾಲಿ ಮನುಷ್ಯನಿಗೆ ಇನ್ನೂ ಹೆಚ್ಚಿನ ಅಧಿಕಾರ ಸಿಕ್ಕಿದರೆ ಆತ ಅದರ ಮೇಲಿನ ಗೌರವವನ್ನು ಕಳೆದುಕೊಳ್ಳುತ್ತಾನೆ. ಆದರೆ ದುರ್ಬಲನಿಗೆ ಶಕ್ತಿಯ ಬೆಲೆ ಗೊತ್ತಿರುತ್ತದೆ. ದುರ್ಬಲನಿಗೆ ಬಲಿಷ್ಠರಿಂದ ಅನುಭವಿಸಿದ ನೋವಿನ ಅರಿವಿದ್ದರೆ ಆತನಿಗೆ ಬೇರೆಯವರ ಮೇಲೆ ಸಹಾನುಭೂತಿ ಇರುತ್ತದೆ' ಎನ್ನುತ್ತಾರೆ ಎರ್ಸ್ಕಿನ್.

ಅಷ್ಟೇ ಅಲ್ಲ, 'ನಾಳೆ ನೀನು ಬಲಶಾಲಿಯಾದ ಮೇಲೆ ಪರಿಪೂರ್ಣ ಸೈನಿಕನಾಗಬೇಕೆಂದಿಲ್ಲ, ಆದರೆ ಈಗಿನಂತೆಯೇ ಒಬ್ಬ ಒಳ್ಳೆಯ ಮನುಷ್ಯನಾಗಿರು' ಎನ್ನುತ್ತಾರೆ.

ಹಣ, ಅಧಿಕಾರ, ಅಂತಸ್ತುಗಳ ಶೋಕಿಯ ನಡುವೆ, ಒಳ್ಳೆಯತನದ ಮುಖವಾಡಗಳ ನಡುವೆ ಮನುಷ್ಯತ್ವವನ್ನು ಕಳೆದುಕೊಳ್ಳದ ಜತೆಗೇ ಸಣ್ಣತನವಿಲ್ಲದ ಅಪ್ಪಟ ಮನುಷ್ಯರನ್ನು ಗುರುತಿಸುವ ಜವಾಬ್ದಾರಿ ನಮ್ಮೆಲ್ಲರದ್ದೂ ಆಗಿದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಪೂರ್ಣಿಮಾ ಗಂ. 19-23 ನಕ್ಷತ್ರ: ವಿಶಾಖ ಗಂ. 9-15 ಯೋಗ: ಪರಿಘ ಗಂ. 12-12 ಕರಣ: ವಿಷ್ಟಿ ಗಂ. 7-10, ವೃಷಭ ಮಾಸದ ನೇ 10 ದಿನ, ಮಳೆನಕ್ಷತ್ರ: ಕೃತ್ತಿಕಾ 4.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-07 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 14 ಜುಲ್ಕಾಯಿದ್
ದಿನ ವಿಶೇಷ : ಬುದ್ಧ ಪೂರ್ಣಿಮಾ, ಅದೃಷ್ಟ ಸಂಖ್ಯೆ : 1, 5

ಮೇಷ: ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಪರ ಊರಿಗೆ ಕಳುಹಿಸುವ ವಿಚಾರವೇ ಅರಗಿಸಿಕೊಳ್ಳಲಾಗದ ತುತ್ತಾಗುತ್ತದೆ. ಕೆಲಸಗಾರರ ಸಮಸ್ಯೆಗಳಿಗೆ ಸ್ಪಂದಿಸುವುದು ಅನಿವಾರ್ಯ. ಮಾನಸಿಕ ನೆಮ್ಮದಿ ಇರುವುದು.

ವೃಷಭ: ಆರ್ಥಿಕ ಸಮಸ್ಯೆ ಎದುರಾಗಿ ಸಹೋದರರ ಅಥವಾ ಸಂಬಂಧಿಕರ ಸಹಾಯ ಕೇಳುವುದು ಅನಿವಾರ್ಯ. ಸೋದರ ಮಾವನ ಮಾತನ್ನು ಕೇಳಿ. ದೇಹದಲ್ಲಿನ ಅಧಿಕ ಉಷ್ಣಾಂಶದಿಂದ ದಂತವ್ಯಾಧಿ ಸಂಭವಿಸಬಹುದು.

ಮಿಥುನ: ಪ್ರಯಾಣದ ಪರಿಣಾಮ ದೇಹಾಯಾಸ ಹಾಗೂ ನೋವನ್ನು ಅನುಭವಿಸುವಿರಿ. ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆಯಾಗುವುದು. ಬಂಗಾರದ ಮೇಲಿನ ಧನ ಹೂಡಿಕೆಯಲ್ಲಿ ಲಾಭ ಆಗುವುದು.

ಕರ್ಕಾಟಕ: ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ನೆರವಿಗೆ ನಿಲ್ಲುವರು. ದ್ವಿಚಕ್ರ ವಾಹನಗಳ ಮಾರಾಟಗಾರರು ಜೋರಿನ ವಹಿವಾಟು ನಡೆಸುವರು. ನಿತ್ಯದ ಹಣಕಾಸಿನ ಕೊರತೆ ಇರುವುದಿಲ್ಲ.

ಸಿಂಹ: ಐಹಿಕ ಸುಖಗಳನ್ನು ಆದಷ್ಟು ಬಿಟ್ಟುಬಿಡುವ ಮನಸ್ಥಿತಿ ಹಿರಿಯ ನಾಗರಿಕರಲ್ಲಿ ಉಂಟಾಗುತ್ತದೆ. ಸಂಧಾನ ಅಥವಾ ಮಧ್ಯಸ್ಥಿಕೆ ವಹಿಸುವಂತಹ ಕೆಲಸಗಳನ್ನು ಮಾಡುವಿರಿ. ಗೃಹಾಲಂಕಾರ ವಸ್ತುಗಳ ವ್ಯಾಪಾರದಿಂದ ಲಾಭ.

ಕನ್ಯಾ: ಉತ್ತಮ ಕೆಲಸ ನಿರ್ವಹಣೆಯಿಂದ ಬಡ್ತಿಯ ವಿಚಾರ ಸುಳಿದಾಡಿ ಸಹೋದ್ಯೋಗಿಗಳ ಈರ್ಷ್ಯೆಗೆ ಕಾರಣವಾಗುತ್ತದೆ. ಬಾಲ ಕಲಾವಿದರ ಪ್ರದರ್ಶನಗಳು ಉತ್ತಮ ಹೆಸರನ್ನು ಗಳಿಸಿಕೊಡುವುದು.

ತುಲಾ: ಜೀವನದಲ್ಲಿ ಹೊಸ ರೀತಿಯ ಚಲನೆ ಇಲ್ಲದೆ ಬಂದ ಬೇಸರವು ದಿನಚರಿಯ ಬದಲಾವಣೆಯಿಂದ ನಿವಾರಣೆಯಾಗಬಹುದು. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಿರಿ.

ವೃಶ್ಚಿಕ: ವಾಸಸ್ಥಾನದ ಬದಲಾವಣೆಯನ್ನು ಬಯಸಿದ ನಿಮಗೆ ಇಂದು ಹರ್ಷದ ಸಮಯ. ಬುದ್ಧಿವಂತಿಕೆಯನ್ನು ಉಪಯೋಗಿಸಿ ಗ್ರಾಹಕರಲ್ಲಿ ವ್ಯವಹರಿಸಿದರೆ ಲಾಭದ ದಿನವಾಗುತ್ತದೆ.

ಧನು: ಪಾರಮಾರ್ಥಿಕವಾಗಿ ಸಾಧನೆಗಳೆಷ್ಟೇ ಇದ್ದರೂ ಸಮಾಜದಲ್ಲಿ ಬದುಕುವಾಗ ಲೌಕಿಕ ಜ್ಞಾನದ ಅಗತ್ಯ ಇದ್ದೇ ಇರಬೇಕೆಂಬುವುದನ್ನು ಸ್ಮರಿಸಿ. ಭೂಮಿ ಖರೀದಿ ವಿಚಾರ ಮುಂದಕ್ಕೆ ಹಾಕುವ ಪರಿಸ್ಥಿತಿ ಕಂಡುಬಂದೀತು.

ಮಕರ: ಸ್ನೇಹಿತನ ಕೆಲವು ಅನಿರೀಕ್ಷಿತ ನಡೆಗಳನ್ನು ಗುರುತಿಸಿ ಆತನ ಮಾನಸಿಕ ಖಿನ್ನತೆಯನ್ನು ಬೆಳಕಿಗೆ ತರುವಂಥ ಕೆಲಸ ಮಾಡುವ ಸಾಧ್ಯತೆ ಇದೆ. ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕುವುದು ಉತ್ತಮ.

ಕುಂಭ: ಚಾರಣಿಗರಿಗೆ ಬಯಸಿದ ಸ್ಥಾನಕ್ಕೆ ತೆರಳುವ ಅವಕಾಶ ಸಿಗದೆ ಬಹಳ ಬೇಸರವಾಗುತ್ತದೆ. ವದಂತಿಗಳಿಗೆ ಕಿವಿಗೊಡದೆ ಕೆಲಸವನ್ನು ನೀವು ಮುಂದುವರಿಸಿಕೊಂಡು ಹೋಗಿ.


ಮೀನ: ಜನರ ಅಭಿಪ್ರಾಯವನ್ನು ಸಂಗ್ರಹಿಸಲು ಹೋಗಿ ಅದರಿಂದ ಅಪಮಾನಕ್ಕೊಳಗಾಗುವ ಸಾಧ್ಯತೆ ಇದೆ. ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ರಕ್ಷಿಸಲಿದೆ. ವಿವಾಹದಂತಹ ಶುಭಕಾರ್ಯಗಳ ನಿರೀಕ್ಷೆ ಮಾಡಬಹುದು.

ಪದಬಂಧ 5689

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜಗಲಿಯಲ್ಲೇ ಪ್ರಪಂಚ ಕಾಣುತ್ತಿದೆಯಲ್ಲಾ! (2)
3.ಕಿರುಬೆರಳ ಪಕ್ಕದ ಕೈಬೆರಳು (4)
5.ವನದೊಳಗೆ ಸಿಕ್ಕಿರುವ ಬಟ್ಟೆ (3)
7.ಕಣ್ಣ ಕೊನೆಯ ನೋಟ (4)
9.ಯಾವುದೇ ವಿಷಯದ ಕ್ರಮಬದ್ಧವಾದ ನಿರೂಪಣೆ (3)
10.ಸಾಲ ಪಡೆದು ನೋಡಿರುವ ಸಮುದ್ರ (3)
11.ಜೀರ್ಣೋದ್ಧಾರ ಮಾಡಿದುದು (4)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ರಸಿಕತೆ ಇಲ್ಲದವನು (4)
16.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಸೂಕ್ಷ್ಮ ಅಂಗ (2)

ಮೇಲಿಂದ ಕೆಳಕ್ಕೆ
2.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
3.ತುಂಬ ಹದಗೆಟ್ಟ ಸ್ಥಿತಿ (3)
4.ಮಂಕಾಗಿ ಬೆಳಕು ಬೀರು (3)
6.ಸರ ಧರಿಸಿದವನ ಪಾಳಿ (3)
8.ಪಾಲು ಮಾಡಿದಾಗ ಬಂದಿರುವ ಪತ್ರ (3)
9.ವನದೊಳಗೆ ಮಾಡಿದ ಕ್ಷೌರ (3)
10.ಕಣದೊಳಗೆ ಆಗಿರುವ ಲಗ್ನ (3)
12.ಆಸಕ್ತನಾದವನು ಇಲ್ಲಿದ್ದಾನೆ (3)
13.ದಶಕದಿಂದಲೂ ನಿರ್ನಾಮವಾಗದ ಸೊಳ್ಳೆ (3)
14.ವ್ಯಾಪಾರಿ ಏಕೋ ತಿರುಗಿದ್ದಾನಲ್ಲಾ? (3)



5688ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜವಾಬ್ದಾರಿ 3.ಜಟಿಲ
4.ಪುರೋಹಿತ 6.ಜುಲುಮೆ
8.ಕಾರಣ 9.ಅಗುಳು
10.ಲಶುನ 12.ಕಸರತ್ತು
14.ಕಮರಿ 15.ನವಿರೆಳೆ

ಮೇಲಿಂದ ಕೆಳಕ್ಕೆ:
1.ಜಲ 2.ರಿಪು
3.ಜಹಜು 5.ತರುಣ
7.ಮೆದುಳು 8.ಕಾದಲ
9.ಅಳ್ಳಕ 11.ನಸರಿ
13.ತ್ತುನ 14.ಕಳೆ

ಸುಡೊಕು 6074


1		3	5		6		4	
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6073 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಷೇರುಪೇಟೆ ವಹಿವಾಟು 267



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,529
ಇಂದಿನ ಅಂತ್ಯ	22,597
▲	68
ದಿನದ ಗರಿಷ್ಠ	22,629

ವಿನಿಮಯ ದರ

$ ಡಾಲರ್	83.29
£ ಪೌಂಡ್	105.98
€ ಯುರೊ	90.31
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1505 (1505)
ಸೋಯಾ (ರಿಫೈನ್ಡ್)	₹930 (930)
ಸೂರ್ಯಕಾಂತಿ (ರಿಫೈನ್ಡ್)	₹930 (927)
ಪಾಮೋಲಿನ್	₹895 (896)

ಕೊಬ್ಬರಿ ಧಾರಣೆ
(ಕ್ವಿಂಟಲ್‌ಗೆ)

ಅರಸೀಕೆರೆ	₹8000-8800
ಮಧುಗಿರಿ	₹7500-9000
ತಿಪಟೂರು	₹8500-9500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹173
ಗುಡ್ ಲಾಟ್	₹163

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರಿ.ಬಿ)	₹272-490
ದ್ವಿತಳಿ (ಬಿ.ವಿ)	₹285-645

ಮಾಜಿ ಸಂಸದ ಇಕ್ಬಾಲ್ ಅಹಮದ್ ಸರಡಗಿ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ


ಇಕ್ಬಾಲ್ ಅಹಮದ್ ಸರಡಗಿ

ಕಲಬುರಗಿ: ವಯೋಸಹಜ ಅನಾರೋಗ್ಯದಿಂದ ಮಂಗಳವಾರ ತಡರಾತ್ರಿ ನಿಧನರಾದ ಮಾಜಿ ಸಂಸದ ಇಕ್ಬಾಲ್ ಅಹಮದ್ ಸರಡಗಿ (80) ಅವರ ಅಂತ್ಯಕ್ರಿಯೆಯು ಇಲ್ಲಿನ ಹಫ್ತ್ ಗುಂಬಜ್ ಸಮೀಪದ ಮಕ್‌ಬರ್ ಖಬರಸ್ತಾನದಲ್ಲಿ ಬುಧವಾರ ಜರುಗಿತು.

ಇದಕ್ಕೂ ಮುನ್ನ ಇಕ್ಬಾಲ್ ಅವರ ನಿವಾಸದಲ್ಲಿ ಪುತ್ರ ಇರ್ಫಾನ್ ಇಕ್ಬಾಲ್ ಅಹಮದ್ ಹಾಗೂ ಕುಟುಂಬದ ಸದಸ್ಯರು ಧಾರ್ಮಿಕ ವಿಧಿ-ವಿಧಾನ ನೆರವೇರಿಸಿದರು. ನಂತರ ದರ್ಗಾ ರಸ್ತೆಯ ನ್ಯಾಷನಲ್ ಶಾಲೆಯ ಆವರಣದಲ್ಲಿ ಸಕಲ ಸರ್ಕಾರಿ ಗೌರವ ಸಲ್ಲಿಸಲಾಯಿತು. ಅಂತಿಮ ದರ್ಶನಕ್ಕೆ ಬಂದಿದ್ದ ಸಮುದಾಯದವರು ಸಂಜೆ 5.40ಕ್ಕೆ ನಮಾಜ್-ಎ-ಜನಾಜಾ (ಪ್ರಾರ್ಥನೆ) ಸಲ್ಲಿಸಿದರು.

ಇಕ್ಬಾಲ್ ಅವರ ಸಹಪಾಠಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವ ಡಾ.ಶರಣಪ್ರಕಾಶ ಪಾಟೀಲ ಸೇರಿದಂತೆ ಹಲವರು ಅಂತಿಮ ದರ್ಶನ ಪಡೆದರು. ಬಳಿಕ ಮಕ್‌ಬರ್ ಖಬರಸ್ತಾನದಲ್ಲಿ ಅಂತ್ಯಕ್ರಿಯೆ ಮಾಡಲಾಯಿತು.

ನಾಲ್ಕೂವರೆ ದಶಕಗಳ ರಾಜಕೀಯ ಜೀವನದಲ್ಲಿ ಎರಡು ಬಾರಿ ಲೋಕಸಭೆಗೆ (1999 ಮತ್ತು 2004) ಮತ್ತು ಒಂದು ಬಾರಿ ವಿಧಾನಪರಿಷತ್ತಿಗೆ (2014) ಆಯ್ಕೆಯಾಗಿದ್ದರು. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಅಲ್ ಇಂಡಿಯಾ ಹಜ್‌ಕಮಿಟಿ, ವಕ್ಫ್ ಬೋರ್ಡ್, ಪಾರ್ಲಿಮೆಂಟರಿ ಜಂಟಿ ಸಮಿತಿಯ ಮುಖ್ಯಸ್ಥರೂ ಆಗಿದ್ದರು. 2012ರ ಜೂನ್‌ನಲ್ಲಿ ನಡೆದ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ದಿಂದಾಗಿ ಇಕ್ಬಾಲ್ ಅವರು ಸೋಲು ಅನುಭವಿಸಿದ್ದರು.

ಅವರಿಗೆ ಪತ್ನಿ ಸಬಿಹಾ ಬೇಗಂ, ಪುತ್ರ ಇರ್ಫಾನ್ ಮತ್ತು ಪುತ್ರಿ ಡಾ.ಜಹೇರಾ ಸರಡಗಿ ಇದ್ದಾರೆ.

₹2.11 ಲಕ್ಷ ಕೋಟಿ ಪಾವತಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಒಪ್ಪಿಗೆ

ಕೇಂದ್ರಕ್ಕೆ ದಾಖಲೆ ಲಾಭಾಂಶ

ಮುಂಬೈ (ಪಿಟಿಐ): 2023-24ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರಕ್ಕೆ ₹2.11 ಲಕ್ಷ ಕೋಟಿ ಲಾಭಾಂಶ ಪಾವತಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಒಪ್ಪಿಗೆ ನೀಡಿದೆ.

ಗವರ್ನರ್ ಶಕ್ತಿಕಾಂತ ದಾಸ್ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್‌ಬಿಐ ನಿರ್ದೇಶಕರ ಸಭೆಯಲ್ಲಿ ಇದಕ್ಕೆ ಸಮ್ಮತಿ ನೀಡಲಾಗಿದೆ.

2022-23ನೇ ಆರ್ಥಿಕ ವರ್ಷದಲ್ಲಿ ಕೇಂದ್ರಕ್ಕೆ ₹87,416 ಕೋಟಿ ಲಾಭಾಂಶ ಪಾವತಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ದಪ್ಪಟ್ಟಾಗಿದೆ. 2018-19ರಲ್ಲಿ ನೀಡಿದ್ದ ₹1.76 ಲಕ್ಷ ಕೋಟಿ ಲಾಭಾಂಶವೇ ಇಲ್ಲಿಯವರೆಗಿನ ದಾಖಲೆಯ ಮೊತ್ತವಾಗಿತ್ತು.

2024-25ನೇ ಆರ್ಥಿಕ ವರ್ಷದಲ್ಲಿ ಸರ್ಕಾರದ ವರಮಾನ ಹಾಗೂ ವೆಚ್ಚದ ನಡುವಿನ ಅಂತರವಾಗಿರುವ ವಿತ್ತೀಯ ಕೊರತೆಯ ಮೊತ್ತವನ್ನು ₹17.34 ಲಕ್ಷ ಕೋಟಿಗೆ ನಿಗದಿಪಡಿಸಲಾಗಿದೆ. ಒಟ್ಟಾರೆ ವಿತ್ತೀಯ ಕೊರತೆಯನ್ನು ದೇಶದ ಒಟ್ಟು ಜಿಡಿಪಿಯ ಶೇ 5.1ರಷ್ಟು ಕಾಯ್ದುಕೊಳ್ಳಲು ಕೇಂದ್ರವು ನಿರ್ಧರಿಸಿದೆ.

ಅಲ್ಲದೆ, 2024-25ನೇ ಸಾಲಿನ ಬಜೆಟ್‌ನಲ್ಲಿ ಆರ್‌ಬಿಐ ಹಾಗೂ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಂದ ₹1.04 ಲಕ್ಷ ಕೋಟಿ ಲಾಭಾಂಶದ ಗುರಿ ನಿಗದಿಪಡಿಸುವ ನಿರೀಕ್ಷೆಯಿದೆ.

ನಿರ್ದೇಶಕರ ಮಂಡಳಿಯು ಜಾಗತಿಕ ಮತ್ತು ದೇಶದ ಆರ್ಥಿಕತೆಯ ಚಿತ್ರಣವನ್ನು ಪರಾಮರ್ಶೆ ನಡೆಸಿತು. 2023-24ನೇ ಆರ್ಥಿಕ ವರ್ಷದ ವಾರ್ಷಿಕ ವರದಿ ಹಾಗೂ ಹಣಕಾಸಿಗೆ ಸಂಬಂಧಿಸಿದ ಹೇಳಿಕೆಗಳಿಗೆ ಸಭೆಯು ಅನುಮೋದನೆ ನೀಡಿದೆ.

ಬಿಮಲ್ ಜಲನ್ ಸಮಿತಿ ಶಿಫಾರಸು ಏನು?

ಬಿಮಲ್ ಜಲನ್ ಅಧ್ಯಕ್ಷತೆಯ ಪರಿಣತರ ಸಮಿತಿ ನೀಡಿರುವ ಶಿಫಾರಸಿನ ಅನ್ವಯ 2019ರಿಂದ ಆರ್ಥಿಕ ಬಂಡವಾಳದ ಚೌಕಟ್ಟನ್ನು (ಇಸಿಎಫ್) ಅಳವಡಿಸಿಕೊಳ್ಳಲಾಗಿದೆ. ಇದರ ಆಧಾರದ ಮೇಲೆ ಲಾಭಾಂಶ ನೀಡಲಾಗುತ್ತಿದೆ ಎಂದು ಆರ್‌ಬಿಐ ಹೇಳಿದೆ.

ಆರ್‌ಬಿಐನ ಬ್ಯಾಲೆನ್ಸ್ ಶೀಟ್‌ಗೆ ಅನುಗುಣವಾಗಿ ಅನಿರೀಕ್ಷಿತ ಹಣಕಾಸು ಪರಿಸ್ಥಿತಿಯನ್ನು ಎದುರಿಸಲು ಇರುವ ತುರ್ತು ನಿಧಿಯ ಪ್ರಮಾಣವನ್ನು ಶೇ 5.5ರಿಂದ ಶೇ 6.5ರ ಮಿತಿಯಲ್ಲಿ ಕಾಯ್ದುಕೊಳ್ಳುವಂತೆ ಸಮಿತಿಯು ಶಿಫಾರಸು ಮಾಡಿದೆ.

2018-19ರಿಂದ 2021-22ರ ವರೆಗೆ ಸ್ಥೂಲ ಆರ್ಥಿಕ ಪರಿಸ್ಥಿತಿ ಹಾಗೂ ಕೋವಿಡ್ ಸಾಂಕ್ರಾಮಿಕದಿಂದಾಗಿ ತುರ್ತು ನಿಧಿಯ ಪ್ರಮಾಣವನ್ನು ನಿರ್ದೇಶಕರ ಮಂಡಳಿಯು ಶೇ 5.50ಕ್ಕೆ ನಿಗದಿಪಡಿಸಿತ್ತು.

2022-23ರಲ್ಲಿ ಆರ್ಥಿಕತೆಯ ಬೆಳವಣಿಗೆ ಸುಧಾರಿಸಿದ್ದರಿಂದ ಈ ನಿಧಿಯ ಪ್ರಮಾಣವನ್ನು ಶೇ 6ಕ್ಕೆ ಹೆಚ್ಚಿಸಲಾಗಿತ್ತು. ದೇಶದ ಆರ್ಥಿಕತೆಯು ಚೇತರಿಕೆ ಕಂಡಿದ್ದರಿಂದ 2023-24ನೇ ಆರ್ಥಿಕ ವರ್ಷಕ್ಕೆ ತುರ್ತು ನಿಧಿಯ ಪ್ರಮಾಣವನ್ನು ಶೇ 6.50ಕ್ಕೆ ಹೆಚ್ಚಿಸಲಾಗಿತ್ತು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಸುದ್ದಿ 2 ನಿಮಿಷ

ಪೇಟಿಎಂ: ₹550 ಕೋಟಿ ನಷ್ಟ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆಯಾದ ಒನ್‌97 ಕಮ್ಯುನಿಕೇಷನ್ಸ್ 2023-24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹550 ಕೋಟಿ ನಿವ್ವಳ ನಷ್ಟ ಕಂಡಿದೆ.

2022-23ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿಯೂ ಕಂಪನಿಯು ₹167 ಕೋಟಿ ನಷ್ಟ ಕಂಡಿತ್ತು. ವರಮಾನದಲ್ಲಿ ಶೇ 3ರಷ್ಟು ಕಡಿಮೆಯಾಗಿದ್ದು, ₹2,267 ಕೋಟಿ ಇಳಿಕೆಯಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

'ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿದೆ. ಹಾಗಾಗಿ, ಬ್ಯಾಂಕ್‌ನಿಂದ ನೀಡುವ ಪೇಟಿಎಂ ವಾಲೆಟ್ ಮತ್ತು ಫಾಸ್ಟ್ಯಾಗ್ ಸೇವೆ ಸ್ಥಗಿತಗೊಂಡಿದೆ. ಇದರಿಂದ ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿಯ (ಇಬಿಐಟಿಡಿಎ) ಸುಮಾರು ₹500 ಕೋಟಿ ಮೊತ್ತದ ಮೇಲೆ ಪರಿಣಾಮ ಬೀರಿದೆ. ಇದರಿಂದ ಲಾಭದಲ್ಲಿ ಇಳಿಕೆಯಾಗಿದೆ' ಎಂದು ಕಂಪನಿಯು ತಿಳಿಸಿದೆ.

2023-24ರ ಪೂರ್ಣ ಹಣಕಾಸು ವರ್ಷದಲ್ಲಿ ₹1,422 ಕೋಟಿ ನಷ್ಟವಾಗಿದೆ. ವರಮಾನವು ₹7,990 ಕೋಟಿಯಿಂದ ₹9,978 ಕೋಟಿಗೆ (ಶೇ 25ರಷ್ಟು) ಏರಿಕೆಯಾಗಿದೆ. ಕಂಪನಿಯ ಸರಾಸರಿ ವಾಣಿಜ್ಯ ಮೌಲ್ಯದ (ಜಿಎಂವಿ) ಬೆಳವಣಿಗೆ ಮತ್ತು ಹಣಕಾಸು ಸೇವೆಗಳಲ್ಲಿನ ಪ್ರಗತಿಯಿಂದ ವರಮಾನದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹1,500 ಕೋಟಿಯಿಂದ ₹1,600 ಕೋಟಿ ವರಮಾನ ನಿರೀಕ್ಷಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ/ ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಇನ್ಫೊಸಿಸ್ ಷೇರುಗಳ ಖರೀದಿಯಿಂದಾಗಿ ಷೇರು ಸೂಚ್ಯಂಕಗಳು ಐದನೇ ದಿನವಾದ ಬುಧವಾರವೂ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 267 ಅಂಶ ಏರಿಕೆಯಾಗಿ 74,221ಕ್ಕೆ ಅಂತ್ಯಗೊಂಡಿತು.


ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 68 ಅಂಶ ಹೆಚ್ಚಳವಾಗಿ 22,597ಕ್ಕೆ ಕೊನೆಗೊಂಡಿತು.

₹22 ಲಕ್ಷ ಕೋಟಿ ವೃದ್ಧಿ: ಒಂಬತ್ತು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹22.59 ಲಕ್ಷ ಕೋಟಿಯಷ್ಟು ವೃದ್ಧಿಯಾಗಿದೆ. ಮಂಗಳವಾರ ಬಿಎಸ್‌ಇ ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂ-ಕ್ಯಾಪ್) ಪ್ರಥಮ ಬಾರಿಗೆ 5 ಟ್ರಿಲಿಯನ್ ಡಾಲರ್‌ಗೆ (₹415 ಲಕ್ಷ ಕೋಟಿ) ಮುಟ್ಟಿತ್ತು.

ಅಡಿಕೆ ಧಾರಣೆ

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕುಮಟ	
ಬೆಟ್ಟೆ	36839-41211
ಚಿಪ್ಪು	26499-32899
ಕೋಕ	13109-26590
ಫ್ಯಾಕ್ಟರಿ	10509-20949
ಹಳೆಚಾಲಿ	38019-40429
ಹೊಸಚಾಲಿ	32899-37099
ಸಾಗರ	
ಚಾಲಿ	35649-35649
ಶಿವಮೊಗ್ಗ	
ಬೆಟ್ಟೆ	46569-54629
ಗೊರಬಲು	16500-35499
ರಾಶಿ	27008-53399
ಸರಕು	50099-81896
ಸಿದ್ದಾಪುರ	
ಬಿಳಿಗೋಟು	27100-31509
ಚಾಲಿ	34809-38009
ಕೋಕ	26689-29699
ಹಳೆಚಾಲಿ	36549-36899

ಸತ್ಯ ನಾದೆಲ್ಲಾಗೆ ದಂಡ



ನವದೆಹಲಿ (ಪಿಟಿಐ): ಕಂಪನಿಗಳ ಕಾಯ್ದೆಯ ಉಲ್ಲಂಘನೆಗೆ ಸಂಬಂಧಿಸಿದಂತೆ ಮೈಕ್ರೊಸಾಫ್ಟ್ ಒಡೆತನದ ವೃತ್ತಿಪರರ ಜಾಲತಾಣವಾದ ಲಿಂಕ್ಡ್‌ಇನ್ ಇಂಡಿಯಾ, ಸತ್ಯ ನಾದೆಲ್ಲಾ ಸೇರಿ ಎಂಟು ಮಂದಿಗೆ ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು, ₹27.10 ಲಕ್ಷ ದಂಡ ವಿಧಿಸಿದೆ.

ಕಾಯ್ದೆಯಡಿ ಲಾಭದಾಯಕ ಮಾಲೀಕತ್ವಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿದೆ. ಹಾಗಾಗಿ, ದಂಡ ವಿಧಿಸಲಾಗಿದೆ ಎಂದು ದೆಹಲಿ ಮತ್ತು ಹರಿಯಾಣ ವಿಭಾಗದ ಕಂಪನಿಗಳ ರಿಜಿಸ್ಟ್ರಾರ್ ಆದೇಶದಲ್ಲಿ ತಿಳಿಸಿದ್ದಾರೆ.

ಸೆಕ್ಷನ್ 90ರ ಅನ್ವಯ ಸೀಮಿತ ಪಾಲುದಾರಿಕೆ ಕಂಪನಿಗಳು ಲಾಭದಾಯಕ ಮಾಲೀಕತ್ವ ಕುರಿತಂತೆ ಕಂಪನಿಗಳ ರಿಜಿಸ್ಟ್ರಾರ್‌ಗೆ ವರದಿ ಮಾಡಬೇಕಿರುವುದು ಕಡ್ಡಾಯ.

2020ರ ಜೂನ್ 1ರಂದು ಲಿಂಕ್ಡ್‌ಇನ್ ಕಾರ್ಪೊರೇಷನ್‌ನ ಸಿಇಒ ಆಗಿ ರಯಾನ್ ರೋಸ್ಲಾನ್ಸ್ಕಿ ನೇಮಕವಾಗಿದ್ದರು. ಅಧಿಕಾರವಹಿಸಿಕೊಂಡ ದಿನದಿಂದಲೂ ಅವರು ಮೈಕ್ರೊಸಾಫ್ಟ್ ಸಿಇಒ ಸತ್ಯ ನಾದೆಲ್ಲಾ ಅವರ ಸುಪರ್ದಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಈ ಕುರಿತು ರಿಜಿಸ್ಟ್ರಾರ್‌ಗೆ ವರದಿ ಸಲ್ಲಿಸಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

22-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1505 (1515)
ಒಂದು ವಾರದ ಡೆಲಿವರಿ	1500 (1510)
ಸೋಯಾ ಕಚ್ಚಾ	893 (895)
ಪಾಮ್ ವಾರದ ಡೆಲಿವರಿ	893 (894)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹**73,700** (74,000)
ಬೆಳ್ಳಿ ಕೆ.ಜಿ ₹**93,000** (92,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಎಚ್‌ಇಎಲ್ ಎಂ-ಕ್ಯಾಪ್ ₹6,023 ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ (ಬಿಎಚ್‌ಇಎಲ್) ಷೇರಿನ ಮೌಲ್ಯವು ಬುಧವಾರ ಶೇ5ರಷ್ಟು ಇಳಿದಿದೆ.

2023-24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭದಲ್ಲಿ ಶೇ 25ರಷ್ಟು ಕುಸಿತವಾಗಿದೆ. ಇದರಿಂದ ಕಂಪನಿಯ ಷೇರಿನ ಮೌಲ್ಯದಲ್ಲಿ ಕುಸಿತವಾಗಿದೆ. ಬಿಎಸ್‌ಇ, ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆಯು ಕ್ರಮವಾಗಿ ₹301.90 ಮತ್ತು ₹302.40ಕ್ಕೆ ಇಳಿ ದಿದೆ. ಕಂಪನಿಯ ಮಾರುಕಟ್ಟೆ ಮೌಲ್ಯವು ಒಂದೇ ದಿನ ₹6,023 ಕೋಟಿ ಕರಗಿದೆ. ಒಟ್ಟು ಎಂ-ಕ್ಯಾಪ್ ₹1.05 ಲಕ್ಷ ಕೋಟಿ ಆಗಿದೆ.

ಬಾಂಗ್ಲಾದೇಶದ ಸಂಸದನ ಶವ ಕೋಲ್ಕತ್ತದಲ್ಲಿ ಪತ್ತೆ

ಢಾಕಾ(ಪಿಟಿಐ): ಭಾರತದಲ್ಲಿ ನಾಪತ್ತೆಯಾಗಿದ್ದ ಬಾಂಗ್ಲಾದೇಶದ ಸಂಸದ ಅನ್ವರುಲ್ ಅಜೀಂ ಅನಾರ್ ಅವರ ಮೃತದೇಹ ಕೋಲ್ಕತ್ತದಲ್ಲಿ ಪತ್ತೆಯಾಗಿದ್ದು, ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

'ಅವಾಮಿ ಲೀಗ್‌ನ ಸಂಸದ ಅನ್ವರುಲ್ ಅವರು ಕೋಲ್ಕತ್ತದ ಫ್ಲ್ಯಾಟ್‌ವೊಂದರಲ್ಲಿ ಕೊಲೆಯಾಗಿದ್ದಾರೆ. ಕೊಲೆ ಮಾಡಿದ ಆರೋಪಿಗಳೆಲ್ಲರೂ ಬಾಂಗ್ಲಾದೇಶದ ಪ್ರಜೆಗಳಾಗಿದ್ದು, ಇದೊಂದು ಯೋಜಿತ ಕೃತ್ಯವಾಗಿದೆ' ಎಂದು ಬಾಂಗ್ಲಾದೇಶದ ಗೃಹ ಸಚಿವ ಅಸಾದುಜ್ಮಾನ್ ಖಾನ್ ಅವರು ಬುಧವಾರ ತಿಳಿಸಿದ್ದಾರೆ.

'ಮೂರನೇ ಬಾರಿಗೆ ಸಂಸದರಾಗಿರುವ ಅನ್ವರುಲ್ ಅವರು ಚಿಕಿತ್ಸೆಗಾಗಿ ಮೇ 12ರಂದು ಭಾರತಕ್ಕೆ ಬಂದಿದ್ದರು. ಅನ್ವರುಲ್ ಅವರು ನಾಪತ್ತೆಯಾಗಿರುವ ಬಗ್ಗೆ ಮೇ 18ರಂದು ಕೋಲ್ಕತ್ತದಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ದ ಡೈಲಿ ಸ್ಟಾರ್ ಮಾಧ್ಯಮ ವರದಿ ಮಾಡಿದೆ.



ಅಂತ್ಯಕ್ರಿಯೆ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟ ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಅಂತ್ಯಕ್ರಿಯೆ ಅಂಗವಾಗಿ ಟೆಹ್ರಾನ್‌ನಲ್ಲಿ ಬುಧವಾರ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ–ಎಎಫ್‌ಪಿ ಚಿತ್ರ

ವಿಧಾನ ಪರಿಷತ್ ಚುನಾವಣೆ: ಬಿಜೆಪಿ ನಾಯಕರ ಸಭೆ

3 ಸ್ಥಾನಕ್ಕೆ 40 ಆಕಾಂಕ್ಷಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಪಕ್ಷಕ್ಕೆ ಸಿಗುವ ಮೂರು ಸ್ಥಾನಗಳಿಗೆ 40ಕ್ಕೂ ಹೆಚ್ಚು ಹೆಸರುಗಳು ಚರ್ಚೆಗೆ ಬಂದಿದ್ದು, ಆಕಾಂಕ್ಷಿಗಳ ಪಟ್ಟಿಯನ್ನು ವರಿಷ್ಠರಿಗೆ ಕಳುಹಿಸಿ ಆಯ್ಕೆ ತೀರ್ಮಾನವನ್ನು ಅವರಿಗೇ ಬಿಡಲು ಬುಧವಾರ ನಡೆದ ಬಿಜೆಪಿ ಪ್ರಮುಖ ನಾಯಕರ ಸಮಿತಿ ಸಭೆ ನಿರ್ಧರಿಸಿದೆ.

ಪಟ್ಟಿಯನ್ನು ಕಳುಹಿಸುವುದಕ್ಕೂ ಮುನ್ನ ಇನ್ನೊಂದು ಸುತ್ತಿನ ಸಭೆ ನಡೆಸಲು ತೀರ್ಮಾನಿಸಲಾಗಿದೆ. ನಿರ್ದಿಷ್ಟವಾಗಿ ಯಾರದೇ ಹೆಸರನ್ನು ಶಿಫಾರಸು ಮಾಡದೇ, ಆಕಾಂಕ್ಷಿಗಳ ಪಟ್ಟಿಯನ್ನು ಕಳಿಸಬೇಕು. ಸಂಭಾವ್ಯ ಅಭ್ಯರ್ಥಿಗಳು ಯಾರಾಗಬೇಕು ಎಂಬುದನ್ನು ವರಿಷ್ಠರೇ ತೀರ್ಮಾನ ಮಾಡಲಿ. ಆಗ ಯಾವುದೇ ಅಸಮಾಧಾನಕ್ಕೂ ಕಾರಣವಾಗುವುದಿಲ್ಲ ಎಂಬ ಚರ್ಚೆಯೂ ಸಭೆಯಲ್ಲಿ ನಡೆಯಿತು ಎಂದು ಮೂಲಗಳು ಹೇಳಿವೆ.

'ಮೂರು ಸ್ಥಾನಗಳಿಗೆ ಘಟಾನುಘಟಿಗಳ ಹೆಸರುಗಳು ಚರ್ಚೆಗೆ ಬಂದಿದ್ದು, ಯಾರನ್ನು ಪರಿಗಣಿಸಬೇಕು ಬಿಡಬೇಕು ಎಂಬ ಉಭಯ ಸಂಕಷ್ಟಕ್ಕೆ ನಾಯಕರು ಸಿಲುಕಿದ್ದಾರೆ. 1:5 ಅನುಪಾತದಲ್ಲಿ ಒಂದು ಪಟ್ಟಿಯನ್ನು ತಯಾರು ಮಾಡಿ, 12 ಸಂಭಾವ್ಯರ ಪಟ್ಟಿಯನ್ನು ವರಿಷ್ಠರಿಗೆ ಕಳಿಸುವುದು ಸೂಕ್ತ ಎಂಬ ತೀರ್ಮಾನಕ್ಕೆ ಬರಲಾಗಿದೆ. ಲೋಕಸಭಾ ಚುನಾವಣೆ ಕಾರಣ ವಿಧಾನಪರಿಷತ್ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪಕ್ಷದ ವರಿಷ್ಠರು ತಲೆ ಕೆಡಿಸಿಕೊಳ್ಳುವ ಸಾಧ್ಯತೆ ಕಡಿಮೆ ಇದೆ. ಅಭ್ಯರ್ಥಿ ಆಕಾಂಕ್ಷಿಗಳಿಗೆ ದೆಹಲಿ ಮಟ್ಟದಲ್ಲಿರುವ ಪ್ರಭಾವದ ಆಧಾರದಲ್ಲಿ ಆಯ್ಕೆ ನಡೆಯಬಹುದು' ಎಂದು ಮೂಲಗಳು ತಿಳಿಸಿವೆ.

ಈ ಬಾರಿ ಆಯ್ಕೆ ಮಾಡುವಾಗ ಪಕ್ಷ ನಿಷ್ಠೆ, ಸಾಮಾಜಿಕ ಮತ್ತು ಪ್ರಾದೇಶಿಕ ನ್ಯಾಯ ಮತ್ತು ನಾಯಕತ್ವದ ಸಾಮರ್ಥ್ಯವನ್ನು ಪರಿಗಣಿಸಬೇಕು. ಈ ಹಿಂದೆ ಕೆಲವರು ಪಕ್ಷಕ್ಕೆ ಬಂದು ಅಧಿಕಾರ ಅನುಭವಿಸಿ, ಸದಸ್ಯತ್ವ ಅವಧಿ ಮುಗಿಯುತ್ತಿದ್ದಂತೆ ಹೊರಟು ಹೋದರು. ಇನ್ನು ಕೆಲವರು ಪರಿಷತ್ತಿನಲ್ಲಾಗಲೀ, ಹೊರಗಾಗಲಿ ಬಾಯಿ ಬಿಡುತ್ತಿಲ್ಲ. ಇಂತಹವರಿಂದ ಪಕ್ಷ ಮತ್ತು ಸಂಘಟನೆಗೆ ಯಾವುದೇ ಪ್ರಯೋಜನ ಆಗುತ್ತಿಲ್ಲ ಎಂಬ ವಿಷಯವೂ ಪ್ರಸ್ತಾಪವಾಯಿತು.

ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆಯ ಬಗ್ಗೆ ಗಮನ ಹರಿಸಲು ಆರ್.ಅಶೋಕ ಮತ್ತು ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ಸೂಚಿಸಲಾಯಿತು.

ಕೇಂದ್ರ ನಾಯಕರ ಜತೆ ಸಮಾಲೋಚನೆ: ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮಾಜಿ ಸಚಿವ ಸಿ.ಟಿ.ರವಿ, ಮೂರು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ತೀರ್ಮಾನಿಸುವ ಅಧಿಕಾರವನ್ನು ರಾಜ್ಯ ಅಧ್ಯಕ್ಷರು ಮತ್ತು ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾಗಿದೆ. ಇವರು ಕೇಂದ್ರ ನಾಯಕರ ಜತೆ ಸಮಾಲೋಚನೆ ನಡೆಸಲಿದ್ದಾರೆ ಎಂದರು. ವಿಧಾನಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ನಡೆಯುವ ಚುನಾವಣೆ ಕುರಿತು ಚರ್ಚೆ ಮಾಡಿದ್ದೇವೆ. ಅಭ್ಯರ್ಥಿಗಳ ಗೆಲುವಿನ ದೃಷ್ಟಿಯಿಂದ ಕೆಲವು ಸಲಹೆ ಸೂಚನೆಗಳನ್ನೂ ನೀಡಲಾಗಿದೆ ಎಂದರು.

ಕಟೀಲ್, ಸಿಂಹ, ಸಿ.ಟಿ. ರವಿ ಆಕಾಂಕ್ಷಿಗಳು

ವಿಧಾನಪರಿಷತ್ತಿನ ಮೂರು ಸ್ಥಾನಗಳಿಗೆ ಲೋಕಸಭೆ ಚುನಾವಣೆಯಲ್ಲಿ ಟಿಕೆಟ್ ಕೈತಪ್ಪಿದ ಸಂಸದ ನಳಿನ್‌ಕುಮಾರ್ ಕಟೀಲ್, ಪ್ರತಾಪ್ ಸಿಂಹ, ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ ಸಿ.ಟಿ.ರವಿ, ಮುರುಗೇಶ್ ನಿರಾಣಿ ಪ್ರಮುಖ ಆಕಾಂಕ್ಷಿಗಳಾಗಿದ್ದಾರೆ.

ಹಾಲಿ ಸದಸ್ಯರಾಗಿರುವ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ರಘುನಾಥರಾವ್ ಮಲ್ಕಾಪುರೆ, ಮಾಜಿ ಸದಸ್ಯೆ ತಾರಾ ಅನೂರಾಧ ಅವರೂ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ.

ಚುನಾವಣೆಯಲ್ಲಿ ಪಕ್ಷ ವಿರೋಧಿ ಕೆಲಸ: ಕ್ರಮಕ್ಕೆ ಚಿಂತನೆ

ಕಳೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ವಿರುದ್ಧ ಕೆಲಸ ಮಾಡಿದವರು ಮತ್ತು ಪಕ್ಷದ ಗೆಲುವಿಗೆ ಶ್ರಮಿಸದೇ ನಿಷ್ಕ್ರಿಯರಾದವರ ಬಗ್ಗೆ ಸಭೆಯಲ್ಲಿ ಬಹಿರಂಗ ಚರ್ಚೆ ನಡೆಯಿತು.

ಕೆಲವರನ್ನು ಕರೆಸಿ ಮಾತಾಡಿಸಬೇಕು, ಇನ್ನು ಕೆಲವರಿಗೆ ನೋಟಿಸ್ ನೀಡಬೇಕು ಎಂಬ ಸಲಹೆ ನೀಡಲಾಯಿತು. ಲೋಕಸಭಾ ಚುನಾವಣೆಯಲ್ಲಿ ಹಲವು ಕ್ಷೇತ್ರಗಳಲ್ಲಿ ಅಸಮಾಧಾನ, ಅತೃಪ್ತಿ ಮತ್ತು ಬಂಡಾಯ ಎದುರಿಸಬೇಕಾಯಿತು. ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ತೊಡಕಾದವರ ಬಗ್ಗೆ ಕ್ರಮ ಜರುಗಿಸಬೇಕು ಎಂದು ಒತ್ತಾಯ ಕೇಳಿ ಬಂದಿದೆ ಎಂದು ಮೂಲಗಳು ಹೇಳಿವೆ.

ಉತ್ತರ ಪತ್ರಿಕೆ ಛಾಯಾಪ್ರತಿಗೆ ಭಾರಿ ಬೇಡಿಕೆ

ಒಂದನೇ ಪುಟದಿಂದ

ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಬಾರಿ ಕನಿಷ್ಠ 4 ವಿಷಯಗಳಲ್ಲಿ ಛಾಯಾಪ್ರತಿ ಪಡೆಯುತ್ತಿದ್ದಾರೆ.

ಉತ್ತರ ಪತ್ರಿಕೆಗಳ ಛಾಯಾಪ್ರತಿ ಪಡೆಯಲು ಮೇ 9ರಿಂದ 16ರವರೆಗೆ, ಚಲನ್ ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಭರಿಸಲು ಮೇ 17ರವರೆಗೆ ಅವಕಾಶ ನೀಡಲಾಗಿತ್ತು. ಛಾಯಾಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು 19ರವರೆಗೂ ಸಮಯ ನೀಡಲಾಗಿತ್ತು. ಸಮಯ ಮುಗಿದ ನಂತರವೂ ಹಲವು ವಿದ್ಯಾರ್ಥಿಗಳಿಗೆ ಪ್ರತಿಗಳನ್ನು ತಲುಪಿಸುವ ಕೆಲಸ ನಡೆಯುತ್ತಿದೆ.

ಮಂಡಳಿಯಲ್ಲೇ ಪ್ರತ್ಯೇಕ ಕೊಠಡಿ: ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ, ಅಪ್‌ಲೋಡ್ ಮಾಡಲು ಹೊರಗುತ್ತಿಗೆ ನೀಡಲಾಗಿದೆ. ಹೊರಗುತ್ತಿಗೆ ನಿಯೋಜಿಸಿರುವ ಸಿಬ್ಬಂದಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಕಟ್ಟಡದ ಒಂದು ಕೊಠಡಿಯಲ್ಲೇ ಕೆಲಸ ಮಾಡುತ್ತಿದ್ದಾರೆ. 15ಕ್ಕೂ ಹೆಚ್ಚು ಯಂತ್ರಗಳ ಸಹಾಯದಿಂದ ಹಗಲು-ರಾತ್ರಿ ಮೂರು ಪಾಳಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

'ಹಿಂದೆಯೂ ಛಾಯಾ ಪ್ರತಿ ಪಡೆಯಲು ಅಧಿಕ ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ವಿದ್ಯಾರ್ಥಿಗಳು ಒಂದು ಅಥವಾ ಎರಡು ವಿಷಯಗಳ ಪ್ರತಿ ಪಡೆಯುತ್ತಿದ್ದರು. ಈ ಬಾರಿ ಕನಿಷ್ಠ ನಾಲ್ಕು ವಿಷಯಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಇದರಿಂದ ಒತ್ತಡ ಹೆಚ್ಚಾಗಿದೆ' ಎನ್ನುತ್ತಾರೆ ಮಂಡಳಿ ಅಧಿಕಾರಿಗಳು.

ರೈತರ ಬಾಳಿನಲ್ಲಿ ವಿಷ ಹಿಂಡುವ ಕೆಲಸ: ಅಶೋಕ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆ ಸಂದರ್ಭದಲ್ಲಿ ನಂದಿನಿ ಹೆಸರಿನಲ್ಲಿ ರಾಜಕೀಯ ಮಾಡಿ, ಈಗ ಅಮೃತದಂತಹ ಹಾಲು ಕೊಡುವ ರೈತರ ಬಾಳಿನಲ್ಲಿ ವಿಷ ಹಿಂಡುವ ಪಾಪದ ಕೆಲಸ ಮಾಡುತ್ತಿದ್ದೀರಲ್ಲ. ಇದೇನಾ ನೀವು ನಂದಿನಿ ಬ್ರ್ಯಾಂಡ್ ಉಳಿಸುವ ಪರಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡ 'ಸಿಗದ ಪ್ರೋತ್ಸಾಹ, ಹೈನುಗಾರಿಕೆಗೆ ಹಿನ್ನಡೆ' ವರದಿಯನ್ನು ಉಲ್ಲೇಖಿಸಿ ಅವರು 'ಎಕ್ಸ್' ನಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. 'ರಾಜ್ಯದ ವಿವಿಧ ಹಾಲು ಒಕ್ಕೂಟಗಳಿಗೆ ಹಾಲು ಸರಬರಾಜು ಮಾಡುವ 26 ಲಕ್ಷಕ್ಕೂ ಹೆಚ್ಚು ರೈತರಿಗೆ ಸಲ್ಲಬೇಕಾದ ₹703 ಕೋಟಿ ಪ್ರೋತ್ಸಾಹ ಧನವನ್ನು 8 ತಿಂಗಳಿನಿಂದ ಬಾಕಿ ಉಳಿಸಿಕೊಂಡಿದೆ. ಇದು ರೈತ ವಿರೋಧಿ ಸರ್ಕಾರ' ಎಂದು ಕಿಡಿಕಾರಿದ್ದಾರೆ.

ಪ್ಯಾಲೆಸ್ಟೀನ್‌ಗೆ ರಾಷ್ಟ್ರದ ಮನ್ನಣೆ ನೀಡಲು ನಾರ್ವೆ, ಸ್ಪೇನ್, ಐರ್ಲೆಂಡ್ ತೀರ್ಮಾನ

ಟೆಲ್ ಅವೀವ್(ಎಪಿ): ಪ್ಯಾಲೆಸ್ಟೀನ್‌ಗೆ ರಾಷ್ಟ್ರದ ಮನ್ನಣೆ ನೀಡುವುದಾಗಿ ನಾರ್ವೆ, ಸ್ಪೇನ್ ಮತ್ತು ಐರ್ಲೆಂಡ್ ಹೇಳಿವೆ. ಈ ಐತಿಹಾಸಿಕ ಘೋಷಣೆಯನ್ನು ಪ್ಯಾಲೆಸ್ಟೀನಿನ ಜನ ಸಂಭ್ರಮದಿಂದ ಸ್ವಾಗತಿಸಿದ್ದಾರೆ. ಆದರೆ, ಈ ಘೋಷಣೆಯನ್ನು ಇಸ್ರೇಲ್ ಖಂಡಿಸಿದೆ. ನಾರ್ವೆ ಮತ್ತು ಐರ್ಲೆಂಡ್‌ನಲ್ಲಿ ಇರುವ ತನ್ನ ರಾಯಭಾರಿಗಳು ವಾಪಸಾಗಬೇಕು ಎಂದು ಇಸ್ರೇಲ್ ಸೂಚಿಸಿದೆ.

ಮೇ 28ರಂದು ಪ್ಯಾಲೆಸ್ಟೀನ್‌ಗೆ ಅಧಿಕೃತವಾಗಿ ರಾಷ್ಟ್ರದ ಮಾನ್ಯತೆಯನ್ನು ನೀಡಲಾಗುತ್ತದೆ. ಈ ನಡುವೆ ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಸಚಿವ ಇತಾಮರ್ ಬೆನ್-ಗ್ವಿರ್ ಅವರು ಜೆರುಸಲೇಂನಲ್ಲಿ ಅಲ್-ಅಕ್ಸಾ ಮಸೀದಿ ಪ್ರದೇಶಕ್ಕೆ ಪ್ರಚೋದನಕಾರಿ ಭೇಟಿ ನೀಡಿದ್ದಾರೆ. ಈ ಸ್ಥಳವು ಟೆಂಪಲ್ ಮೌಂಟ್ ಎಂದು ಯಹೂದಿಯರು ನಂಬಿದ್ದಾರೆ. ಈ ಭೇಟಿಯು ಈ ಪ್ರದೇಶದಲ್ಲಿ ಬಿಕ್ಕಟ್ಟನ್ನು ತೀವ್ರಗೊಳಿಸುವ ಸಾಧ್ಯತೆ ಇದೆ.

ಪ್ಯಾಲೆಸ್ಟೀನ್‌ಗೆ ಮಾನ್ಯತೆ ನೀಡುವ ತೀರ್ಮಾನವನ್ನು ನಾರ್ವೆ ಮೊದಲು ಪ್ರಕಟಿಸಿತು. ನಾರ್ವೆ ಪ್ರಧಾನಿ ಯೂನಸ್ ಗಾರ್ ಸ್ಟೋರ ಅವರು, 'ಮಾನ್ಯತೆ ಇಲ್ಲವಾದರೆ ಮಧ್ಯಪ್ರಾಚ್ಯದಲ್ಲಿ ಶಾಂತಿ ಸಾಧ್ಯವಿಲ್ಲ' ಎಂದು ಹೇಳಿದ್ದಾರೆ. ಪ್ಯಾಲೆಸ್ಟೀನ್ ರಾಷ್ಟ್ರವನ್ನು ಮಾನ್ಯ ಮಾಡುವ ಮೂಲಕ ನಾರ್ವೆ, ಅರಬ್ ಶಾಂತಿ ಯೋಜನೆಯನ್ನು ಬೆಂಬಲಿಸುತ್ತಿದೆ ಎಂದು ಹೇಳಿದ್ದಾರೆ.

ದೀರ್ಘಾವಧಿಗೆ ಶಾಂತಿ ನೆಲೆಸಬೇಕು ಎಂದಾದರೆ ದ್ವಿರಾಷ್ಟ್ರ ಸೂತ್ರದ ಪಾಲನೆ ಅಗತ್ಯ ಹಾಗೂ ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಮಾನ್ಯತೆ ನೀಡುವ ಯೋಚನೆ ತಮಗೆ ಇದೆ ಎಂಬ ಮಾತನ್ನು ಐರೋಪ್ಯ ಒಕ್ಕೂಟದ ಹಲವು ದೇಶಗಳು ಈಚೆಗೆ ಹೇಳಿವೆ. ಈಗಿನ ತೀರ್ಮಾನವು ಇಸ್ರೇಲ್ ಅನ್ನು ಇನ್ನಷ್ಟು ಏಕಾಂಗಿಯಾಗಿಸಬಹುದು, ಯುರೋಪಿನ ಇನ್ನಷ್ಟು ದೇಶಗಳು ಪ್ಯಾಲೆಸ್ಟೀನ್‌ಗೆ ಮಾನ್ಯತೆ ನೀಡುವುದಕ್ಕೆ ಇಂಬು ಕೊಡಬಹುದು.

'ಈ ಕ್ರಮವು ಗತಕಾಲವನ್ನು, ಪ್ಯಾಲೆಸ್ಟೀನ್‌ನಲ್ಲಿ ಮೃತಪಟ್ಟವರ ಜೀವವನ್ನು ಮರಳಿ ತರುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಆದರೆ ಇದು ಪ್ಯಾಲೆಸ್ಟೀನ್ ನಾಗರಿಕರ ವರ್ತಮಾನ ಮತ್ತು ಭವಿಷ್ಯಕ್ಕೆ ಬಹುಮುಖ್ಯವಾಗಿರುವ ಘನತೆ ಹಾಗೂ ಭರವಸೆಯನ್ನು ತರುತ್ತದೆ' ಎಂದು ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಸ್ ಹೇಳಿದ್ದಾರೆ.

ಪಶ್ಚಿಮ ಬಂಗಾಳ: ಈಗಾಗಲೇ ಪ್ರಯೋಜನ ಪಡೆಯುತ್ತಿರುವವರಿಗೆ ತೊಂದರೆಯಿಲ್ಲ

ಹಲವು ವರ್ಗಗಳ ಒಬಿಸಿ ಸ್ಥಾನ ರದ್ದು



ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಹಲವು ವರ್ಗಗಳಿಗೆ ನೀಡಲಾಗಿದ್ದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಸ್ಥಾನಮಾನವನ್ನು ಕಲ್ಕತ್ತ ಹೈಕೋರ್ಟ್ ಬುಧವಾರ ರದ್ದುಗೊಳಿಸಿದೆ.

ರಾಜ್ಯದಲ್ಲಿನ ಸೇವಾ ಮತ್ತು ಹುದ್ದೆಗಳ ಭರ್ತಿ ಸಂಬಂಧ ರಾಜ್ಯ ಸರ್ಕಾರ 2012ರಲ್ಲಿ ಕಾಯ್ದೆ ರೂಪಿಸಿ ಹಲವು ವರ್ಗಗಳನ್ನು ಒಬಿಸಿ ವ್ಯಾಪ್ತಿಗೆ ತಂದು ಮೀಸಲಾತಿ ಜಾರಿಗೊಳಿಸಿತ್ತು. ಅದನ್ನು ಹೈಕೋರ್ಟ್ ಕಾನೂನು ಬಾಹಿರ ಎಂದು ಹೇಳಿದೆ.

ಆದರೆ, ಈಗಾಗಲೇ ಸೇವೆಯಲ್ಲಿರುವ ಅಥವಾ ಮೀಸಲಾತಿಯ ಪ್ರಯೋಜನ ಪಡೆದಿರುವ ಅಥವಾ ರಾಜ್ಯದ ಯಾವುದೇ ನೇಮಕಾತಿ ಪ್ರಕ್ರಿಯೆಯಲ್ಲಿ ಯಶಸ್ವಿಯಾಗಿರುವವರಿಗೆ ಈ ತೀರ್ಪು ಅಡ್ಡಿಯಾಗುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. 2012ರ ಕಾಯ್ದೆಯ ನಿಬಂಧನೆಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ನೀಡಿದೆ.

‘ಈ ತೀರ್ಪು ರಾಜ್ಯದ ಗಣನೀಯ ಸಂಖ್ಯೆಯ ಜನರ ಮೇಲೆ ಪರಿಣಾಮ ಬೀರುತ್ತದೆ’ ಎಂದು ಈ ಪ್ರಕರಣದಲ್ಲಿ ಭಾಗಿಯಾಗಿರುವ ವಕೀಲರೊಬ್ಬರು ಹೇಳಿದ್ದಾರೆ.

ಪಶ್ಚಿಮ ಬಂಗಾಳ ಹಿಂದುಳಿದ ವರ್ಗಗಳು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ) (ಸೇವೆಗಳು ಮತ್ತು ಹುದ್ದೆಗಳಲ್ಲಿ ಖಾಲಿ ಹುದ್ದೆಗಳ ಮೀಸಲಾತಿ) ಕಾಯ್ದೆ–2012ರ ಅಡಿಯಲ್ಲಿ ಹಲವಾರು ವರ್ಗಗಳಿಗೆ ಮೀಸಲಾತಿಗಾಗಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ಸ್ಥಾನಮಾನ ನೀಡಲಾಗಿತ್ತು. ಅದನ್ನು ಹೈಕೋರ್ಟ್ ರದ್ದುಪಡಿಸಿದೆ.

ನ್ಯಾಯಮೂರ್ತಿಗಳಾದ ತಪಬ್ರತ ಚಕ್ರವರ್ತಿ, ರಾಜಶೇಖರ್ ಮಂಥಾ ಅವರನ್ನೊಳಗೊಂಡ ವಿಭಾಗೀಯ ಪೀಠವು ಈ ಕುರಿತು ತೀರ್ಪು ನೀಡಿದೆ.

2010ಕ್ಕೂ ಮೊದಲು 66 ಒಬಿಸಿ ವರ್ಗಗಳನ್ನು ವರ್ಗೀಕರಿಸಿರುವ ರಾಜ್ಯ ಸರ್ಕಾರದ ಕಾರ್ಯನಿರ್ವಾಹಕ ಆದೇಶಗಳನ್ನು ಅರ್ಜಿಗಳಲ್ಲಿ ಪ್ರಶ್ನಿಸದ ಕಾರಣ, ಆ ವಿಷಯದಲ್ಲಿ ಮಧ್ಯ ಪ್ರವೇಶಿಸಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

2010ರ ಮಾರ್ಚ್ 5ರಿಂದ 2012ರ ಮೇ 11ರವರೆಗೆ 42 ವರ್ಗಗಳನ್ನು ಒಬಿಸಿ ಎಂದು ವರ್ಗೀಕರಿಸುವ ರಾಜ್ಯದ ಕಾರ್ಯಕಾರಿ ಆದೇಶಗಳನ್ನು ರದ್ದುಗೊಳಿಸಲಾಗಿದೆ ಎಂದು ಪೀಠ ತಿಳಿಸಿದೆ.

ತೀರ್ಪು ಒಪ್ಪಲ್ಲ: ಮಮತಾ ಬ್ಯಾನರ್ಜಿ

ಖರ್ದಾ (ಪಶ್ಚಿಮ ಬಂಗಾಳ) (ಪಿಟಿಐ): ‘ರಾಜ್ಯದ ಹಲವಾರು ವರ್ಗಗಳ ಒಬಿಸಿ ಸ್ಥಾನಮಾನವನ್ನು ರದ್ದುಗೊಳಿಸಿದ ಕಲ್ಕತ್ತ ಹೈಕೋರ್ಟ್‌ನ ತೀರ್ಪನ್ನು ನಾವು ಒಪ್ಪಿಕೊಳ್ಳುವುದಿಲ್ಲ’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಪ್ರತಿಪಾದಿಸಿದರು.

ಖರ್ದಾನಲ್ಲಿ ನಡೆದ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಸಂವಿಧಾನದ ಚೌಕಟ್ಟಿನಲ್ಲಿಯೇ ಮಸೂದೆಯನ್ನು ಮಂಡಿಸಿ, ಅಂಗೀಕಾರ ಪಡೆಯಲಾಗಿದೆ. ಹೀಗಾಗಿ ರಾಜ್ಯದಲ್ಲಿ ಒಬಿಸಿ ಮೀಸಲಾತಿ ಮುಂದುವರಿಯುತ್ತದೆ’ ಎಂದು ಹೇಳಿದರು.

‘ಮನೆ, ಮನೆ ಸಮೀಕ್ಷೆ ನಡೆಸಿದ ಬಳಿಕ ನಾವು ಈ ಕುರಿತ ಮಸೂದೆ ರಚಿಸಿದ್ದೇವು. ಬಳಿಕ ಅದಕ್ಕೆ ಸಂಪುಟ ಮತ್ತು ವಿಧಾನಸಭೆಯಲ್ಲಿ ಅಂಗೀಕಾರ ದೊರೆತಿದೆ’ ಎಂದು ಅವರು ವಿವರಿಸಿದರು.

ಬಿಜೆಪಿ ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಂಡು ತಮ್ಮ ವಿರುದ್ಧ ಸಾಕಷ್ಟು ಸಂಚು ರೂಪಿಸಿದೆ ಎಂದು ಆರೋಪಿಸಿದ ಅವರು, ಕೇಸರಿ ಪಕ್ಷವು ಇಂತಹ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಲು ಸಾಧ್ಯ ಎಂದು ಪ್ರಶ್ನಿಸಿದರು.

ಗೀಚು ಬರಹ: ಬ್ಯಾಂಕ್ ಮ್ಯಾನೇಜರ್ ಬಂಧನ

ನವದೆಹಲಿ (ಪಿಟಿಐ): ದೆಹಲಿ ಮೆಟ್ರೊ ನಿಲ್ದಾಣಗಳಲ್ಲಿ ಮತ್ತು ಮೆಟ್ರೊ ರೈಲು ಬೋಗಿಗಳಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರೋಧಿ ಬರಹಗಳನ್ನು ಗೀಚಿದ್ದ ಆರೋಪದ ಮೇಲೆ ಉತ್ತರ ಪ್ರದೇಶದ ಬರೇಲಿಯ ಬ್ಯಾಂಕ್ ಮ್ಯಾನೇಜರ್ ಒಬ್ಬರನ್ನು ದೆಹಲಿ ಪೊಲೀಸರು ಬುಧವಾರ ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಜ್ರಿವಾಲ್ ಅವರಿಗೆ ಬೆದರಿಕೆ ಹಾಕುವ ಸಂದೇಶಗಳನ್ನು ಬರೆದು, ಫೋಟೊ ತೆಗೆದುಕೊಂಡು ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಿದ ವ್ಯಕ್ತಿಯನ್ನು ಅಂಕಿತ್ ಗೋಯಲ್ (33) ಎಂದು ಗುರುತಿಸಲಾಗಿದೆ. ಬರೇಲಿಯ ಸರ್ಕಾರಿ ಬ್ಯಾಂಕ್‌ನಲ್ಲಿ ಸಾಲ ವಿಭಾಗದ ಮ್ಯಾನೇಜರ್ ಆಗಿರುವ ಗೋಯೆಲ್ ಅವರು ದೆಹಲಿಗೆ ಬಂದು ಈ ಸಂದೇಶಗಳನ್ನು ಬರೆದು ತಮ್ಮ ನಗರಕ್ಕೆ ವಾಪಸಾಗಿದ್ದರು.

‘ಬರೇಲಿಯಿಂದ ಬಂಧಿಸಿ ಕರೆತಂದ ಅಂಕಿತ್ ಅವರನ್ನು ಮ್ಯಾಜಿಸ್ಟ್ರಿಯಲ್ ಕೋರ್ಟ್‌ಗೆ ಬುಧವಾರ ಮಧ್ಯಾಹ್ನ ಹಾಜರುಪಡಿಸಲಾಯಿತು. ನ್ಯಾಯಾಲಯವು ಅವರಿಗೆ ಜಾಮೀನು ನೀಡಿದೆ’ ಎಂದು ಕೋರ್ಟ್ ಮೂಲಗಳು ಹೇಳಿವೆ.

ಉತ್ತರಾಖಂಡ: ಬಾಲಕಿಯ ನಗ್ನ ದೃಶ್ಯಗಳನ್ನು ಚಿತ್ರೀಕರಿಸಿದ್ದ ಆರೋಪ

ಬಾಲಕನಿಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): 14 ವರ್ಷ ವಯಸ್ಸಿನ ಬಾಲಕಿಯೊಬ್ಬಳ ನಗ್ನ ವಿಡಿಯೊ ಚಿತ್ರೀಕರಿಸಿ, ಅದನ್ನು ಇತರರಿಗೆ ರವಾನಿಸಿದ ಆರೋಪ ಎದುರಿಸುತ್ತಿರುವ ಬಾಲಕನಿಗೆ ಜಾಮೀನು ನಿರಾಕರಿಸಿದ ಉತ್ತರಾಖಂಡ ಹೈಕೋರ್ಟ್‌ನ ತೀರ್ಮಾನದಲ್ಲಿ ಮಧ್ಯಪ್ರವೇಶ ಮಾಡದಿರಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಈ ಬಾಲಕಿಯು ಕಳೆದ ವರ್ಷ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ.

ಹೈಕೋರ್ಟ್ ಏಪ್ರಿಲ್ 1ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಬಾಲಕನು ತನ್ನ ತಾಯಿಯ ಮೂಲಕ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಂಕಜ್ ಮಿತ್ತಲ್ ಅವರು ಇದ್ದ ವಿಭಾಗೀಯ ಪೀಠವು ವಜಾಗೊಳಿಸಿತು.

ಕಾನೂನಿನ ಜೊತೆ ಸಂಘರ್ಷಕ್ಕೆ ಗುರಿಯಾಗಿರುವ ಈ ಬಾಲಕನ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೊ) ಅಡಿ ಹರಿದ್ವಾರ ಜಿಲ್ಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣದಲ್ಲಿ ಜಾಮೀನು ನೀಡಲು ನಿರಾಕರಿಸಿದ ಉತ್ತರಾಖಂಡ ಹೈಕೋರ್ಟ್ ಮತ್ತು ಬಾಲನ್ಯಾಯ ಮಂಡಳಿಯ ತೀರ್ಮಾನವನ್ನು ಪ್ರಶ್ನಿಸಿ ಈ ಬಾಲಕ ಸುಪ್ರೀಂ ಕೋರ್ಟ್ ಮೊರೆಹೋಗಿದ್ದ. ಕಳೆದ ವರ್ಷ ಅಕ್ಟೋಬರ್ 22ರಂದು ಮನೆಯಿಂದ ಕಾಣೆಯಾಗಿದ್ದ ಬಾಲಕಿ ನಂತರ ಶವವಾಗಿ ಪತ್ತೆಯಾಗಿದ್ದಳು ಎಂಬ ಅಂಶವನ್ನು ಹೈಕೋರ್ಟ್ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಬಾಲಕನು, ಆ ಬಾಲಕಿಯ ನಗ್ನ ವಿಡಿಯೊ ಚಿತ್ರೀಕರಿಸಿದ್ದ, ಅದನ್ನು ವಿದ್ಯಾರ್ಥಿಗಳ ನಡುವೆ ಹಂಚಿದ್ದ. ಇದನ್ನು ಸಹಿಸಲು ಸಾಧ್ಯವಾಗದೆ ಬಾಲಕಿ ಆತ್ಮಹತ್ಯೆ ಮಾಡಿಕೊಂಡಳು ಎಂಬ ಉಲ್ಲೇಖ ಕೂಡ ಆದೇಶದಲ್ಲಿ ಇದೆ. ಆ ಬಾಲಕಿಯು, ಬಾಲಕನ ಸಹಪಾಠಿಯಾಗಿದ್ದಳು.

ಹೈಕೋರ್ಟ್ ಹೇಳಿದ್ದೇನು...

ಪುನರ್ ಪರಿಶೀಲನೆಗೆ ಅರ್ಜಿ ಸಲ್ಲಿಸಿರುವ ವ್ಯಕ್ತಿ ಕಾನೂನಿನ ಜೊತೆ ಸಂಘರ್ಷಕ್ಕೆ ಗುರಿಯಾಗಿರುವ ಬಾಲಕ. ಇಂತಹ ವ್ಯಕ್ತಿಗಳಿಗೆ ಯಾವುದೇ ಅಪರಾಧಕ್ಕೂ ಜಾಮೀನು ನೀಡಬಹುದು. ಅಪರಾಧವು ಜಾಮೀನು ರಹಿತ ಆಗಿರಲಿ, ಜಾಮೀನು ಕೊಡುವಂಥದ್ದೇ ಆಗಿರಲಿ, ಆ ವ್ಯಕ್ತಿ ಜಾಮೀನು ಪಡೆಯಲು ಅರ್ಹನಾಗುತ್ತಾನೆ ಎಂದು ಹೈಕೋರ್ಟ್ ಹೇಳಿದೆ.

ಆದರೆ, ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆಯಲ್ಲಿ ಒಂದು ನಿಬಂಧನೆ ಇದೆ. ಕಾನೂನಿನ ಜೊತೆ ಸಂಘರ್ಷಕ್ಕೆ ಗುರಿಯಾಗಿರುವ ಮಗುವಿಗೆ ಜಾಮೀನು ನೀಡಿ ಬಿಡುಗಡೆ ಮಾಡಿದರೆ, ಆ ಮಗು ಕ್ರಿಮಿನಲ್ ಅಪರಾಧಿಯ ಸಂಪರ್ಕಕ್ಕೆ ಬರುವ ಸಾಧ್ಯತೆ ಇದ್ದಲ್ಲಿ; ಆ ಮಗು ನೈತಿಕ, ದೈಹಿಕ ಅಥವಾ ಮಾನಸಿಕ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದ್ದಲ್ಲಿ ಅಥವಾ ಆತನ ಬಿಡುಗಡೆಯು ನ್ಯಾಯ ನೀಡುವ ಉದ್ದೇಶಕ್ಕೆ ಅಡ್ಡಿಯಾಗುತ್ತದೆ ಎಂದಾದಲ್ಲಿ ಜಾಮೀನು ನಿರಾಕರಿಸಬಹುದು ಎಂಬುದು ಆ ನಿಬಂಧನೆ ಎಂದು ಹೈಕೋರ್ಟ್ ಹೇಳಿದೆ.

ಇಂತಹ ಪ್ರಕರಣಗಳಲ್ಲಿ ಸಾಮಾಜಿಕ ತನಿಖಾ ವರದಿಯು ಹೆಚ್ಚಿನ ಪ್ರಾಮುಖ್ಯ ಪಡೆಯುತ್ತದೆ. ಆ ವರದಿಯ ಪ್ರಕಾರ ಬಾಲಕನು ಶಾಲೆಯಲ್ಲಿ ಅಶಿಸ್ತು ತೋರಿದ್ದ ಎಂದು ಹೇಳಿದೆ.

ಈ ವರದಿಯನ್ನು, ವೈದ್ಯಕೀಯ ಪರೀಕ್ಷಾ ವರದಿಯನ್ನು, ಶಾಲೆಯಿಂದ ಪಡೆಯಲಾದ ವರದಿಯನ್ನು ಪರಿಗಣಿಸಿ, ಬಾಲಕನಿಗೆ ಜಾಮೀನು ಕೊಡದೆ ಇರುವುದೇ ಆತನ ಹಿತಾಸಕ್ತಿಗೆ ಪೂರಕ ಎಂಬ ನಿಲುವನ್ನು ಈ ನ್ಯಾಯಾಲಯವು ತಾಳಿದೆ. ಬಾಲಕನನ್ನು ಜಾಮೀನಿನ ಅಡಿ ಬಿಡುಗಡೆ ಮಾಡಿದಲ್ಲಿ ನ್ಯಾಯ ನೀಡುವ ಉದ್ದೇಶಕ್ಕೆ ಖಂಡಿತವಾಗಿಯೂ ಸೋಲಾಗುತ್ತದೆ ಎಂದು ಹೈಕೋರ್ಟ್ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಬಿಜೆಪಿ, ಕಾಂಗ್ರೆಸ್‌ಗೆ ಚುನಾವಣಾ ಆಯೋಗದ ಕಟ್ಟುನಿಟ್ಟಿನ ಸೂಚನೆ

‘ಧರ್ಮದ ಆಧಾರದಲ್ಲಿ ಪ್ರಚಾರ ಬೇಡ’

ನವದೆಹಲಿ (ಪಿಟಿಐ): ಜಾತಿ, ಸಮುದಾಯ, ಭಾಷೆ ಮತ್ತು ಧರ್ಮದ ಆಧಾರದಲ್ಲಿ ಚುನಾವಣಾ ಪ್ರಚಾರ ನಡೆಸದಿರುವಂತೆ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಕಟ್ಟುನಿಟ್ಟಿನ ಸೂಚನೆ ನೀಡಿರುವ ಕೇಂದ್ರ ಚುನಾವಣಾ ಆಯೋಗವು, ಚುನಾವಣೆಯ ಸಂದರ್ಭಗಳಲ್ಲಿ ದೇಶದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಬಲಿಕೊಡಲು ಸಾಧ್ಯವಿಲ್ಲ ಎಂದು ತಿಳಿಹೇಳಿದೆ.

ಎರಡೂ ಪಕ್ಷಗಳ ತಾರಾ ಪ್ರಚಾರಕರ ಮಾತುಗಳು ನೀತಿ ಸಂಹಿತೆಯ ಅವಧಿಯ ನಂತರದಲ್ಲಿಯೂ ಧಕ್ಕೆ ತರುವಂತಹ ಸಂಕಥನವನ್ನು ಸೃಷ್ಟಿಸುವಂತೆ ಇವೆ ಎಂದು ಆಯೋಗವು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬುಧವಾರ ಹೇಳಿದೆ. ತಾರಾ ಪ್ರಚಾರಕರು ಆಡುತ್ತಿರುವ ಮಾತುಗಳಲ್ಲಿ ನಿರ್ದಿಷ್ಟ ವಿಧಾನವೊಂದು ಕಾಣುತ್ತಿದೆ ಎಂದು ಕೂಡ ಆಯೋಗವು ಹೇಳಿದೆ.

ಎರಡೂ ಪಕ್ಷಗಳ ಅಧ್ಯಕ್ಷರಿಗೆ ನೀಡಿದ್ದ ನೋಟಿಸ್‌ಗೆ ಪ್ರತಿಯಾಗಿ ದೊರೆತ ಉತ್ತರವನ್ನು ಉಲ್ಲೇಖಿಸಿರುವ ಆಯೋಗವು ‘ನಿಯಮಗಳಿಂದ ತಪ್ಪಿಸಿಕೊಳ್ಳಲು ತಾಂತ್ರಿಕವಾಗಿ ದೊರೆಯುವ ಉಪಾಯಗಳು ಅಥವಾ ಇತರ ರಾಜಕೀಯ ಪಕ್ಷಗಳ ಮಾತುಗಳನ್ನು ವಿಪರೀತವಾಗಿ ಅರ್ಥೈಸುವ ಮೂಲಕ ಯಾವುದೇ ಪಕ್ಷ ಮತ್ತು ಅದರ ಪ್ರಚಾರಕರು ತಮ್ಮ ಮಾತುಗಳ ಬಗ್ಗೆ ಹೊಂದಿರುವ ಹೊಣೆಯಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ’ ಎಂದು ಎಚ್ಚರಿಸಿದೆ.

ಚುನಾವಣೆಯ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳು ಜಯಗಳಿಸುವ ಉದ್ದೇಶದಿಂದ ಮಾತ್ರವೇ ಭಾಗಿಯಾಗುವುದಿಲ್ಲ. ಮತದಾರರ ಎದುರು ತಮ್ಮ ಬಗ್ಗೆ ಹೇಳಿಕೊಳ್ಳುವುದಕ್ಕೆ, ಮತದಾರರು ತಮ್ಮನ್ನು ಅನುಕರಿಸುವಂತೆ ಮಾಡುವುದಕ್ಕೆ ಹಾಗೂ ತಮ್ಮ ವಿಚಾರವಾಗಿ ಭರವಸೆಗಳನ್ನು ಬೆಳೆಸಿಕೊಳ್ಳುವಂತೆ ಮಾಡಲು ಪಕ್ಷಗಳಿಗೆ ಇದು ಅವಕಾಶ ಕಲ್ಪಿಸುತ್ತದೆ ಎಂದು ಆಯೋಗವು ಬುದ್ಧಿಮಾತು ಹೇಳಿದೆ.

‘ಇಲ್ಲಿ ಎರಡನೆಯ ಭಾಗವು ಭಾರತದ ಚುನಾವಣೆಗಳ ಪಾಲಿಗೆ, ನಮ್ಮ ಚುನಾವಣಾ ಪ್ರಜಾತಂತ್ರದ ಪಾಲಿಗೆ ಹೆಚ್ಚು ಮೌಲ್ಯಯುತವಾದ ಪರಂಪರೆಯನ್ನು ಹೊಂದಿದೆ. ಇದನ್ನು ದುರ್ಬಲಗೊಳಿಸಲು ನಿಮ್ಮ ಪಕ್ಷ ಸೇರಿದಂತೆ ಯಾರಿಗೂ ಅವಕಾಶ ನೀಡಬಾರದು’ ಎಂದು ಆಯೋಗವು ಕಾಂಗ್ರೆಸ್ ಹಾಗೂ ಬಿಜೆಪಿ ಅಧ್ಯಕ್ಷರನ್ನು ಉದ್ದೇಶಿಸಿ ಹೇಳಿದೆ.

‘ನೀತಿ ಸಂಹಿತೆಯು ನಿಷೇಧ ಹೇರಿರುವ ಯಾವುದೇ ಬಗೆಯ ಹೇಳಿಕೆಗಳನ್ನು ನೀಡದೆ ಇರುವಂತೆ ತಾರಾ ಪ್ರಚಾರಕರಿಗೆ ನಿರ್ದೇಶನ ನೀಡಲಾಗಿದೆ. ಅಂದರೆ, ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ಈಗಿರುವ ಭಿನ್ನಾಭಿಪ್ರಾಯಗಳನ್ನು ಹೆಚ್ಚು ಮಾಡುವ ಅಥವಾ ಭಿನ್ನ ಜಾತಿಗಳು, ಭಿನ್ನವಾದ ಭಾಷಿಕ ಅಥವಾ ಧಾರ್ಮಿಕ ಸಮುದಾಯಗಳ ನಡುವೆ ಸಂಘರ್ಷ ಉಂಟುಮಾಡುವಂತಹ ಯಾವುದೇ ಕೆಲಸ ಮಾಡುವಂತಿಲ್ಲ’ ಎಂದು ಆಯೋಗವು ಹೇಳಿದೆ.

ಚುನಾವಣಾ ಆಯೋಗವು ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 77ರ ಅಡಿಯಲ್ಲಿ ನೋಟಿಸ್ ನೀಡಿ, ತಾರಾ ಪ್ರಚಾರಕರ ಮಾತಿಗೆ ಲಗಾಮು ಹಾಕಲು ಮೊದಲ ಹೆಜ್ಜೆಯಾಗಿ ಪಕ್ಷಗಳ ಅಧ್ಯಕ್ಷರನ್ನು ಹೊಣೆಗಾರರನ್ನಾಗಿಸಿತ್ತು.

27 ದಿನಗಳ ನಂತರದ ಕಿವಿಮಾತು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೋಟಿಸ್ ಜಾರಿಗೊಳಿಸಿದ 27 ದಿನಗಳ ನಂತರ ಕೇಂದ್ರ ಚುನಾವಣಾ ಆಯೋಗವು ಇಬ್ಬರಿಗೂ ಈ ನಿರ್ದೇಶನಗಳನ್ನು ನೀಡಿದೆ.

ಆಯೋಗವು ನೋಟಿಸ್‌ಅನ್ನು ಪಕ್ಷಗಳ ಅಧ್ಯಕ್ಷರಿಗೆ ನೀಡಿತ್ತು, ನೋಟಿಸ್ ಜೊತೆ ದೂರುಗಳನ್ನು ಲಗತ್ತಿಸಲಾಗಿತ್ತು. ಆದರೆ, ನೀತಿ ಸಂಹಿತೆಯನ್ನು ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವವರಿಗೆ ಆ ನೋಟಿಸ್ ಜಾರಿಗೊಳಿಸಿರಲಿಲ್ಲ. ಅಲ್ಲದೆ, ಉಲ್ಲಂಘನೆಯ ಆರೋಪ ಎದುರಿಸುತ್ತಿರುವವರ ಹೆಸರನ್ನು ಅದರಲ್ಲಿ ಉಲ್ಲೇಖಿಸಿರಲಿಲ್ಲ.

ಲೋಕಸಭಾ ಚುನಾವಣೆಯ ಭಾಗವಾಗಿರುವ ಏಳು ಹಂತಗಳ ಮತದಾನ ಪ್ರಕ್ರಿಯೆ ಕೊನೆಗೊಳ್ಳಲು ಹತ್ತು ದಿನಗಳು ಇರುವ ಹೊತ್ತಿನಲ್ಲಿ ಈ ನಿರ್ದೇಶನಗಳನ್ನು ಆಯೋಗ ನೀಡಿದೆ.

ನಡ್ಡಾ ಅವರು ಎರಡು ಬಾರಿ ಕಾಲಾವಕಾಶ ಕೋರಿ, ಮೇ 13ರಂದು ಉತ್ತರ ನೀಡಿದ್ದರು. ಖರ್ಗೆ ಅವರು ಒಂದು ಬಾರಿ ಕಾಲಾವಕಾಶ ಕೋರಿ ಮೇ 6ರಂದು ಉತ್ತರ ಸಲ್ಲಿಸಿದ್ದರು. ಆರಂಭದಲ್ಲಿ ಅವರಿಗೆ ಏಪ್ರಿಲ್ 29ರವರೆಗೆ ಸಮಯಾವಕಾಶ ನೀಡಲಾಗಿತ್ತು.

ಚುನಾವಣಾ ಆಯೋಗದ ಪ್ರಕಾರ ಕಾಂಗ್ರೆಸ್ ಪಕ್ಷವು ಬಿಜೆಪಿಯ ವಿರುದ್ಧ 12 ದೂರುಗಳನ್ನು ಸಲ್ಲಿಸಿದೆ. ಬಿಜೆಪಿಯ ತಾರಾ ಪ್ರಚಾರಕರ ಮಾತುಗಳು ಜಾತಿವಾದಿಯಾಗಿಯೂ ಕೋಮುವಾದಿಯಾಗಿಗೂ ಇವೆ. ಮತದಾರರನ್ನು ತಪ್ಪುದಾರಿಗೆ ಎಳೆಯುವಂತೆ ಇವೆ ಎಂದು ಅದು ದೂರಿತ್ತು.

ಬಿಜೆಪಿಯು ಕಾಂಗ್ರೆಸ್ಸನ್ನು ಗುರಿಯಾಗಿಸಿಕೊಂಡು ನಾಲ್ಕು ದೂರುಗಳನ್ನು ದಾಖಲಿಸಿದೆ. ಕಾಂಗ್ರೆಸ್ ಪಕ್ಷವು ರಾಮಮಂದಿರ, ಸಂವಿಧಾನ ಮತ್ತು ರಕ್ಷಣಾ ಪಡೆಗಳ ಬಗ್ಗೆ ತಪ್ಪುದಾರಿಗೆ ಎಳೆಯುವ ಮಾತುಗಳನ್ನು ಆಡಿದೆ ಎಂದು ಅದು ದೂರಿತ್ತು.

₹45 ಕೋಟಿ ಮೌಲ್ಯದ ಆಸ್ತಿ ಪತ್ತೆ ಎಸಿಪಿ ಬಂಧನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹೈದರಾಬಾದ್‌ನ ಕೇಂದ್ರ ಅಪರಾಧ ಠಾಣೆಯಲ್ಲಿ (ಸಿಸಿಎಸ್) ಆರ್ಥಿಕ ಅಪರಾಧಗಳ ವಿಭಾಗದಲ್ಲಿ (ಇಒಡಬ್ಲ್ಯು) ಕರ್ತವ್ಯ ನಿರ್ವಹಿಸುತ್ತಿದ್ದ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಟಿ.ಎಸ್. ಉಮಾಮಹೇಶ್ವರ್ ರಾವ್ ಅವರನ್ನು ಆದಾಯ ಮೀರಿದ ಆಸ್ತಿ ಹೊಂದಿರುವ ಆರೋಪದಲ್ಲಿ ತೆಲಂಗಾಣ ಎಸಿಬಿ ಬಂಧಿಸಿದೆ.

ರಾವ್ ಅವರಿಗೆ ಸಂಬಂಧಿಸಿದ 13 ಸ್ಥಳಗಳಲ್ಲಿ ಮಂಗಳವಾರ ದಾಳಿ ನಡೆಸಿದ್ದ ಎಸಿಬಿ ಅಧಿಕಾರಿಗಳು, ಮಾರುಕಟ್ಟೆ ಮೌಲ್ಯದ ಸುಮಾರು ₹45 ಕೋಟಿ ಮೌಲ್ಯದ ಆಸ್ತಿ ಮತ್ತು ಚಿನ್ನ ಪತ್ತೆ ಮಾಡಿದ್ದಾರೆ. ತಪಾಸಣೆ ವೇಳೆ ಎಸಿಬಿ ಬಳಿ ಇದ್ದ ನಗದು, ಜಮೀನುಗಳ ದಾಖಲೆ ಪತ್ರ, ಚಿನ್ನ, ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ವಶಪಡಿಸಿಕೊಂಡ ಸೊತ್ತುಗಳಲ್ಲಿ ₹37 ಲಕ್ಷ ನಗದು, 60 ತೊಲ ಚಿನ್ನ ಮತ್ತು ₹3.40 ಕೋಟಿ ಮೌಲ್ಯದ ಆಸ್ತಿ ಸೇರಿದೆ. ರಾವ್ ಅವರ ಒಟ್ಟು ಆಸ್ತಿಯ ಅಂದಾಜು ಮೌಲ್ಯ ಸುಮಾರು ₹50 ಕೋಟಿ ಇದೆ ಎಂದು ಮೂಲಗಳು ಹೇಳಿವೆ.

ವಿಶಾಖಪಟ್ಟಣ ಸಮೀಪದ ಘಟಕೇಸರ್ ಮತ್ತು ಚೋಡವರಂನಲ್ಲಿನ ಜಮೀನುಗಳು, ಅಶೋಕ್ ನಗರದಲ್ಲಿ ಫ್ಲ್ಯಾಟ್‌ಗಳು ಮತ್ತು ಶಮೀರ್‌ಪೇಟೆ, ಕುಕಟ್‌ಪಲ್ಲಿ ಮತ್ತು ಮಲ್ಕರಾಜ್‌ಗಿರಿಯಲ್ಲಿನ ಜಮೀನುಗಳು ಸೇರಿದಂತೆ 17 ಆಸ್ತಿಗಳನ್ನು ರಾವ್ ಹೊಂದಿರುವುದನ್ನು ಪತ್ತೆ ಹಚ್ಚಲಾಗಿದೆ.

ಆದೇಶ ಮರುಪರಿಶೀಲಿಸಲು ಪೊಲೀಸರು ಸಲ್ಲಿಸಿದ್ದ ಅರ್ಜಿ ಪರಿಗಣಿಸಿದ ಪುಣೆ ಜೆಜೆಬಿ

‘ಪೋರ್ಶೆ’ ಅಪಘಾತ: ಬಾಲಕನ ಜಾಮೀನು ರದ್ದು

ಪುಣೆ (ಪಿಟಿಐ): ಐಶಾರಾಮಿ ‘ಪೋರ್ಶೆ’ ಕಾರು ಅಪಘಾತ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಸಿಲುಕಿರುವ ಬಾಲಕನಿಗೆ ನೀಡಿದ್ದ ಜಾಮೀನನ್ನು ಇಲ್ಲಿನ ಬಾಲಾಪರಾಧ ನ್ಯಾಯ ಮಂಡಳಿ (ಜೆಜೆಬಿ) ಬುಧವಾರ ರದ್ದುಗೊಳಿಸಿದೆ. ಅಲ್ಲದೆ, ಈ ಬಾಲಕನನ್ನು ಜೂನ್ 5 ರವರೆಗೆ ಬಾಲ ವೀಕ್ಷಣಾ ಮಂದಿರಕ್ಕೆ ಕಳುಹಿಸಿದೆ.

ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರ್‌ವಾಲ್ ಅವರ ಪುತ್ರ, 17ರ ಹರೆಯದ ಬಾಲಕ ಪಾನಮತ್ತನಾಗಿ ‘ಪೋರ್ಶೆ’ ಕಾರು ಚಾಲನೆ ಮಾಡಿ, ಪುಣೆಯ ಕಲ್ಯಾಣಿ ನಗರದಲ್ಲಿ ಭಾನುವಾರ ನಸುಕಿನಲ್ಲಿ ಬೈಕಿಗೆ ಡಿಕ್ಕಿ ಹೊಡೆದಿದ್ದ. ಬೈಕಿನಲ್ಲಿದ್ದ ಮಧ್ಯಪ್ರದೇಶ ಮೂಲದ ಇಬ್ಬರು ಟೆಕಿಗಳು ಮೃತಪಟ್ಟಿದ್ದರು. ಘಟನೆ ನಡೆದ ಒಂದೇ ತಾಸಿನಲ್ಲಿ ಜೆಜೆಬಿಯು ಈ ಬಾಲಕನಿಗೆ ಷರತ್ತುಬದ್ಧ ಜಾಮೀನು ನೀಡಿ ಬಿಡುಗಡೆ ಮಾಡಿತ್ತು.

‘ಕಾನೂನು ಸಂಘರ್ಷ ಎದುರಿಸುತ್ತಿರುವ ಈ ಬಾಲಕನು ಪ್ರಾದೇಶಿಕ ಸಾರಿಗೆ ಕಚೇರಿಗೆ ಭೇಟಿ ನೀಡಿ, ರಸ್ತೆ ಸಂಚಾರ ನಿಯಮಗಳನ್ನು ಅರಿಯಬೇಕು ಮತ್ತು ರಸ್ತೆ ಸುರಕ್ಷತೆ ಹಾಗೂ ಅದರ ಪರಿಹಾರೋಪಾಯಗಳು ಕುರಿತು 15 ದಿನದಲ್ಲಿ 300 ಪದಗಳ ಪ್ರಬಂಧ ಸಲ್ಲಿಸಬೇಕು’ ಎಂದು ಆದೇಶಿಸಿತ್ತು.

ಜೆಜೆಬಿಯ ಈ ಆದೇಶಕ್ಕೆ ತೀವ್ರ ಟೀಕೆ ವ್ಯಕ್ತವಾಗಿತ್ತು. ಮಹಾರಾಷ್ಟ್ರದ ಗೃಹ ಸಚಿವರೂ ಆದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಜೆಜೆಬಿ ಆದೇಶಕ್ಕೆ ತೀವ್ರ ಆಘಾತ ಮತ್ತು ಅಚ್ಚರಿ ವ್ಯಕ್ತಪಡಿಸಿದ್ದರು.

ಜಾಮೀನು ಆದೇಶ ಮರುಪರಿಶೀಲಿಸಲು ಪುಣೆ ಪೊಲೀಸರು ಅರ್ಜಿ ಸಲ್ಲಿಸಿದ ನಂತರ ಜೆಜೆಬಿಯು ಬಾಲಕನಿಗೆ ಬುಧವಾರ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿತ್ತು.

ಇದಕ್ಕೂ ಮೊದಲು ಜೆಜೆಬಿ ನೀಡಿರುವ ಜಾಮೀನು ಆದೇಶ ಪ್ರಶ್ನಿಸಿ, ಘೋರ ಅಪರಾಧ ಎಸಗಿರುವ 17ರ ಹರೆಯದ ಬಾಲಕನನ್ನು ವಯಸ್ಕರಂತೆ ಪರಿಗಣಿಸಿ ವಿಚಾರಣೆ ನಡೆಸಲು ಅನುಮತಿಸುವಂತೆ ಪೊಲೀಸರು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯವು ಜೆಜೆಬಿ ಮುಂದೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಪೊಲೀಸರಿಗೆ ಸೂಚಿಸಿತ್ತು.

ಕಾನೂನು ಸಂಘರ್ಷಕ್ಕೆ ಸಿಲುಕಿರುವ ಬಾಲಕನ ವಿರುದ್ಧ ಭಾರತೀಯ ದಂಡ ಸಂಹಿತೆ ಮತ್ತು ಮೋಟಾರು ವಾಹನ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಭೂಗತ ಜಗತ್ತಿನ ನಂಟಿನ ಬಗ್ಗೆಯೂ ತನಿಖೆ: ಫಡಣವೀಸ್

ಪ್ರಜಾವಾಣಿ ವಾರ್ತೆ

ಮುಂಬೈ: ಪೋರ್ಶೆ ಕಾರು ಅಪಘಾತ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸುವುದಾಗಿ ಮಹಾರಾಷ್ಟ್ರ ಸರ್ಕಾರ ಭರವಸೆ ನೀಡಿದೆ.

ಬಾಲಕನ ತಾತ ಸುರೇಂದ್ರ ಕುಮಾರ್ ಅಗರ್ವಾಲ್ ಶೂಟೌಟ್ ಪ್ರಕರಣವೊಂದರಲ್ಲಿ ವಿಚಾರಣೆ ಎದುರಿಸುತ್ತಿರುವ ಮಾಹಿತಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಶೂಟೌಟ್ ಪ್ರಕರಣ ಸದ್ಯ ಜೈಲಿನಲ್ಲಿರುವ ಭೂಗತ ಪಾತಕಿ ಛೋಟಾ ರಾಜನ್‌ಗೆ ಸಂಬಂಧಿಸಿದ್ದಾಗಿದೆ ಎಂದೂ ಹೇಳಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ‘ಯಾವುದೇ ಸಂಪರ್ಕವಿದ್ದರೂ ಸಂಪೂರ್ಣ ತನಿಖೆ ನಡೆಸಲಾಗುವುದು’ ಎಂದು ಹೇಳಿದರು.

ಬಾಲಕನ ತಂದೆ 24ರವರೆಗೆ ಕಸ್ಟಡಿಗೆ

ಚಾಲನಾ ಪರವಾನಗಿ ಇಲ್ಲದ ಬಾಲಕನಿಗೆ ಕಾರು ಚಲಾಯಿಸಲು ಅನುಮತಿಸಿದ ಕಾರಣಕ್ಕೆ ಬಂಧಿಸಲಾಗಿರುವ ಬಾಲಕನ ತಂದೆ, ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರ್ವಾಲ್ ಮತ್ತು ಬಾಲಕನಿಗೆ ಮದ್ಯ ಪೂರೈಸಿರುವುದಕ್ಕೆ ಬಂಧಿಸಲ್ಪಟ್ಟಿರುವ ಬ್ಲ್ಯಾಕ್ ಕ್ಲಬ್ ಪಬ್‌ನ ಇಬ್ಬರು ಉದ್ಯೋಗಿಗಳಾದ ನಿತೇಶ್ ಶೇವಾನಿ ಮತ್ತು ಜಯೇಶ್ ಗಾಂವ್ಕರ್ ಅವರನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎಸ್.ಪಿ. ಪೊಂಕ್ಶೆ ಅವರ ಮುಂದೆ ಬುಧವಾರ ಹಾಜರು ಪಡಿಸಲಾಯಿತು. ನ್ಯಾಯಾಧೀಶರು ಈ ಮೂವರನ್ನು ಮೇ 24ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು.

ಬಾಲಕನಿಗೆ ಮದ್ಯ ಪೂರೈಸಿರುವ ಕಾರಣಕ್ಕೆ ಮಂಗಳವಾರ ಬಂಧಿಸಲಾಗಿದ್ದ ಹೋಟೆಲ್‌ವೊಂದರ ಮಾಲೀಕ ಮತ್ತು ಮ್ಯಾನೇಜರ್ ಹಾಗೂ ಬ್ಲ್ಯಾಕ್ ಕ್ಲಬ್ ಪಬ್‌ನ ಮ್ಯಾನೇಜರ್ ಸೇರಿ ಮೂವರು ಆರೋಪಿಗಳನ್ನೂ ಇದೇ 24ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಕೋರ್ಟ್ ಆದೇಶಿಸಿತ್ತು.

ಪಿಎಫ್‌ಐ ಕಾರ್ಯಕರ್ತರ ಜಾಮೀನು ರದ್ದು

8 ಆರೋಪಿಗಳು ತಕ್ಷಣ ಶರಣಾಗಿ, ಜೈಲಿಗೆ ಹೋಗಬೇಕು



ನವದೆಹಲಿ (ಪಿಟಿಐ): ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯಡಿ (ಯುಎಪಿಎ) ದಾಖಲಾಗಿರುವ ಪ್ರಕರಣದಲ್ಲಿ ಪಿಎಫ್‌ಐ ಕಾರ್ಯಕರ್ತರಿಗೆ ಮದ್ರಾಸ್ ಹೈಕೋರ್ಟ್ ನೀಡಿದ್ದ ಜಾಮೀನು ಕುರಿತ ತೀರ್ಪನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಗೊಳಿಸಿದೆ.

ಎಂಟು ಆರೋಪಿಗಳಿಗೆ ಜಾಮೀನು ನೀಡಿ ಕಳೆದ ವರ್ಷದ ಅಕ್ಟೋಬರ್ 19ರಂದು ಹೈಕೋರ್ಟ್ ತೀರ್ಪು ನೀಡಿತ್ತು. ಅದನ್ನು ನ್ಯಾಯಮೂರ್ತಿಗಳಾದ ಬೇಲಾ ಎಂ ತ್ರಿವೇದಿ, ಪಂಕಜ್ ಮಿಥಾಲ್ ಅವರ ಪೀಠ ರದ್ದುಗೊಳಿಸಿತು. ಆರೋಪಿಗಳು ತಕ್ಷಣ ಶರಣಾಗಬೇಕು ಮತ್ತು ಜೈಲಿಗೆ ಹೋಗಬೇಕು ಎಂದು ಪೀಠ ಸೂಚಿಸಿತು.

ರಾಷ್ಟ್ರೀಯ ಭದ್ರತೆ ಮುಖ್ಯ: ‘ರಾಷ್ಟ್ರೀಯ ಭದ್ರತೆಯು ಅತ್ಯುನ್ನತ ಪ್ರಾಮುಖ್ಯತೆ ನೀಡುವ ವಿಚಾರವಾಗಿದೆ ಮತ್ತು ಭಯೋತ್ಪಾದನೆಗೆ ಸಂಬಂಧಿಸಿದ ಯಾವುದೇ ಕೃತ್ಯಗಳನ್ನು ನಿರ್ಬಂಧಿಸಬೇಕಾಗುತ್ತದೆ’ ಎಂದು ಅದು ಈ ಸಂದರ್ಭದಲ್ಲಿ ಹೇಳಿದೆ.

ಈ ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದ್ದ ತೀರ್ಪನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಆರೋಪಿಗಳಾದ ಬರಕತ್ ಉಲ್ಲಾ, ಇದ್ರಿಸ್, ಮೊಹಮ್ಮದ್ ಅಬುತಾಹಿರ್, ಖಾಲಿದ್ ಮೊಹಮ್ಮದ್, ಸೈಯದ್ ಇಶಾಕ್, ಖಾಜಾ ಮೊಹೈದೀನ್, ಯಾಸರ್ ಅರಾಫತ್ ಮತ್ತು ಫಯಾಜ್ ಅಹ್ಮದ್ ಅವರನ್ನು 2022ರ ಸೆಪ್ಟೆಂಬರ್‌ನಲ್ಲಿ ಬಂಧಿಸಲಾಗಿತ್ತು.

‘ಪಿಎಫ್‌ಐ ಮೂಲಭೂತವಾಗಿ ಇಸ್ಲಾಮಿಕ್ ಸಂಘಟನೆಯಾಗಿದೆ. ಇದು ಷರಿಯಾ ಕಾನೂನಿನ ಮೂಲಕ ಭಾರತದಲ್ಲಿ ಮುಸ್ಲಿಂ ಆಡಳಿತ ಸ್ಥಾಪಿಸುವ ಅಪಾಯಕಾರಿ ಗುರಿ ಹೊಂದಿದೆ’ ಎಂದು ಎನ್‌ಐಎ ಅರ್ಜಿಯಲ್ಲಿ ಪ್ರತಿಪಾದಿಸಿದೆ.

‘ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ಕಸಿದುಕೊಳ್ಳುವ ನಿಟ್ಟಿನಲ್ಲಿ ಶಸ್ತ್ರಸಜ್ಜಿತ ಸೇನಾಪಡೆ ಕಟ್ಟುವ ನಿಟ್ಟಿನಲ್ಲಿ ಆರೋಪಿಗಳು ಕೃತ್ಯಗಳನ್ನು ಎಸಗಿದ್ದಾರೆ’ ಎಂದು ಎನ್‌ಐಎ ಆರೋಪಿಸಿದೆ.

ಸೊರೇನ್‌ಗೆ ಕೋರ್ಟ್ ತರಾಟೆ

ನವದೆಹಲಿ (ಪಿಟಿಐ): ಜಾಮೀನು ಕೋರಿ ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವ ಸಂಗತಿಯನ್ನು ಮುಚ್ಚಿಟ್ಟದ್ದಕ್ಕೆ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಬಗ್ಗೆ ಸುಪ್ರೀಂ ಕೋರ್ಟ್ ಬುಧವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಕೋರ್ಟ್ ಅಸಮಾಧಾನಕ್ಕೆ ಗುರಿಯಾದ ಸೊರೇನ್ ಅವರು ಇ.ಡಿ ತಮ್ಮನ್ನು ಬಂಧಿಸಿದ ಕ್ರಮ ಪ್ರಶ್ನಿಸಿದ್ದ ಅರ್ಜಿಯನ್ನು ಹಿಂಪಡೆದರು. ಅರ್ಜಿಯನ್ನು ಹಿಂದಕ್ಕೆ ಪಡೆಯಲು ಸೊರೇನ್ ಪರ ವಕೀಲ ಕಪಿಲ್ ಸಿಬಲ್ ಅವರಿಗೆ ಅವಕಾಶ ನೀಡಿದ ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ ಮತ್ತು ಸತೀಶ್ ಚಂದ್ರ ಶರ್ಮ ಅವರು ಇದ್ದ ವಿಭಾಗೀಯ ಪೀಠವು, ಪ್ರಕರಣದ ವಿವರಗಳನ್ನು ಪರಿಶೀಲಿಸಲು ನ್ಯಾಯಾಲಯ ಮುಂದಾದರೆ ಸೊರೇನ್ ಅವರಿಗೇ ತೊಂದರೆ ಆಗುತ್ತದೆ ಎಂದು ಎಚ್ಚರಿಕೆ ನೀಡಿತು.

‘ನಿಮ್ಮ ನಡತೆಯು ಬಹಳಷ್ಟನ್ನು ಹೇಳುತ್ತಿದೆ. ನಿಮ್ಮ ಕಕ್ಷಿದಾರರು ಕಪಟತನವನ್ನು ಬಿಟ್ಟು ಬರುತ್ತಾರೆ ಎಂದು ನಾವು ನಿರೀಕ್ಷಿಸಿದ್ದೆವು. ಆದರೆ ನೀವು ವಾಸ್ತವವನ್ನು ಮುಚ್ಚಿಡುವ ಕೆಲಸ ಮಾಡಿದಿರಿ’ ಎಂದು ನ್ಯಾಯಪೀಠವು ಸಿಬಲ್ ಅವರನ್ನು ಉದ್ದೇಶಿಸಿ ಹೇಳಿತು.



ಕೆಂಡದ ಬಿಸಿಲು... ಆಗ್ರಾದಲ್ಲಿ ಸುಡುವ ಬಿಸಿಲ ಧಗೆಯಿಂದ ಬಸವಳಿದ ಜನರಿಗೆ ತಣ್ಣನೆಯ ಹಿತಾನುಭವ ನೀಡಲು ಮಹಾನಗರ ಪಾಲಿಕೆಯು ವಾಹನದ ಮೂಲಕ ನೀರಿನ ಹನಿಗಳನ್ನು ಸಿಂಪಡಿಸುವ ವ್ಯವಸ್ಥೆ ಮಾಡಿರುವುದು ಬುಧವಾರ ಕಂಡುಬಂತು – ಪಿಟಿಐ ಚಿತ್ರ

‘ಉಗ್ರರು ಡ್ರಗ್ಸ್ ಸಾಗಣೆಯಲ್ಲೂ ಭಾಗಿ’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಇಲ್ಲಿನ ವಿಮಾನ ನಿಲ್ದಾಣದಿಂದ ಭಾನುವಾರ ಬಂಧಿಸಲಾದ ನಾಲ್ವರು ಶಂಕಿತ ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಉಗ್ರರಲ್ಲಿ ಇಬ್ಬರು ಪ್ರತ್ಯೇಕವಾಗಿ, 38 ಮತ್ತು 40 ಬಾರಿ ಭಾರತದ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ್ದರು ಎಂದು ಗುಜರಾತ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಈ ಶಂಕಿತರಲ್ಲಿ ಮೂವರು ಮಾದಕ ದ್ರವ್ಯ ಮತ್ತು ಚಿನ್ನ ಕಳ್ಳಸಾಗಣೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಅಪರಾಧದ ಹಿನ್ನೆಲೆ ಹೊಂದಿದ್ದಾರೆ. ಇವರಲ್ಲಿ ಒಬ್ಬಾತ ಮುಂಬೈ ವಿಮಾನ ನಿಲ್ದಾಣದಲ್ಲಿ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಎಂದು ಅವರು ತಿಳಿಸಿದ್ದಾರೆ.

ಆರೋಪಿಗಳಲ್ಲಿ ಒಬ್ಬನಾದ ಮೊಹಮ್ಮದ್ ನುಸ್ರತ್ ಗನಿ 2022ರಿಂದ 2023 ರವರೆಗೆ 38 ಬಾರಿ ಭಾರತಕ್ಕೆ ಭೇಟಿ ನೀಡಿದ್ದರೆ, ಈತನ ಸಹಚರ ನಫ್ರಾನ್ 40 ಬಾರಿ ಭೇಟಿ ಕೊಟ್ಟಿದ್ದಾನೆ. ಇನ್ನಿಬ್ಬರು ಶಂಕಿತರಲ್ಲಿ ಮೊಹಮ್ಮದ್ ರಾಸ್ದೀನ್ ಮತ್ತು ಮೊಹಮ್ಮದ್ ಫಾರಿಸ್ ಮೊದಲ ಬಾರಿಗೆ ಭಾರತಕ್ಕೆ ಬಂದಿರುವುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಡಿಐಜಿ ಸುನೀಲ್ ಜೋಶಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

‘ಆಶ್ಚರ್ಯಕರ ಅಂಶವೆಂದರೆ, ಇವರು ಭಾರತಕ್ಕೆ ಪದೇ ಪದೇ ಬರುತ್ತಿದ್ದರೂ 2014ರ ಫೆಬ್ರುವರಿಯಿಂದ ಭೇಟಿ ನಿಲ್ಲಿಸಿದ್ದರು. ಇವರು ತಮ್ಮನ್ನು ನಿರ್ದೇಶಿಸುವ ಪಾಕಿಸ್ತಾನದ ಅಬು ಎಂಬುವನ ಜತೆಗೆ ಯಾವಾಗಿನಿಂದ ಸಂಪರ್ಕಕ್ಕೆ ಬಂದಿದ್ದರು ಮತ್ತು ಇವರ ಜತೆಗೆ ಯಾರೆಲ್ಲ ಸಂಪರ್ಕದಲ್ಲಿದ್ದರು ಹಾಗೂ ಯಾವೆಲ್ಲ ಸ್ಥಳಗಳಿಗೆ ಭೇಟಿ ನೀಡಿದ್ದಾರೆ ಎನ್ನುವುದರ ಬಗ್ಗೆ ತನಿಖೆ ಮಾಡುತ್ತಿದ್ದೇವೆ’ ಎಂದರು.

ಶಂಕಿತ ಎಲ್ಲ ನಾಲ್ವರು ಪಾಕಿಸ್ತಾನದ ಅಬು ಎಂಬಾತನ ಸೂಚನೆ ಮೇರೆಗೆ ಅಹಮದಾಬಾದ್‌ಗೆ ಬರಲು ಮೊದಲ ಬಾರಿಗೆ ಒಟ್ಟಿಗೆ ಪ್ರಯಾಣಿಸಿದ್ದಾರೆ. ಇವರು ಗಾಂಧಿನಗರ ಜಿಲ್ಲೆಯ ನಾನಾ ಚಿಲೋಡಾದಲ್ಲಿ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಇರಿಸಲಾಗಿದ್ದ ಶಸ್ತ್ರಾಸ್ತ್ರಗಳನ್ನು ಪತ್ತೆಹಚ್ಚಿ ಸಂಗ್ರಹಿಸಲಿದ್ದರು. ಶಸ್ತ್ರಾಸ್ತ್ರ ಇರಿಸಿದ್ದ ಸ್ಥಳ, ಅದರ ಕವರ್, ಇತರ ವಿವರಗಳನ್ನು ಒಳಗೊಂಡ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ ಎಂದು ಎಟಿಎಸ್ ಹೇಳಿದೆ.

ಶ್ರೀಲಂಕಾ ಪ್ರಜೆಗಳಾದ ಈ ನಾಲ್ವರು ಶಂಕಿತರು ‘ಮುಸ್ಲಿಮರ ವಿರುದ್ಧದ ದೌರ್ಜನ್ಯ’ಕ್ಕಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರನ್ನು ಗುರಿಯಾಗಿಸಿ, ಪಾಕಿಸ್ತಾನದ ಅಬು ಎಂಬುವನ ನಿರ್ದೇಶನದ ಮೇರೆಗೆ ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ಬಯಸಿದ್ದರು ಎಂಬುದು ವಿಚಾರಣೆಯಿಂದ ಗೊತ್ತಾಗಿದೆ ಎಂದು ಎಟಿಎಸ್ ಹೇಳಿದೆ.



ಎರಡನೇ ಕ್ವಾಲಿಫೈಯರ್‌ಗೆ ರಾಜಸ್ಥಾನ ರಾಯಲ್ಸ್ • ಯಶಸ್ವಿ, ಅಶ್ವಿನ್ ಮಿಂಚು • ಫಫ್ ಪಡೆ ಹೋರಾಟ ಅಂತ್ಯ

ಈ ಸಲವೂ ಕಪ್ ಆರ್‌ಸಿಬಿಗಿಲ್ಲ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಟ್ರೋಫಿ ಜಯಿಸುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕನಸು ಸತತ 17ನೇ ವರ್ಷವೂ ಕಮರಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡವು 4 ವಿಕೆಟ್‌ಗಳಿಂದ ಜಯಿಸಿ ಎರಡನೇ ಕ್ವಾಲಿಫೈಯರ್‌ಗೆ ಅರ್ಹತೆ ಗಿಟ್ಟಿಸಿತು. ಇದರೊಂದಿಗೆ ಟೂರ್ನಿಯ ಇತಿಹಾಸದಲ್ಲಿ ಎರಡನೇ ಬಾರಿ ಚಾಂಪಿಯನ್ ಆಗುವ ರಾಜಸ್ಥಾನದ ಕನಸು ಜೀವಂತವಾಗುಳಿಯಿತು.

ರಾಜಸ್ಥಾನ ತಂಡವು ಶುಕ್ರವಾರ ಚೆನ್ನೈನಲ್ಲಿ ನಡೆಯುವ ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ. ಆ ಪಂದ್ಯದಲ್ಲಿ ಗೆದ್ದ ತಂಡವು ಫೈನಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದೊಂದಿಗೆ ಸೆಣಸಲಿದೆ.

ಆರ್‌ಸಿಬಿ ತಂಡವು ಲೀಗ್ ಹಂತದಲ್ಲಿ ತನ್ನ ಮೊದಲ ಎಂಟು ಪಂದ್ಯಗಳಲ್ಲಿ ಏಳರಲ್ಲಿ ಸೋತಿತ್ತು. ನಂತರದ ಆರು ಪಂದ್ಯಗಳಲ್ಲಿ ಸತತ ಜಯ ಸಾಧಿಸಿತ್ತು. ಅದರಲ್ಲೂ ಬೆಂಗಳೂರಿನಲ್ಲಿ ನಡೆದಿದ್ದ ಕೊನೆಯ ಲೀಗ್ ಪಂದ್ಯದಲ್ಲಿ ಫಫ್ ಡುಪ್ಲೆಸಿ ಬಳಗವು, ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎದುರು ಅಮೋಘ ಜಯದೊಂದಿಗೆ ಪ್ಲೇ ಆಫ್ ಪ್ರವೇಶಿಸಿತ್ತು.

ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದೊಂದಿಗೆ ಪ್ಲೇ ಆಫ್‌ಗೆ ಪ್ರವೇಶ ಪಡೆದಿದ್ದ ಬೆಂಗಳೂರು ಬಳಗದ ಓಟಕ್ಕೆ ತಡೆ ಬಿತ್ತು. ಗೆಲುವಿನ ಸಂಭ್ರಮ ಆಚರಿಸುವ ಸಿದ್ಧತೆಯಲ್ಲಿದ್ದ ಅಭಿಮಾನಿ ಬಳಗವು ನಿರಾಶೆಯ ಮೌನಕ್ಕೆ ಜಾರಿತು. ಆದರೆ ಯೋಜನಾಬದ್ಧವಾಗಿ ಆಡಿದ ಸಂಜು ಬಳಗವು ಗೆದ್ದಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ರಾಜಸ್ಥಾನ ತಂಡದ ಬೌಲರ್‌ಗಳು ಆರ್‌ಸಿಬಿ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು. ಇದರಿಂದಾಗಿ ಫಫ್ ಬಳಗವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 172 ರನ್ ಗಳಿಸಿತು.

ವೇಗಿ ಟ್ರೆಂಟ್ ಬೌಲ್ಟ್ (16ಕ್ಕೆ1), ಆವೇಶ್ ಖಾನ್ (44ಕ್ಕೆ3) ಹಾಗೂ ಸ್ಪಿನ್ನರ್ ಆರ್ ಅಶ್ವಿನ್ (19ಕ್ಕೆ2) ಅವರು ಆರ್‌ಸಿಬಿ ಬ್ಯಾಟರ್‌ಗಳಿಗೆ ಅಡ್ಡಿಯಾದರು. ಈ ನಡುವೆಯೂ ಮಿಂಚಿದ ವಿರಾಟ್ ಕೊಹ್ಲಿ (33;24ಎ), ರಜತ್ ಪಾಟೀದಾರ್ (34; 22ಎ) ಮತ್ತು ಮಹಿಪಾಲ್ ಲೊಮ್ರೊರ್ (32; 17ಎ) ತಂಡವು ಹೋರಾಟದ ಮೊತ್ತ ಗಳಿಸಲು ಕಾಣಿಕೆ ನೀಡಿದರು. ಆದರೆ, ಖಾತೆ ತೆರೆಯದ ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ದಿನೇಶ್ ಕಾರ್ತಿಕ್ (11;13ಎ) ಅವರ ವೈಫಲ್ಯದಿಂದಾಗಿ ಆರ್‌ಸಿಬಿ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.

ಗುರಿ ಬೆನ್ನಟ್ಟಿದ ರಾಜಸ್ಥಾನಕ್ಕೆ ಯಶಸ್ವಿ ಜೈಸ್ವಾಲ್ (45; 30ಎ) ಉತ್ತಮ ಆರಂಭ ನೀಡಿದರು. ಮಧ್ಯಮ ಕ್ರಮಾಂಕದಲ್ಲಿ ರಿಯಾನ್ ಪರಾಗ್ (36; 26ಎ, 4X2, 6X2) ಹಾಗೂ ಶಿಮ್ರೊನ್ ಹೆಟ್ಮೆಯರ್ (26; 14ಎ) ತಂಡದ ಹೋರಾಟಕ್ಕೆ ಬಲ ತುಂಬಿದರು.

ಭರವಸೆ ಮೂಡಿಸಿದ್ದ ಸಿರಾಜ್: ಕೊನೆಯ 3 ಓವರ್‌ಗಳಲ್ಲಿ ರಾಜಸ್ಥಾನ ತಂಡದ ಗೆಲುವಿಗೆ 18 ರನ್‌ಗಳ ಅಗತ್ಯವಿತ್ತು. ರಿಯಾನ್ ಮತ್ತು ಹೆಟ್ಮೆಯರ್ ಕ್ರೀಸ್‌ನಲ್ಲಿದ್ದ ಕಾರಣಕ್ಕೆ ಇದೇನೂ ಕಠಿಣವೇನಾಗಿರಲಿಲ್ಲ. ಆದರೆ 18ನೇ ಓವರ್ ಬೌಲಿಂಗ್ ಮಾಡಿದ ಸಿರಾಜ್ ಎರಡನೇ ಎಸೆತದಲ್ಲಿಯೇ ರಿಯಾನ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಕೊನೆಯ ಎಸೆತದಲ್ಲಿ ಡುಪ್ಲೆಸಿ ಓಡಿ ಹೋಗಿ ಪಡೆದ ಆಕರ್ಷಕ ಕ್ಯಾಚ್‌ಗೆ ಹೆಟ್ಮೆಯರ್ ಔಟಾದರು. ಇದರಿಂದಾಗಿ ಆರ್‌ಸಿಬಿ ಪಾಳೆಯದಲ್ಲಿ ಗೆಲುವಿನ ಆಸೆ ಮತ್ತೆ ಚಿಗುರಿತ್ತು.

ಆದರೆ ಲಾಕಿ ಫರ್ಗ್ಯುಸನ್ ಹಾಕಿದ 19ನೇ ಓವರ್‌ನಲ್ಲಿ ಎರಡು ಬೌಂಡರಿ ಹಾಗೂ ಒಂದು ಸಿಕ್ಸರ್ ಎತ್ತಿದ ರೋವ್ಮನ್ ಪೊವೆಲ್ ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು. ತಂಡವು 19 ಓವರ್‌ಗಳಿಗೆ 6 ವಿಕೆಟ್‌ಗೆ 174 ರನ್ ಗಳಿಸಿತು.

ಆರ್‌ಸಿಬಿ ತಂಡದ ಬ್ಯಾಟಿಂಗ್ ವೇಳೆ ಪೊವೆಲ್ ಫೀಲ್ಡಿಂಗ್‌ನಲ್ಲಿಯೂ ಮಿಂಚಿದ್ದರು. ಬೌಂಡರಿಗೆರೆಯ ಬಳಿ ಚುರುಕಾಗಿದ್ದ ಅವರು ನಾಲ್ಕು ಕ್ಯಾಚ್‌ಗಳನ್ನು ಪಡೆದಿದ್ದರು.



ಆರ್‌ಸಿಬಿಯ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ವಿಕೆಟ್ ಗಳಿಸಿದ ರಾಜಸ್ಥಾನ ರಾಯಲ್ಸ್ ತಂಡದ ಆರ್. ಅಶ್ವಿನ್ ಅವರನ್ನು ಅಭಿನಂದಿಸಿದ ಯಜುವೇಂದ್ರ ಚಾಹಲ್ –ಪಿಟಿಐ ಚಿತ್ರ

ಕೊಹ್ಲಿ 8000 ರನ್

ವಿರಾಟ್ ಕೊಹ್ಲಿ, ಐಪಿಎಲ್‌ನಲ್ಲಿ 8000 ರನ್ ಗಳಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಶಿಖರ್ ಧವನ್ (6769) 2ನೇ ಸ್ಥಾನದಲ್ಲಿದ್ದಾರೆ. ಕೊಹ್ಲಿ 244 ಇನಿಂಗ್ಸ್‌ಗಳಲ್ಲಿ ಈ ಸಾಧನೆ ಮಾಡಿದ್ದಾರೆ. ಇದರಲ್ಲಿ 8 ಶತಕಗಳು ಹಾಗೂ 55 ಅರ್ಧ-ಶತಕಗಳು ಸೇರಿವೆ. ಈ ಆವೃತ್ತಿಯಲ್ಲಿ ಅವರು 15 ಪಂದ್ಯಗಳಲ್ಲಿ 741 ರನ್ ಗಳಿಸಿ ಆರೆಂಜ್ ಕ್ಯಾಪ್ ಧರಿಸಿದ್ದಾರೆ.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 8ಕ್ಕೆ172 (20 ಓವರುಗಳಲ್ಲಿ)

ಕೊಹ್ಲಿ ಸಿ ಸಬ್ (ಫರೀರಾ) ಬಿ ಚಾಹಲ್ 33 (24ಎ, 4x3, 6x1)
ಡುಪ್ಲೆಸಿ ಸಿ ಪೊವೆಲ್ ಬಿ ಬೌಲ್ಟ್ 17 (14ಎ, 4x2, 6x1)
ಗ್ರೀನ್ ಸಿ ಪೊವೆಲ್ ಬಿ ಅಶ್ವಿನ್ 27 (21ಎ, 4x2, 6x1)
ಪಾಟೀದಾರ್ ಸಿ ಪರಾಗ್ ಬಿ ಆವೇಶ್ 34 (22ಎ, 4x2, 6x2)
ಮ್ಯಾಕ್ಸ್‌ವೆಲ್ ಸಿ ಜುರೆಲ್ ಬಿ ಅಶ್ವಿನ್ 0 (1ಎ)
ಲೊಮ್ರೊರ್ ಸಿ ಪೊವೆಲ್ ಬಿ ಆವೇಶ್ 32 (17ಎ, 4x2, 6x2)
ಕಾರ್ತಿಕ್ ಸಿ ಜೈಸ್ವಾಲ್ ಬಿ ಆವೇಶ್ 11 (13, 4x1)
ಸ್ವಪ್ನಿಲ್ ಔಟಾಗದೇ 9 (4ಎ, 6x1)
ಕರ್ಣ ಸಿ ಪೊವೆಲ್ ಬಿ ಸಂದೀಪ್ ಶರ್ಮಾ 5 (4ಎ, 4x1)

ಇತರೆ: 4 (ಲೆಗ್‌ಬೈ 2, ವೈಡ್ 2)

ವಿಕೆಟ್ ಪತನ: 1–37 (ಫಫ್ ಡುಪ್ಲೆಸಿ, 4.4), 2–56 (ವಿರಾಟ್ ಕೊಹ್ಲಿ, 7.2), 3–97 (ಕ್ಯಾಮರಾನ್ ಗ್ರೀನ್, 12.3), 4–97 (ಗ್ಲೆನ್ ಮ್ಯಾಕ್ಸ್‌ವೆಲ್, 12.4), 5–122 (ರಜತ್ ಪಾಟೀದಾರ್, 14.2), 6–154 (ದಿನೇಶ್ ಕಾರ್ತಿಕ್, 18.2), 7–159 (ಮಹಿಪಾಲ್ ಲೊಮ್ರೊರ್, 18.5), 8–172 (ಕರ್ಣ ಶರ್ಮಾ, 19.6)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–16–1; ಸಂದೀಪ್ ಶರ್ಮಾ 4–0–48–1; ಆವೇಶ್ ಖಾನ್ 4–0–44–3; ರವಿಚಂದ್ರನ್ ಅಶ್ವಿನ್ 4–0–19–2; ಚಾಹಲ್ 4–0–43–1

ರಾಜಸ್ಥಾನ ರಾಯಲ್ಸ್: 6ಕ್ಕೆ 174 (19 ಓವರುಗಳಲ್ಲಿ)

ಜೈಸ್ವಾಲ್ ಸಿ ಕಾರ್ತಿಕ್ ಬಿ ಗ್ರೀನ್ 45 (30ಎ, 4x8)
ಕ್ಯಾಡ್ಮೋರ್ ಬಿ ಫರ್ಗ್ಯುಸನ್ 20 (15ಎ, 4x4)
ಸ್ಯಾಮ್ಸನ್ ಸ್ಟಂಪ್ಡ್ ಕಾರ್ತಿಕ್ ಬಿ ಶರ್ಮಾ 17 (13ಎ, 6x1)
ಪರಾಗ್ ಬಿ ಸಿರಾಜ್ 36 (26ಎ, 4x2, 6x2)
ಜುರೆಲ್ ರನ್‌ಔಟ್ (ಕೊಹ್ಲಿ/ಗ್ರೀನ್) 8 (8ಎ, 4x1)
ಹೆಟ್ಮೆಯರ್ ಸಿ ಡುಪ್ಲೆಸಿ ಬಿ ಸಿರಾಜ್ 26 (14ಎ, 4x3, 6x1)
ಪೊವೆಲ್ ಔಟಾಗದೇ 16 (8ಎ, 4x2, 6x1)
ಅಶ್ವಿನ್ ಔಟಾಗದೇ 0 (0ಎ)

ಇತರೆ: 6 (ಲೆಗ್‌ಬೈ 1 ವೈಡ್ 5)

ವಿಕೆಟ್ ಪತನ: 1-46 (ಟಾಮ್ ಕೊಹ್ಲರ್ ಕ್ಯಾಡ್ಮೋರ್, 5.3), 2-81 (ಯಶಸ್ವಿ ಜೈಸ್ವಾಲ್, 9.2), 3-86 (ಸಂಜು ಸ್ಯಾಮ್ಸನ್, 10), 4-112 (ಧ್ರುವ ಜುರೆಲ್, 13.1), 5-157 (ರಿಯಾನ್ ಪರಾಗ್, 17.2), 6-160 (ಶಿಮ್ರಾನ್ ಹೆಟ್ಮೆಯರ್, 17.6)

ಬೌಲಿಂಗ್: ಸ್ವಪ್ನಿಲ್ ಸಿಂಗ್ 2–0–19–0, ಮೊಹಮ್ಮದ್ ಸಿರಾಜ್ 4–0–33–2, ಯಶ್ ದಯಾಳ್ 3–0–37–0, ಲಾಕಿ ಫರ್ಗ್ಯುಸನ್ 4–0–37–1, ಕರ್ಣ ಶರ್ಮಾ 2–0–19–1, ಕ್ಯಾಮರಾನ್ ಗ್ರೀನ್ 4–0–28–1

ಪಂದ್ಯದ ಆಟಗಾರ: ರವಿಚಂದ್ರನ್ ಅಶ್ವಿನ್

ಫಲಿತಾಂಶ: ರಾಜಸ್ಥಾನಕ್ಕೆ 4 ವಿಕೆಟ್‌ಗಳ ಗೆಲುವು

ಡಾಲರ್ ನೋಟುಗಳಿಂದ ಮುಖ ಒರೆಸಿಕೊಂಡ ಪಾಕ್ ಕ್ರಿಕೆಟಿಗ

ಕರಾಚಿ (ಪಿಟಿಐ): ಪಾಕಿಸ್ತಾನದ ಯುವ ವಿಕೆಟ್‌ಕೀಪರ್ ಆಜಂ ಖಾನ್ ಅವರು ಅಮೆರಿಕನ್ ಡಾಲರ್ ನೋಟುಗಳಿಂದ ತಮ್ಮ ಮುಖದ ಬೆವರು ಒರೆಸಿಕೊಳ್ಳು-ತ್ತಿರುವ ವಿಡಿಯೊ ಚರ್ಚೆಗೆ ಗ್ರಾಸವಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಈ ವಿಡಿಯೊದಲ್ಲಿ ಆಜಂ ಅವರೊಂದಿಗೆ ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ ಬಾಬರ್ ಆಜಂ ಕೂಡ ಇದ್ದಾರೆ.

‘ದೇಶ (ಪಾಕ್)ದಲ್ಲಿ ಆರ್ಥಿಕ ಬಿಕ್ಕಟ್ಟು ಇದೆ. ಈ ಹೊತ್ತಿನಲ್ಲಿ ಆಜಂ ಅವರು ಇಂತಹ ಅಸೂಕ್ಷ್ಮವಾದ ನಡವಳಿಕೆ ತೋರಿರುವುದು ಅಕ್ಷಮ್ಯ’ ಎಂದು ಹಲವರು ಟೀಕಿಸಿದ್ದಾರೆ.

ಈ ವಿಡಿಯೊದಲ್ಲಿ ಆಜಂ ಅವರು ಡಾಲರ್ ನೋಟುಗಳಿಂದ ತಮ್ಮ ಹುಬ್ಬುಗಳ ಮೇಲಿನ ಬೆವರು ಒರೆಸಿಕೊಳ್ಳುವ ಸಂದರ್ಭದಲ್ಲಿ ಬಾಬರ್ ಅವರು, ‘ಏನಾಯಿತು ಅಬ್ಬಾ’ ಎಂದು ಕೇಳುತ್ತಾರೆ.

‘ಬೊಹತ್ ಗರ್ಮಿ ಹೈ (ಬಹಳ ಸೆಕೆ ಇದೆ)’ ಎಂದು ಆಜಂ ಪ್ರತಿಕ್ರಿಯಿಸುತ್ತಾರೆ. ಈ ಸಂದರ್ಭದಲ್ಲಿ ಬಾಬರ್ ಸೇರಿದಂತೆ ಅಲ್ಲಿದ್ದ ಸಹ ಆಟಗಾರರು ಜೋರಾಗಿ ನಗುತ್ತಾರೆ.

‘ಇವರಿಗೆಲ್ಲ ಮೂಲ ಶಿಕ್ಷಣ ನೀಡುವ ಅಗತ್ಯವಿದೆ ಎಂದು ನಾವು ಪದೇ ಪದೇ ಒತ್ತಾಯಿಸುವುದು ಇದೇ ಕಾರಣಕ್ಕೆ. ಇವರೆಲ್ಲ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ತಿರುಗಾಡಿ ಬರುತ್ತಾರೆ. ಆದರೆ ಏನನ್ನೂ ಕಲಿಯುವುದಿಲ್ಲ. ಕನಿಷ್ಠ ಮೂಲ ಮಾನವೀಯ ಗುಣಗಳನ್ನೂ ಕಲಿಯುವುದಿಲ್ಲ. ಅಂತರರಾಷ್ಟ್ರೀಯ ವೇದಿಕೆಗೆ ಕಳಿಸುವ ಮುನ್ನ ಇವರನ್ನು ಶಾಲೆಗೆ ಕಳುಹಿಸಿ’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಜನರು ಟೀಕಿಸಿದ್ದಾರೆ.

‘ಪಾಕಿಸ್ತಾನದಲ್ಲಿ ಜನರು ಆಹಾರ ಕೊರತೆಯನ್ನು ಅನುಭವಿಸುತ್ತಿದ್ದಾರೆ. ನೆರಳಲ್ಲಿ ಕುಳಿತಿರುವ ಆಜಂ ಬಡವರನ್ನು ಅಣಕ ಮಾಡುತ್ತಿದ್ದಾರೆ’ ಎಂದು ಕ್ರಿಕೆಟ್ ಅಭಿಮಾನಿಯೊಬ್ಬರು ಟೀಕಿಸಿದ್ದಾರೆ.

ಬಾಬರ್ ಆಜಂ ಅವರ ವಿರುದ್ಧ ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಟಿ20: ಬಾಂಗ್ಲಾಕ್ಕೆ ಅಮೆರಿಕ ಆಘಾತ

ಮಿಯಾಮಿ (ಎಎಫ್‌ಪಿ): ಅಮೆರಿಕ ತಂಡವು ಮಂಗಳವಾರ ನಡೆದ ಟಿ20 ಕ್ರಿಕೆಟ್ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ ಐದು ವಿಕೆಟ್‌ಗಳ ಅಚ್ಚರಿಯ ಗೆಲುವು ಸಾಧಿಸಿದೆ. ಈ ಮೂಲಕ ಟಿ20 ವಿಶ್ವಕಪ್‌ಗೆ ಆತಿಥೇಯ ತಂಡವು ಭರ್ಜರಿ ಸಿದ್ಧತೆ ನಡೆಸಿದೆ.

ಜೂನ್ 2ರಿಂದ ವೆಸ್ಟ್‌ಇಂಡೀಸ್ ಮತ್ತು ಅಮೆರಿಕ ಆತಿಥ್ಯದಲ್ಲಿ ವಿಶ್ವಕಪ್ ಟೂರ್ನಿ ನಡೆಯಲಿದೆ. ಅದಕ್ಕೂ ಮುಂಚೆ ನಡೆಯುತ್ತಿರುವ ಮೂರು ಪಂದ್ಯಗಳ ದ್ವಿಪಕ್ಷೀಯ ಸರಣಿಯ ಮೊದಲ ಮುಖಾಮುಖಿಯಲ್ಲಿ ಅನುಭವಿ ಆಟಗಾರರನ್ನು ಹೊಂದಿರುವ ಬಾಂಗ್ಲಾದೇಶವು ಅಮೆರಿಕ ವಿರುದ್ಧ ಆಘಾತ ಅನುಭವಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಪ್ರವಾಸಿ ತಂಡವು ತೌಹಿದ್ ಹೃದಯ್ (58; 47ಎಸೆತ) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ ಆರು ವಿಕೆಟ್‌ಗೆ 153 ರನ್ ಗಳಿಸಿತು. ಈ ಗುರಿಯನ್ನು ಬೆನ್ನತ್ತಿದ ಅಮೆರಿಕ ಮೂರು ಎಸೆತ ಬಾಕಿ ಇರುವಂತೆ ಐದು ವಿಕೆಟ್‌ಗೆ 156 ರನ್ ಗಳಿಸಿತು.

94 ರನ್‌ಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ಕೋರಿ ಆಂಡರ್ಸನ್ (ಔಟಾಗದೇ 34; 25ಎ) ಮತ್ತು 19 ವರ್ಷದೊಳಗಿನ-ವರ ಭಾರತ ತಂಡವನ್ನು ಪ್ರತಿನಿಧಿಸಿದ್ದ ಹರ್ಮೀತ್ ಸಿಂಗ್ (ಔಟಾಗದೇ 33; 13ಎ) ಆರನೇ ವಿಕೆಟ್‌ಗೆ ಮುರಿಯದ 62 ರನ್ (28ಎ) ಸೇರಿಸಿ ಗೆಲುವಿನ ರೂವಾರಿಗಳಾದರು. ಸರಣಿಯ ಎರಡನೇ ಪಂದ್ಯ ಗುರುವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 153 (ತೌಹಿದ್ ಹೃದಯ್ 58, ಮಹಮ್ಮದುಲ್ಲಾ 31, ಸ್ಟೀವನ್ ಟೇಲರ್ 9ಕ್ಕೆ 2). ಅಮೆರಿಕ 19.3 ಓವರ್‌ಗಳಲ್ಲಿ 5 ವಿಕೆಟ್‌ಗೆ 156 (ಕೋರಿ ಆಂಡರ್ಸನ್ ಔಟಾಗದೇ 34, ಹರ್ಮೀತ್ ಸಿಂಗ್ ಔಟಾಗದೇ 33; ಮುಸ್ತಫಿಜುರ್ ರೆಹಮಾನ್ 41ಕ್ಕೆ 2). **ಫಲಿತಾಂಶ:** ಅಮೆರಿಕಕ್ಕೆ ಐದು ವಿಕೆಟ್‌ಗಳ ಜಯ

ಪ್ರೊ ಲೀಗ್ ಹಾಕಿ: ಮನದೀಪ್, ಲಲಿತ್ ಮಿಂಚು

ಭಾರತಕ್ಕೆ ಶೂಟೌಟ್‌ನಲ್ಲಿ ಜಯ

ಆ್ಯಂಟ್ವರ್ಪ್, ಬೆಲ್ಜಿಯಂ (ಪಿಟಿಐ): ಭಾರತ ಹಾಕಿ ತಂಡವು ಇಲ್ಲಿ ಆರಂಭವಾದ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಅರ್ಜೆಂಟೀನಾ ವಿರುದ್ಧ ಶೂಟೌಟ್‌ನಲ್ಲಿ ಜಯಸಾಧಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 5–4ರಿಂದ ಅರ್ಜೆಂಟೀನಾ ತಂಡವನ್ನು ಮಣಿಸಿತು.

ಮನದೀಪ್ ಸಿಂಗ್ (11ನೇ ನಿಮಿಷ) ಮತ್ತು ಲಲಿತ್ ಕುಮಾರ್ ಉಪಾಧ್ಯಾಯ ಅವರು ತಲಾ ಎರಡು ಫೀಲ್ಡ್ ಗೋಲು ಗಳಿಸಿದರು.

ಇದಕ್ಕುತ್ತರವಾಗಿ ಅರ್ಜೆಂಟೀನಾದ ಲೂಕಾಸ್ ಮಾರ್ಟಿನೇಜ್ (20ನೇ ನಿಮಿಷ) ಹಾಗೂ ಥಾಮಸ್ ಡೊಮೆನ್ (60ನೇ ನಿ) ತಲಾ ಒಂದು ಗೋಲು ಗಳಿಸಿದರು. ಇದರಿಂದಾಗಿ ಸಮಬಲವಾಯಿತು.

ಶೂಟೌಟ್‌ನಲ್ಲಿ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಸುಖಜೀತ್ ಸಿಂಗ್ ತಲಾ ಎರಡು ಗೋಲು ಗಳಿಸಿದರು. ಅಭಿಷೇಕ್ ಒಂದು ಗೋಲು ಹೊಡೆದರು.

ಪಂದ್ಯದ ಮೊದಲಾರ್ಧದಲ್ಲಿ ಉಭಯ ತಂಡಗಳು ತುರುಸಿನ ಪೈಪೋಟಿ ನಡೆಸಿದವು. ವಿಶ್ವ ರ್‍ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ಭಾರತ ತಂಡವು ಮೊದಲ ಕ್ವಾರ್ಟರ್‌ನಲ್ಲಿ ಬಿಗಿಹಿಡಿತ ಸಾಧಿಸಿತು. 5ನೇ ನಿಮಿಷದಲ್ಲಿ ಸಂಜಯ್ ಗೋಲು ಗಳಿಸುವ ಪ್ರಯತ್ನ ಮಾಡಿದರು. ಆದರೆ ಅರ್ಜೆಂಟೀನಾದ ಗೋಲ್‌ಕೀಪರ್ ಥಾಮಸ್ ಸ್ಯಾಂಟಿಯಾಗೊ ಚುರುಕಾಗಿ ಪ್ರತಿಕ್ರಿಯಿಸಿ ಚೆಂಡನ್ನು ತಡೆದರು.

ಇದಾಗಿ ಆರು ನಿಮಿಷಗಳ ನಂತರ ಭಾರತದ ಮನದೀಪ್ ಅವರ ಪ್ರಯತ್ನಕ್ಕೆ ಗೋಲು ಒಲಿಯಿತು. ರಾಜಕುಮಾರ್ ಪಾಲ್ ಕೊಟ್ಟ ಪಾಸ್ ಪಡೆದ ಮನದೀಪ್ ಯಶಸ್ವಿಯಾದರು.

ನಂತರದ 15ನಿಮಿಷದಲ್ಲಿ ಲಾಸ್ ಲಿಯೊನೆಸ್ ಬಳಗವು ಗೋಲು ಗಳಿಕೆಗಾಗಿ ಆಕ್ರಮಣಶೀಲ ಆಟ ತೋರಿತು. ಆದರೆ ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಮತ್ತು ತಂಡದ ರಕ್ಷಣಾ ಆಟಗಾರರು ಎದುರಾಳಿಗಳ ದಾಳಿಯನ್ನು ಹಿಮ್ಮೆಟ್ಟಿಸಿದರು.

ಅರ್ಜೆಂಟೀನಾ ತಂಡವು ಮೂರು ಪೆನಾಲ್ಟಿ ಪಡೆಯಿತು. ಶ್ರೀಜೇಶ್ ಅವರ ಉತ್ತಮ ಕೀಪಿಂಗ್ ಮುಂದೆ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಎರಡನೇ ಕ್ವಾರ್ಟರ್‌ನ ಕೊನೆಯ ಐದು ನಿಮಿಷಗಳಲ್ಲಿ ಸತತ ಮೂರು ಪೆನಾಲ್ಟಿ-ಕಾರ್ನರ್ ಅವಕಾಶ ಗಿಟ್ಟಿಸಿದ ಭಾರತವು ಗೋಲು ಗಳಿಸಲು ವಿಫಲವಾಯಿತು.

ಮೂರನೇ ಕ್ವಾರ್ಟರ್‌ನಲ್ಲಿ ಲಲಿತ್ ಕುಮಾರ್ ಅವರು ಜರ್ಮನ್‌ಪ್ರೀತ್ ಸಿಂಗ್ ಕೊಟ್ಟ ಪಾಸ್ ಪಡೆದು ಗೋಲು ಗಳಿಸಿದರು. ಇದರಿಂದಾಗಿ 2–0 ಮುನ್ನಡೆ ಲಭಿಸಿತು.

ಆದರೆ ಪಂದ್ಯ ಮುಕ್ತಾಯದ ಹೂಟರ್ ಸದ್ದು ಮಾಡುವ ಮುನ್ನ ಎರಡು ಪೆನಾಲ್ಟಿ ಕಾರ್ನರ್‌ಗಳಲ್ಲಿ ಅರ್ಜೆಂಟೀನಾ ಗೋಲು ಗಳಿಸಿತು. ಡೊಮೆನ್ ಅವರ ಫ್ಲಿಕ್‌ಗಳ ವೇಗವನ್ನು ಅರಿಯುವಲ್ಲಿ ಶ್ರೀಜೇಶ್ ಕೂಡ ವಿಫಲರಾದರು. ಇದರಿಂದಾಗಿ ಶೂಟೌಟ್ ಘೋಷಿಸಲಾಯಿತು.

ಶುಕ್ರವಾರ ನಡೆಯಲಿರುವ ಯುರೋಪಿಯನ್ ಲೆಗ್ ನಲ್ಲಿ ಭಾರತ ತಂಡವು ಬೆಲ್ಜಿಯಂ ವಿರುದ್ಧ ಆಡಲಿದೆ.



ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ (ಬಲ) ಆಟದ ವೈಖರಿ –ಎಕ್ಸ್ ಚಿತ್ರ

ಮಹಿಳಾ ತಂಡಕ್ಕೆ ಸೋಲು

ಭಾರತ ಮಹಿಳಾ ತಂಡವು ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ 0–5ರಿಂದ ಅರ್ಜೆಂಟೀನಾ ತಂಡದ ಎದುರು ಸೋತಿತು.

ಅರ್ಜೆಂಟೀನಾದ ಜೂಲಿಟಾ ಜಂಕುನಾಸ್ (53ನೇ, 59ನೇ ನಿಮಿಷ), ಆಗಸ್ಟಿನಾ ಗಾರ್ಜೆಲಿನಿ (13ನೇ ನಿ), ವ್ಯಾಲೆಂಟಿನಾ ರೆಪೊಸೊ (24ನೇ ನಿ) ಹಾಗೂ ವಿಕ್ಟೋರಿಯಾ ಮಿರಾಂಡಾ (41ನೇ ನಿ) ಗೋಲು ಗಳಿಸಿದರು.

ಜೂನಿಯರ್ ಮಹಿಳಾ ತಂಡಕ್ಕೆ ಜಯ

ಬ್ರೆಡಾ (ನೆದರ್ಲೆಂಡ್ಸ್), (ಪಿಟಿಐ): ಹೀನಾ ಬಾನು ಮತ್ತು ಕನಿಕಾ ಸಿವಾಚ್ ಗಳಿಸಿದ ಗೋಲುಗಳ ನೆರವಿನಿಂದ ಭಾರತ ಜೂನಿಯರ್ ಮಹಿಳಾ ಹಾಕಿ ತಂಡ ಯುರೋಪ್ ಪ್ರವಾಸದ ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಬ್ರೆಡಾಸೆ ಹಾಕಿ ಕ್ಲಬ್ ತಂಡವನ್ನು 2–0 ಗೋಲುಗಳಿಂದ ಸೋಲಿಸಿತು.

ಮಂಗಳವಾರ ನಡೆದ ಈ ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ಗೋಲು ಬಂದಿರಲಿಲ್ಲ. ಮೂರು ಪೆನಾಲ್ಟಿ ಕಾರ್ನರ್ ಯತ್ನಗಳು ವಿಫಲರಾದ ಬಳಿಕ ಹೀನಾ ಭಾರತದ ಗೋಲು ಖಾತೆ ತೆರೆದರು. ಮೂರನೇ ಕ್ವಾರ್ಟರ್‌ನಲ್ಲಿ ಆತಿಥೇಯ ಬ್ರೆಡಾಸೆ ಕ್ಲಬ್ ತನ್ನೆಲ್ಲಾ ಪ್ರಯತ್ನ ಹಾಕಿತು. ಮೂರು ಪೆನಾಲ್ಟಿ ಕಾರ್ನರ್‌ಗಳು ಬಂದರೂ ಗೋಲಾಗಿ ಪರಿವರ್ತನೆಯಾಗಲಿಲ್ಲ.

ಕೊನೆಯ ಕ್ವಾರ್ಟರ್‌ನಲ್ಲಿ ಕನಿಕಾ ಸಿವಾಚ್ ಗೆಲುವಿನ ಅಂತರ ಹೆಚ್ಚಿಸಿದರು. ನಂತರ ರಕ್ಷಣೆ ಆಟಗಾರ್ತಿಯರು ಎದುರಾಳಿ ಫಾರ್ವರ್ಡ್ ಆಟಗಾರ್ತಿ-ಯರಿಗೆ ತಡೆಗೋಡೆಯಾದರು. ಭಾರತ ತಂಡ ಮುಂದಿನ ಪಂದ್ಯದಲ್ಲಿ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ಆರ್ಚರಿ: ಫೈನಲ್‌ಗೆ ಮಹಿಳಾ ತಂಡ

ಯೆಚಿಯಾನ್ (ದಕ್ಷಿಣ ಕೊರಿಯಾ), (ಪಿಟಿಐ): ಪ್ರಬಲ ಭಾರತ ಮಹಿಳಾ ಕಾಂಪೌಂಡ್ ತಂಡ, ಆರ್ಚರಿ (ಬಿಲ್ಗಾರಿಕೆ) ವಿಶ್ವ ಕಪ್‌ನಲ್ಲಿ (ಸ್ಟೇಜ್ 2) ಬುಧವಾರ ಫೈನಲ್ ತಲುಪಿತು. ಆದರೆ ಪುರುಷರ ತಂಡಕ್ಕೆ ಕಂಚಿನ ಪದಕಕ್ಕೆ ನಡೆದ ನಡೆದ ಸ್ಪರ್ಧೆಯಲ್ಲಿ ಆಸ್ಟ್ರೇಲಿಯಾ ಎದುರು ಸೋತು ಬರಿಗೈಯಲ್ಲಿ ಮರಳಿತು.

ಜ್ಯೋತಿ ಸುರೇಖಾ ವೆನ್ನಂ, ಪರ್ಣೀತ್ ಕೌರ್ ಮತ್ತು ಅದಿತಿ ಸ್ವಾಮಿ ಅವರನ್ನೊಳಗೊಂಡ ಭಾರತ ಮಹಿಳಾ ತಂಡ ಸೆಮಿ-ಫೈನಲ್‌ನಲ್ಲಿ 233–229 ರಿಂದ ಅಮೆರಿಕ ತಂಡವನ್ನು ಸೋಲಿಸಿತು. ಇದೇ ತಂಡ ಶಾಂಘೈನಲ್ಲಿ ಕಳೆದ ತಿಂಗಳು ನಡೆದ ವಿಶ್ವಕಪ್ ಸ್ಟೇಜ್ 1ನಲ್ಲಿ ಚಿನ್ನದ ಪದಕ ಗಳಿಸಿತ್ತು.

ಶನಿವಾರ ಚಿನ್ನದ ಪದಕಕ್ಕೆ ನಡೆಯುವ ಫೈನಲ್ ಪಂದ್ಯದಲ್ಲಿ ಭಾರತ ತಂಡವು, ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಟರ್ಕಿಯನ್ನು ಎದುರಿಸಲಿದೆ. ಟರ್ಕಿ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಚಿನ್ನಕ್ಕೆ ನೆಚ್ಚಿನ ತಂಡವಾಗಿದ್ದ ಆತಿಥೇಯ ದಕ್ಷಿಣ ಕೊರಿಯಾ ತಂಡವನ್ನು 234–233 ರಿಂದ ಮಣಿಸಿತು.

ಅರ್ಹತಾ ಸುತ್ತಿನಲ್ಲಿ ಎರಡನೇ ಸ್ಥಾನ ಪಡೆದಿದ್ದ ಭಾರತ ಮಹಿಳಾ ತಂಡ ಕ್ವಾ-ರ್ಟರ್‌ಫೈನಲ್‌ನಲ್ಲಿ ಬೈ ಪಡೆದಿತ್ತು.

20 ವರ್ಷದೊಳಗಿನವರ ಫುಟ್‌ಬಾಲ್: ದೆಹಲಿಗೆ ಪ್ರಶಸ್ತಿ, ಕರ್ನಾಟಕ ರನ್ನರ್ ಅಪ್

ನಾರಾಯಣಪುರ (ಛತ್ತೀಸಗಢ), (ಪಿಟಿಐ): ಡೆಲ್ಲಿ ತಂಡ ಫೈನಲ್‌ನಲ್ಲಿ ಕರ್ನಾಟಕ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 4–3 ಗೋಲುಗಳಿಂದ ಸೋಲಿಸಿ ಮೊದಲ ಸ್ವಾಮಿ ವಿವೇಕಾನಂದ 20 ವರ್ಷದೊಳಗಿನವರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿ-ಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ರಾಮಕೃಷ್ಣ ಮಿಷನ್ ಆಶ್ರಮ ಮೈದಾನದಲ್ಲಿ ಬುಧವಾರ ನಡೆದ ಈ ಪಂದ್ಯ ರೋಚಕವಾಗಿದ್ದು ನಿಗದಿ ಅವಧಿಯ ಆಟದ ನಂತರ ಸ್ಕೋರ್ 3–3 ಗೋಲುಗಳಿಂದ ಸಮನಾಗಿತ್ತು. 40 ದಿನ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ 32 ತಂಡಗಳು ಭಾಗ-ವಹಿಸಿದ್ದವು. ದೆಹಲಿ ತಂಡವು ಮೂರು ಸಲ ಹಿನ್ನಡೆಯಿಂದ ಚೇತರಿಸಿ ಪಂದ್ಯವನ್ನು ‘ಪೆನಾಲ್ಟಿ’ಗೆ ಬೆಳೆಸುವಲ್ಲಿ ಯಶಸ್ವಿ ಆಯಿತು.

ಕರ್ನಾಟಕ 12ನೇ ನಿಮಿಷ ಇಶಾನ್ ರಘುನಂದ ಮೂಲಕ ಮುನ್ನಡೆಯಿತು. 18ನೇ ನಿಮಿಷ ದೆಹಲಿ ತಂಡದ ರಮೇಶ್ ಚೆಟ್ರಿ ಅವರ ಗೋಲು ಯತ್ನವನ್ನು ಉತ್ತಮವಾಗಿ ತಡೆದಿದ್ದ ಕರ್ನಾಟಕ ಗೋಲ್ ಕೀಪರ್ ಸ್ಯಾಮ್ ಜಾರ್ಜ್, 43ನೇ ನಿಮಿಷ ಎದುರಾಳಿ ತಂಡ ಸಮ ಮಾಡುವುದನ್ನು ತಪ್ಪಿಸಲು ಆಗಲಿಲ್ಲ. ನಾಯಕ ಲಾಮ್ಲಲಿಯಾನ್ ದೆಹಲಿ ಪರ ಮೊದಲ ಗೋಲು ಗಳಿಸಿದರು.

ಉತ್ತರಾರ್ಧದಲ್ಲಿ ಉತ್ತಮ ಹೋರಾಟ ಕಂಡುಬಂತು. ಆದರೆ ಮತ್ತೊಮ್ಮೆ ಕರ್ನಾಟಕ ಮುನ್ನಡೆಯಿತು. ನಿಹಾರ್ ಅವರ ಪಾಸ್‌ನಲ್ಲಿ 30 ಯಾರ್ಡ್ ದೂರದಿಂದ ನಿತಿನ್ ಪಾಲ್ ಎಡಗಾಲಿನಿಂದ ಒದ್ದ ಚೆಂಡು ಗೋಲಿನೊಳಕ್ಕೆ ಹೋಯಿತು. ಕರ್ನಾಟಕಕ್ಕೆ ಮತ್ತೆರಡು ಅವಕಾಶಗಳು ದೊರೆತರೂ (ಕ್ರಮವಾಗಿ ನಿತಿನ್ ಪಾಲ್, ಸೈಖೋಮ್ ಬೋರಿಸ್ ಸಿಂಗ್ ಅವರಿಗೆ) ದೆಹಲಿ ಗೋಲ್‌ಕೀಪರ್ ಮಕ್ಕರ್ ಅವರ ಉತ್ತಮ ತಡೆಗಳಿಂದ ಗೋಲು ತಪ್ಪಿದವು.

71ನೇ ನಿಮಿಷ ದೆಹಲಿ ತಂಡದ ಸಬ್‌ಸ್ಟಿಟ್ಯೂಟ್ ಆಟಗಾರ ಸಂಖಿಲ್ ದರ್ಪೊಲ್ ತುಯಿಶಾಂಗ್ ಸ್ಕೋರ್ 2–2 ಸಮ ಮಾಡಿದರು. ಹೆಚ್ಚುವರಿ ಅವಧಿಯ ಮೊದಲ ನಿಮಿಷದಲ್ಲೇ ಕರ್ನಾಟಕ ರಘುನಂದ ಮೂಲಕ ಮತ್ತೆ ಮುನ್ನಡೆ ಪಡೆಯಿತು. ಆದರೆ ತುಯಿಶಾಂಗ್ ಮತ್ತೊಮ್ಮೆ ದೆಹಲಿ ಪರ (90 + 8) ಸ್ಕೋರ್ ಸಮಬಲಗೊಳಿಸಿದರು.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್: ಪದಕ ಗಳಿಕೆಯಲ್ಲಿ ಭಾರತದ ದಾಖಲೆ

ಷಾಟ್‌ಪಟ್ ಚಿನ್ನ ಗೆದ್ದ ಸಚಿನ್ ಖಿಲಾರಿ

ಕೋಬೆ (ಜಪಾನ್), (ಪಿಟಿಐ): ಭಾರತದ ಸಚಿನ್ ಸರ್ಜೆರಾವ್ ಖಿಲಾರಿ ಅವರು ವಿಶ್ವ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಪುರುಷರ ಷಾಟ್‌ಪಟ್ (ಎಫ್‌46) ಸ್ಪರ್ಧೆಯಲ್ಲಿ ಬುಧವಾರ ಏಷ್ಯನ್ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದಕೊಂಡರು. ಭಾರತ ಈ ಕೂಟದಲ್ಲಿ ಪದಕ ಗಳಿಕೆಯಲ್ಲಿ ಹಿಂದಿನ ದಾಖಲೆಯನ್ನು ಮೀರಿನಿಂತಿತು.

ಧರಮ್‌ವೀರ್ ಪುರುಷರ ಕ್ಲಬ್ ಥ್ರೊ (ಎಫ್ 51 ಕೆಟಗರಿ) ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಭಾರತ ಈವರೆಗೆ 11 ಪದಕಗಳನ್ನು ಗೆದ್ದುಕೊಂಡಿದ್ದು, ಇದರಲ್ಲಿ ಐದು ಚಿನ್ನ, ನಾಲ್ಕು ಬೆಳ್ಳಿ, ಮೂರು ಕಂಚಿನ ಪದಕಗಳು ಒಳಗೊಂಡಿದೆ. ಈ ಹಿಂದೆ 2023ರ ಪ್ಯಾರಿಸ್ ಚಾಂಪಿ-ಯನ್‌ಷಿಪ್‌ನಲ್ಲಿ 10 ಪದಕಗಳನ್ನು ಜಯಿಸಿದ್ದು ಇದುವರೆಗಿನ ಅತ್ಯುತ್ತಮ ಸಾಧನೆ. ಅಲ್ಲಿ ಭಾರತ ಮೂರು ಚಿನ್ನ, ನಾಲ್ಕು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಗಳಿಸಿತ್ತು.

ಸಚಿನ್ ಷಾಟ್‌ಪಟ್‌ಅನ್ನು 16.30 ಮೀ. ದೂರ ಎಸೆದು, ಕಳೆದ ವರ್ಷ ಪ್ಯಾರಿಸ್‌ನಲ್ಲಿ ತಾವೇ ಸ್ಥಾಪಿಸಿದ್ದ ಏಷ್ಯನ್ ದಾಖಲೆಯನ್ನು (16.21 ಮೀ) ಸುಧಾರಿಸಿದರು. ಒಂದು ಅಥವಾ ಎರಡೂ ಕೈಗಳ ಚಲನಶಕ್ತಿಯನ್ನು ಭಾಗಶಃ ಕಳೆದುಕೊಂಡ ಅಥ್ಲೀಟುಗಳು ಎಫ್‌46 ವಿಭಾಗದ ವ್ಯಾಪ್ತಿಗೆ ಬರುತ್ತಾರೆ. ಇವರು ಸೊಂಟ ಮತ್ತು ಕಾಲಿನ ಶಕ್ತಿ ಬಳಸಿ ಥ್ರೋಗಳನ್ನು ಮಾಡಬೇಕಾಗು-ತ್ತದೆ.

ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಕರಗಣಿ ಗ್ರಾಮದ ಸಚಿನ್ ಅವರು ಶಾಲಾ ದಿನಗಳಲ್ಲಿ ಆದ ಅವಘಡದಲ್ಲಿ ಎಡಗೈ ನಿಯಂತ್ರಣ ಕಳೆದುಕೊಂಡಿದ್ದಾರೆ. ಗ್ಯಾಂಗ್ರೀನ್ ಪರಿಣಾಮ ಮೊಣಕೈಯಿಂದ ಕೆಳಗಿನ ಸ್ನಾಯು ಕಳೆದುಕೊಂಡಿದ್ದಾರೆ. ಹಲವು ಶಸ್ತ್ರಚಿಕಿತ್ಸೆ ನಡೆಸಿದರೂ ಅದು ಮೊದಲಿನಂತಾಗಿಲ್ಲ.

ಪದಕ ಪಟ್ಟಿಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದು, ಬ್ರೆಜಿಲ್ ನಂತರದ ಸ್ಥಾನದಲ್ಲಿದೆ.

‘ನಾನು ಚಿನ್ನದ ನಿರೀಕ್ಷೆಯಲ್ಲಿದ್ದೆ. ಗೆದ್ದ ಕಾರಣ ಸಂತಸವಾಗಿದೆ. ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದು, ಅಲ್ಲೂ ಚಿನ್ನ ಗೆಲ್ಲುವ ವಿಶ್ವಾಸವಿದೆ’ ಎಂದು ಸಚಿನ್ ಕೋಬೆಯಿಂದ ಪಿಟಿಐಗೆ ತಿಳಿಸಿದರು.

ಕೂಟ ಮುಗಿಯಲು ಇನ್ನೂ ಮೂರು ದಿನಗಳು ಇದ್ದು, ಭಾರತ ಇನ್ನಷ್ಟು ಪದಕಗಳನ್ನು ಗೆಲ್ಲುವ ಸಾಧ್ಯತೆಯಿದೆ. ಈ ಬಗ್ಗೆ ಆಶಾವಾದಿಯಾಗಿದ್ದೇನೆ ಎಂದು ಮುಖ್ಯ ಕೋಚ್ ಸತ್ಯನಾರಾಯಣ ಹೇಳಿದರು.



ಚಿನ್ನ ಗೆದ್ದ ಭಾರತದ ಸಚಿನ್ ಸರ್ಜೆರಾವ್ ಖಿಲಾರಿ –ಎಕ್ಸ್ ಚಿತ್ರ

ರಾಜ್ಯ ರ್‍ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್

ಪ್ರೀ ಕ್ವಾರ್ಟರ್ ಫೈನಲ್‌ಗೆ ಪ್ರಾಪ್ತಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಉಡುಪಿಯ ಪ್ರಾಪ್ತಿ ಕುಮಾರ್, ಇಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಬುಧವಾರ ನಡೆದ 17 ವರ್ಷದೊಳಗಿನ ಬಾಲಕಿಯರ ವಿಭಾಗದ ಪಂದ್ಯದಲ್ಲಿ ಪ್ರಾಪ್ತಿ 21-15, 17-21, 21-8 ರಿಂದ ಮೂರನೇ ಶ್ರೇಯಾಂಕದ ಗೌರಿ ಭಟ್ ಅವರನ್ನು ಸೋಲಿಸಿದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರಿನ ಲಕ್ಷ್ಯ ರಾಜೇಶ್ 21-16, 21-8 ರಿಂದ 10ನೇ ಶ್ರೇಯಾಂಕದ ಖುಷಿ ಶಾ ಎದುರು ಗೆದ್ದರು.

ಇತರ ಪಂದ್ಯಗಳಲ್ಲಿ ಧಾರವಾಡದ ಅಭಿಶ್ರೀ 21-7, 16-21, 21-19 ರಿಂದ ದಿಯಾ ಶಿವರಾಜ್ ವಿರುದ್ಧ, ಬೆಂಗಳೂರಿನ ನೇಹಾ ಕೃಪೇಶ್ 21-15, 21-8 ರಿಂದ ಅನ್ವಿ ಬೋರಾ ಎದುರು ವಿಜಯಿಯಾದರು.

17 ವರ್ಷದೊಳಗಿನ ಬಾಲಕರ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಬೆಂಗಳೂರಿನ ರೆಹಾನ್ ಆರಿಜ್ 16-21, 21-18, 22-20 ರಿಂದ 16ನೇ ಶ್ರೇಯಾಂಕದ ಹರ್ಷದ್ ಶಾದಿಶ್ ಅವರನ್ನು ಮಣಿಸಿದರು.

ಇತರ ಪಂದ್ಯಗಳಲ್ಲಿ ಚಾಮರಾಜನಗರದ ನೀಲೇಶ್ ಜಯರಾಜ್ 21-15, 21-18 ರಿಂದ ಪಿಯೂಷ್ ತ್ರಿಪಾಠಿ ಎದುರು, ಮೈಸೂರಿನ ಗೌರವ್ ಆರ್. 21-10, 21-15 ರಿಂದ ಆಡ್ರಿಯನ್ ಎಡ್ವರ್ಡ್ ವಿರುದ್ಧ ಜಯಿಸಿದರು.

17 ವರ್ಷದೊಳಗಿನ ಬಾಲಕಿಯರ ಡಬಲ್ಸ್‌ನ ಎರಡನೇ ಸುತ್ತಿನ ಪೈಪೋಟಿಯಲ್ಲಿ ಬೆಂಗಳೂರಿನ ಬಿ.ಇಶಿಕಾ ಮತ್ತು ಲಕ್ಷ್ಯ ರಾಜೇಶ್ 21-7, 21-7 ರಿಂದ ಪಲ್ಲವಿ ಫುಕಾನ್ ಮತ್ತು ವಾನಶಿ ಚೌಹಾಣ್ ಎದುರು, ಮೈಸೂರಿನ ಮೌಲ್ಯ ಎಂ.ಎನ್ ಮತ್ತು ರಿಯಾ ಪಟೇಲ್ 21-15, 21-18 ರಿಂದ ದೀಕ್ಷಾ ಕೆ.ಎಚ್ ಮತ್ತು ನಮ್ರತಾ ಎನ್.ರಾಜು ವಿರುದ್ಧ ಗೆದ್ದರು.

17 ವರ್ಷದೊಳಗಿನ ಬಾಲಕರ ಡಬಲ್ಸ್‌ನ ಮೊದಲ ಸುತ್ತಿನ ಹೋರಾಟಗಳಲ್ಲಿ ಬೆಂಗಳೂರಿನ ಇವಾನ್ ಫರ್ನಾಂಡಿಸ್ ಮತ್ತು ವಿಹಾನ್ ಅರೋರಾ 21-12, 21-17 ರಿಂದ ಅಭಯ್ ಸೂರ್ಯವಂಶಿ ಮತ್ತು ಅಯಾನ್ ಖಾನ್ ಎದುರು, ಮೈಸೂರಿನ ಅಮಿತ್ ರಾಜ್ ಮತ್ತು ಹಾರ್ದಿಕ್ ದಿವ್ಯಾಂಶ್ 21-9, 21-12 ರಿಂದ ಆಯುಷ್ ಸಿಂಗ್ ಮತ್ತು ಸಾಯಿ ಶ್ರವಣ್ ವಿರುದ್ಧ ಗೆಲುವು ಕಂಡರು.



ಬಾಲಕಿಯರ ಡಬಲ್ಸ್ ವಿಭಾಗದ ಪಂದ್ಯದಲ್ಲಿ ಗೆದ್ದ ಬಿ.ಇಶಿಕಾ ಮತ್ತು ಲಕ್ಷ್ಯ ರಾಜೇಶ್ ಅವರ ಆಟದ ವೈಖರಿ –ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ್

ಬ್ಯಾಡ್ಮಿಂಟನ್: ಎರಡನೇ ಸುತ್ತಿಗೆ ಸಿಂಧು

ಕ್ವಾಲಾಲಂಪುರ (ಪಿಟಿಐ): ವಿರಾಮದ ನಂತರ ಪುನರಾಗಮನ ಮಾಡಿರುವ ಐದನೇ ಶ್ರೇಯಾಂಕದ ಪಿ.ವಿ.ಸಿಂಧು, ಮಲೇಷ್ಯಾ ಓಪನ್ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಸ್ಕಾಟ್ಲೆಂಡ್‌ನ ಕಿರ್ಸ್ಟಿ ಗಿಲ್ಮರ್ ಅವರನ್ನು ನೇರ ಆಟಗಳಿಂದ ಸೋಲಿಸಿ ಎರಡನೇ ಸುತ್ತನ್ನು ತಲುಪಿದರು.

ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನ-ದಲ್ಲಿರುವ ಸಿಂಧು ಅವರಿಗೆ ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯವನ್ನು 21–17, 21–16 ರಲ್ಲಿ ಗೆದ್ದುಕೊಳ್ಳಲು ಮುಕ್ಕಾಲು ಗಂಟೆ ಬೇಕಾಯಿತು. ಕಿರ್ಸ್ಟಿ ಅವರು ವಿಶ್ವ ಕ್ರಮಾಂಕದಲ್ಲಿ 22ನೇ ಸ್ಥಾನದಲ್ಲಿದ್ದಾರೆ. 2022ರಲ್ಲಿ ಸಿಂಗಪುರ ಓಪನ್ ಗೆದ್ದ ನಂತರ ಮೊದಲ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಭಾರತದ 28 ವರ್ಷದ ಆಟಗಾರ್ತಿ, ಮುಂದಿನ ಸುತ್ತಿನಲ್ಲಿ ಕೊರಿಯಾದ ಸಿಮ್ ಯು ಜಿನ್ ಅವರನ್ನು ಎದುರಿಸಲಿದ್ದಾರೆ.

ಯುವ ಆಟಗಾರ್ತಿ ಅಶ್ಮಿತಾ ಚಾಲಿಹಾ ಅವರು 21-17 21-16 ಅಂತರದಲ್ಲಿ ಚೀನಾ ತೈಪೆಯ ಕ್ವಾಲಿಫೈಯರ್ ಆಟಗಾರ್ತಿ ಸಿಹ್ ಯುನ್ ಲಿನ್ ವಿರುದ್ಧ ಗೆಲುವು ಸಾಧಿಸಿ ಮುನ್ನಡೆದರು. ಅಶ್ಮಿತಾ ಎರಡನೇ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಅಮೆರಿಕದ ಬೀವೆನ್ ಜಾಂಗ್ ಅವರನ್ನು ಎದುರಿಸಲಿದ್ದಾರೆ. ಆದರೆ, ಉನ್ನತಿ ಹೂಡಾ ಮತ್ತು ಆಕರ್ಷಿ ಕಶ್ಯಪ್ ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿಯೇ ನಿರಾಸೆ ಅನುಭವಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಕಿರಣ್ ಜಾರ್ಜ್ ಶುಭಾರಂಭ ಮಾಡಿದರು. ಅವರು ಆರಂಭಿಕ ಸುತ್ತಿನಲ್ಲಿ 21–16, 21–17ರಿಂದ ಜಪಾನ್‌ನ ಟಕುಮಾ ಒಬಯಾಶಿ ವಿರುದ್ಧ ಗೆಲುವು ಸಾಧಿಸಿದರು.

ಪುರುಷರ ಡಬಲ್ಸ್‌ನಲ್ಲಿ ಕೃಷ್ಣ ಪ್ರಸಾದ್ ಗರಗ ಮತ್ತು ಕೆ. ಸಾಯಿ ಪ್ರತೀಕ್ ಜೋಡಿಯು 23-21 21-11ರಿಂದ ಚೀನಾ ತೈಪೆಯ ಮಿಂಗ್ ಚೆ ಲು ಮತ್ತು ಟ್ಯಾಂಗ್ ಕೈ ವೀ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆಯಿತು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಬಿ.ಸುಮೀತ್ ರೆಡ್ಡಿ ಮತ್ತು ಎನ್. ಸಿಕ್ಕಿ ರೆಡ್ಡಿ ಅವರೂ ಎರಡನೇ ಸುತ್ತಿಗೆ ಮುನ್ನಡೆದರು.



ಭಾರತದ ಪಿ.ವಿ. ಸಿಂಧು